ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮಾರ್ಚ್ 31 ಮಂಗಳವಾರ 2026

ಸಂಪುಟ: 46 | ಸಂಚಿಕೆ: 339 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮಾರ್ಚ್ 31 ಮಂಗಳವಾರ 2026

ಸಂಪುಟ: 46 | ಸಂಚಿಕೆ: 339 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ವಿಜೃಂಭಣೆಯ ಶ್ರೀಕಂಠೇಶ್ವರಸ್ವಾಮಿ ಗೌತಮ ಪಂಚ ಮಹಾರಥೋತ್ಸವ

● ರಥೋತ್ಸವಕ್ಕೆ ಶಾಸಕ ದರ್ಶನ್ ಚಾಲನೆ ● ರಥೋತ್ಸವ ಕಣ್ತುಂಬಿಕೊಂಡ ಲಕ್ಷಾಂತರ ಭಕ್ತರು



ನಂಜನಗೂಡಿನಲ್ಲಿ ಸೋಮವಾರ ನಡೆದ ಐತಿಹಾಸಿಕ ಗೌತಮ ಪಂಚ ರಥೋತ್ಸವದಲ್ಲಿ ಲಕ್ಷಾಂತರ ಭಕ್ತ ಸಾಗರದ ಮಧ್ಯೆ ಶ್ರೀಕಂಠೇಶ್ವರಸ್ವಾಮಿ ರಥ(ಗೌತಮ ರಥ) ಸಾಗುತ್ತಿರುವ ವಿಹಂಗಮ ನೋಟ.

ನಂಜನಗೂಡು, ಮಾ.30(ರಂಗಸ್ವಾಮಿ, ಎಂಟಿವೈ)- ಗರಳಪುರಿ, ದಕ್ಷಿಣಕಾಶಿ ಎಂದೇ ಪ್ರಸಿದ್ಧಿ ಪಡೆದಿರುವ, ಕಪಿಲಾ ನದಿ ದಡದಲ್ಲಿ ವಿಶ್ವವಿಖ್ಯಾತ ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯ ಗೌತಮ ಪಂಚ ಮಹಾರಥೋತ್ಸವ ಸೋಮವಾರ ಬೆಳಗ್ಗೆ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಪ್ರತಿ ವರ್ಷ ನಂಜನಗೂಡಿನಲ್ಲಿ ನಡೆಯುವ ದೊಡ್ಡಜಾತ್ರೆಯ ಪಂಚ ಮಹಾ ರಥೋತ್ಸವ ಕಣ್ತುಂಬಿಕೊಳ್ಳಲು ರಾಜ್ಯ ಮಾತ್ರವಲ್ಲದೆ, ಹೊರ ರಾಜ್ಯಗಳಿಂದಲೂ ಭಕ್ತರು ಭಾರೀ ಸಂಖ್ಯೆಯಲ್ಲಿ ಆಗಮಿಸುವ ವಾಡಿಕೆ ಇದ್ದು, ಇಂದು ನಡೆದ ಪಂಚ ಮಹಾ ರಥೋತ್ಸವದಲ್ಲಿ ಭಾಗಿಯಾಗಲು ಮೈಸೂರು, ಬೆಂಗಳೂರು, ಮಂಡ್ಯ, ಚಾಮರಾಜನಗರ ಮಾತ್ರವಲ್ಲದೇ ತಮಿಳುನಾಡು, ಕೇರಳ ಸೇರಿದಂತೆ ವಿವಿಧೆಡೆಯಿಂದ ಸಾಗರೋಪಾದಿಯಲ್ಲಿ ಆಗಮಿಸಿದ್ದ ಲಕ್ಷಾಂತರ ಭಕ್ತರು ಕಳೆದ ರಾತ್ರಿಯೇ ನಂಜನಗೂಡಿನ ದೇವಾಲಯದ ಸುತ್ತ ಹಾಗೂ ರಥದ ಬೀದಿಯಲ್ಲಿ ಜಮಾಯಿಸಿ ರಥೋತ್ಸವ ಕಣ್ತುಂಬಿಕೊಂಡರು. ರಥಗಳನ್ನು ಎಳೆದು ಸಾರ್ಥಕತೆ ಮೆರೆದರು.

ವಿಶೇಷ ಪೂಜೆ: ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಬೆಳಗ್ಗೆ 2 ಗಂಟೆಯಿಂದಲೇ ದೇವಾಲಯದಲ್ಲಿ ಶ್ರೀಕಂಠೇಶ್ವರಸ್ವಾಮಿಗೆ ಕ್ಷೀರಾಭಿಷೇಕ, ಫಲಪಂಚಾಮೃತಾಭಿಷೇಕ, ಮಹೋನ್ನತ ಪೂರ್ವಕ ಏಕದಶಾವರ ರುದ್ರಾಭಿಷೇಕ, ಪ್ರಾತಃಕಾಲ ಪೂಜೆ ನೆರವೇರಿಸಿ, ನಂತರ ಹೋಮ ಹವನಾದಿಗಳನ್ನು ನೆರವೇರಿಸಿದರು. ನಂತರ ರಥದ ಬಳಿ ಬಲಿ ಪೂಜೆ ನೆರವೇರಿಸಲಾಯಿತು. ▶ 10ನೇ ಪುಟಕ್ಕೆ

ಜಾತ್ರೆಗೆ ಬಂದಿದ್ದ ವ್ಯಕ್ತಿ ಹೃದಯಾಘಾತದಿಂದ ಸಾವು

ನೂಕು ನುಗ್ಗಲಲ್ಲಿ ಬಿದ್ದು ತಂದೆ-ಮಗನಿಗೆ ತೀವ್ರ ಗಾಯ

ನಂಜನಗೂಡು: ಶ್ರೀಕಂಠೇಶ್ವರಸ್ವಾಮಿ ದೊಡ್ಡಜಾತ್ರೆಗೆ ಬಂದಿದ್ದ ಭಕ್ತರೊಬ್ಬರು ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ಜರುಗಿದೆ. ಬೆಂಗಳೂರಿನ ಮಾಗಡಿ ನಿವಾಸಿ ನಂಜುಂಡಸ್ವಾಮಿ (58) ಮೃತ ದುರ್ದೈವಿ. ಇವರು ಕಿಡ್ನಿ ವೈಫಲ್ಯದಿಂದ ಡಯಾಲಿಸಿಸ್ ಪಡೆಯುತ್ತಿದ್ದರು ಎನ್ನಲಾಗಿದ್ದು, ಸೋಮವಾರ ದೊಡ್ಡ ರಥ ಚಲಿಸುವ ವೇಳೆ ದೇವಾಲಯದ ಮೂಲೆ ಗಣಪತಿ ದೇವಸ್ಥಾನದ ಎದುರು ಕುಸಿದು ಬಿದ್ದ ಅವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.



ನಂಜುಂಡಸ್ವಾಮಿ

ಗೌತಮ ಪಂಚ ಮಹಾ ರಥೋತ್ಸವಕ್ಕೆ ಚಾಲನೆ ನೀಡುತ್ತಿದ್ದ ವೇಳೆ ನಿರೀಕ್ಷೆಗೂ ಮೀರಿದ ಜನ ಸೇರಿದ ಕಾರಣದಿಂದ ನೂಕು ನುಗ್ಗಲು ಉಂಟಾಗಿ ಕೆಳಗೆ ಬಿದ್ದು ನಗರದ ಶಂಕರಪುರ ಬಡಾವಣೆಯ ರಂಗಸ್ವಾಮಿ (52), ಆತನ ಪುತ್ರ ಅಪ್ಪು (13) ಗಾಯಗೊಂಡಿದ್ದಾರೆ. ದೇವಾಲಯದ ಮುಂಭಾಗದ ಲಾಡು ಪ್ರಸಾದ ನೀಡುವ ಕೌಂಟರ್ ಬಳಿ ನೂಕು ನುಗ್ಗಲು ಉಂಟಾಗಿ ಕೆಳಗೆ ಬಿದ್ದ ಅವರ ಮೇಲೆ ಹತ್ತು ಜನ ಬಿದ್ದು ತೀವ್ರವಾಗಿ ಗಾಯಗೊಂಡಿದ್ದು, ಅವರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ದಾಸವಾಳದ ಹೂ ನುಂಗಿ ಮಗು ಸಾವು



ಮೈಸೂರು, ಮಾ.30(ಎಂಕೆ)- ದಾಸವಾಳ ಹೂ ನುಂಗಿ ಏಳು ತಿಂಗಳ ಹಸುಗೂಸು ಮೃತಪಟ್ಟಿರುವ ಹೃದಯ ವಿದ್ರಾವಕ ಘಟನೆ ಹುಣಸೂರು ತಾಲೂಕಿನ ದೊಡ್ಡ ಹೆಜ್ಜೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಸುದರ್ಶನ್ ಮತ್ತು ನವ್ಯ ದಂಪತಿಯ ಆರೂವರೆ ತಿಂಗಳ ಚಿನ್ಮಯ್ ಗೌಡ ಮೃತಪಟ್ಟ ನತದೃಷ್ಟ ಮಗು. ಶನಿವಾರ(ಮಾ.28) ಬೆಳಗ್ಗೆ ಮನೆಯ ಹೊಸ್ತಿಲಿಗೆ ಪೂಜೆಗಾಗಿ ದಾಸವಾಳದ ಹೂ ಇಡಲಾಗಿತ್ತು. ಈ ವೇಳೆ ಅಣ್ಣನೊಂದಿಗೆ ಆಟವಾಡುತ್ತಿದ್ದ ಮಗು ಚಿನ್ಮಯ್, ದಾಸ ವಾಳದ ಹೂವನ್ನು ತಿಂದಿದೆ. ಕೂಡಲೇ ಇದನ್ನು ಗಮನಿಸಿ, ಮಗುವಿನ ಬಾಯಿಂದ ಅದನ್ನು ತೆಗೆಯಲು ಯತ್ನಿಸಲಾಗಿದೆ ಆದರೆ, ಹೂವಿನ ಭಾಗ ಮಗುವಿನ ಶ್ವಾಸಕೋಶಕ್ಕೆ ಸಿಕ್ಕಿಕೊಂಡು ಉಸಿರಾಟ ಸಮಸ್ಯೆ ಕಾಣಿಸಿಕೊಂಡಿದೆ.

ಇದರಿಂದ ಗಾಬರಿಗೊಂಡ ಪೋಷಕರು ಮಗುವನ್ನು ಹನಗೂಡಿನ ಸರಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದರಾದರೂ ಚಿಕಿತ್ಸೆ ಫಲಿಸದೆ ಮಗು ಮೃತಪಟ್ಟಿದೆ.

ನಾಳೆಯಿಂದ ರಾಜ್ಯದಲ್ಲಿ ಜಾತಿಯೊಂದಿಗೆ ಜನಗಣತಿ

● ಎರಡು ಹಂತಗಳಲ್ಲಿ ಪ್ರಕ್ರಿಯೆ ● ಮನೆಯಲ್ಲೇ ಕುಳಿತು ಮಾಹಿತಿ ನೀಡಲು ಅವಕಾಶ



ಬೆಂಗಳೂರು, ಮಾ. 30(ಕೆಎಂಶಿ)- ದೇಶದ ಜನತೆಗೆ ಮೂಲಸೌಕರ್ಯ, ಅಭಿವೃದ್ಧಿ ಹಾಗೂ ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮ ರೂಪಿಸುವ ಉದ್ದೇಶದಿಂದ ಏಪ್ರಿಲ್ 1ರಿಂದ ರಾಜ್ಯಾದ್ಯಂತ ಜನಗಣತಿ ಕಾರ್ಯ ಆರಂಭಗೊಳ್ಳಲಿದೆ.

ಶಿಕ್ಷಣ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆ ಬಲಗೊಳಿಸುವ, ರಾಷ್ಟ್ರವನ್ನು ಜಾಗತಿಕವಾಗಿ ಮುಂಚೂಣಿಗೆ ತರುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ, ಜನಗಣತಿ ಹಾಗೂ ಜಾತಿಗಣತಿಯನ್ನು ಎರಡು ಹಂತಗಳಲ್ಲಿ ಕೈಗೊಳ್ಳಲು ಚಾಲನೆ ನೀಡಿದ್ದಾರೆ. ಹದಿನೈದು ವರ್ಷಗಳ ನಂತರ ನಡೆಯುತ್ತಿರುವ ಈ ಮಹತ್ವದ ಕಾರ್ಯಕ್ಕೆ ಶಿಕ್ಷಕರು ಹಾಗೂ ಇತರೆ ಸರ್ಕಾರಿ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತಿದೆ. 2025-26ನೇ ಸಾಲಿನ ಪ್ರಾಥಮಿಕ ಮತ್ತು ಪದವಿಪೂರ್ವ ಶಿಕ್ಷಣದ ಪರೀಕ್ಷಾ ಕಾರ್ಯ ಮುಗಿಯುತ್ತಿದ್ದಂತೆ ಜನಗಣತಿ ಕಾರ್ಯ ಏಪ್ರಿಲ್ 1ರಿಂದ 15ರವರೆಗೆ ನಡೆಯಲಿದೆ.



ನರೇಂದ್ರ ಮೋದಿ

ಏಪ್ರಿಲ್ 16ರಿಂದ ಮೇ 15ರವರೆಗೆ 2ನೇ ಹಂತದ ಗಣತಿಯಲ್ಲಿ ನಿಯೋಜಿತಗೊಂಡ ಅಧಿಕಾರಿ ಮತ್ತು ನೌಕರರು ಮನೆ-ಮನೆಗೆ ತೆರಳಿ ಗಣತಿ ಕೈಗೊಳ್ಳಲಿದ್ದಾರೆ.

1931ರ ನಂತರ ಇದೇ ಮೊದಲ ಬಾರಿಗೆ ರಾಷ್ಟ್ರವ್ಯಾಪಿ ಜಾತಿ ಆಧಾರಿತ ಎಣಿಕೆ ಮಾಡಲಾಗುವುದು ಎಂದು ಕೇಂದ್ರ ಸರ್ಕಾರ ಘೋಷಿಸಿದೆ. ಎರಡನೇ ಹಂತದಲ್ಲಿ 2027ರಲ್ಲಿ ಜಾತಿ ಆಧಾರಿತ ಜನಗಣತಿ ನಡೆಯಲಿದ್ದು, ಮಾರ್ಚ್ 1, 2027 ಅನ್ನು ಉಲ್ಲೇಖಿತ ದಿನಾಂಕವಾಗಿ ನಿಗದಿಪಡಿಸಲಾಗಿದೆ. ರಾಷ್ಟ್ರವ್ಯಾಪಿ ಈ ಬೃಹತ್ ಕಾರ್ಯಕ್ಕೆ ಸುಮಾರು 11,718.24 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ.

ಸುಮಾರು 30 ರಿಂದ 34 ಲಕ್ಷ ಗಣತಿದಾರರು ಮತ್ತು ಮೇಲ್ವಿಚಾರಕರು ಈ ಕಾರ್ಯಕ್ಕೆ ನಿಯೋಜನೆಗೊಳ್ಳಲಿದ್ದಾರೆ. ಜನಗಣತಿ ಮತ್ತು ಜಾತಿಗಣತಿ ಮೂಲಕ ಗ್ರಾಮ, ಪಟ್ಟಣ ಮತ್ತು ವಾರ್ಡ್‌ಮಟ್ಟದಲ್ಲಿ ಸೂಕ್ಷ್ಮ ದತ್ತಾಂಶವನ್ನು ಪಡೆಯುವುದಲ್ಲದೆ, ಕಲ್ಯಾಣ ಯೋಜನೆಗಳನ್ನು ರೂಪಿಸಲು ಹಾಗೂ ನಿರ್ದಿಷ್ಟ ಜನಸಂಖ್ಯಾ ಗುಂಪುಗಳಿಗೆ ಸಂಪನ್ಮೂಲಗಳ ಹಂಚಿಕೆ, ಶಾಲೆಗಳು ಮತ್ತು ಆಸ್ಪತ್ರೆಗಳಂತಹ ಸಾರ್ವಜನಿಕ ಮೂಲಸೌಕರ್ಯ ಯೋಜಿಸಲು ಸರ್ಕಾರಕ್ಕೆ ಅನುವು ಮಾಡಿಕೊಡುತ್ತದೆ.

ಸ್ವಯಂ ಗಣತಿಗೂ ಅವಕಾಶ: ಕೇಂದ್ರ ಗೃಹ ಸಚಿವಾಲಯ ಹಮ್ಮಿಕೊಂಡಿರುವ ಮೊದಲ ಹಂತದ ಗಣತಿಯಲ್ಲಿ 15 ದಿನಗಳ ಕಾಲ ವೆಬ್ ಪೋರ್ಟಲ್ ಮೂಲಕ ಸ್ವಯಂ ಗಣತಿಗೆ ಅವಕಾಶ ಕಲ್ಪಿಸಿದೆ. ಮನೆಯ ಯಾವುದೇ ಒಬ್ಬ ಸದಸ್ಯ 15 ನಿಮಿಷಗಳಲ್ಲಿ ಸ್ವಯಂ ಗಣತಿ ಮಾಡಿ ಮನೆಯ ವಿವರಗಳನ್ನು ಒದಗಿಸಬಹುದಾಗಿದೆ.

ಮೊಬೈಲ್ ಇಲ್ಲವೇ ಇ-ಮೇಲ್‌ನಲ್ಲಿ ಸ್ವಯಂ ಗಣತಿ ಐಡಿ ಪಡೆಯಬಹುದಾಗಿರುತ್ತದೆ. ಎರಡನೇ ಹಂತದಲ್ಲಿ ಗಣತಿದಾರರು ಮನೆ-ಮನೆಗೆ ಭೇಟಿ ನೀಡಿ ಮನೆಗಳ ಗಣತಿ ಮಾಹಿತಿ ಸಂಗ್ರಹಿಸಲಿದ್ದಾರೆ. ▶ 10ನೇ ಪುಟಕ್ಕೆ

ನಾಳೆಯಿಂದ ವಿದ್ಯುತ್ ದರ ಏರಿಕೆ?


ಗೃಹ ಬಳಕೆ ಯೂನಿಟ್‌ಗೆ 50 ಪೈಸೆ, ಕೈಗಾರಿಕೆಗೆ 99 ಪೈಸೆ ಹೆಚ್ಚಳ ಸಾಧ್ಯತೆ

ಬೆಂಗಳೂರು: ಹೊಸ ಆರ್ಥಿಕ ವರ್ಷದ ಮೊದಲ ದಿನ ಏಪ್ರಿಲ್ 1ರಿಂದ ರಾಜ್ಯದಲ್ಲಿ ವಿದ್ಯುತ್ ದರ ಹೆಚ್ಚಳವಾಗುವ ಸಾಧ್ಯತೆ ಇದ್ದು, ಈ ಬಗ್ಗೆ ಮಂಗಳವಾರ ಸ್ಪಷ್ಟನೆ ಸಿಗಲಿದೆ.

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ(ಕೆಇಆರ್‌ಸಿ)ವು ಪೂರ್ವ ಯೋಜನೆಯಂತೆ ಪ್ರತಿ ಯೂನಿಟ್‌ಗೆ 40ರಿಂದ 50 ಪೈಸೆ ಹೆಚ್ಚಿಸಿ, ಏಪ್ರಿಲ್ 1ರಿಂದ ಪರಿಷ್ಕೃತ ವಿದ್ಯುತ್ ದರ ಜಾರಿಗೊಳಿಸುವ ಬಗ್ಗೆ ಹಂತಿಮ ಹಂತದ ಚರ್ಚೆ ನಡೆಸಿರುವುದಾಗಿ ಹೇಳಲಾಗಿದೆ.

ಐದು ವಿದ್ಯುತ್ ಸರಬರಾಜು ಕಂಪನಿ(ಎಸ್ಕಾಂ)ಗಳು 2025-26ನೇ ಸಾಲಿನ ವಿದ್ಯುತ್ ದರವನ್ನು ಪರಿಷ್ಕರಿಸಿ ಯೂನಿಟ್‌ಗೆ ಸರಾಸರಿ 68 ಪೈಸೆ ಹೆಚ್ಚಳ ಮಾಡುವಂತೆ ಕೋರಿದ್ದ ಹಿನ್ನೆಲೆಯಲ್ಲಿ ಆಯೋಗವು 14ರಿಂದ 18 ಪೈಸೆ ಹೆಚ್ಚಳ ಮಾಡುವ ಉದ್ದೇಶವನ್ನು ಹೊಂದಿದೆ.

ಇದಲ್ಲದೆ ಬಹುವಾರ್ಷಿಕ ದರ ಪದ್ಧತಿಗೆ ಅನುಗುಣವಾಗಿ 2026-27ನೇ ಸಾಲಿನ ದರ ಹೆಚ್ಚಳವನ್ನು ಕಳೆದ ವರ್ಷದ ಮಾರ್ಚ್‌ನಲ್ಲಿ ಪ್ರಕಟಿಸಲಾಗಿದ್ದು, ಆ ಪ್ರಕಾರ ಪ್ರತಿ ಯೂನಿಟ್‌ಗೆ 35 ಪೈಸೆ ಹೆಚ್ಚಳವಾಗಲಿದೆ. ಇವೆರಡೂ ಸೇರಿ ಏಪ್ರಿಲ್ 1ರಿಂದ ಯೂನಿಟ್‌ಗೆ ಒಟ್ಟು 50 ಪೈಸೆ ಹೆಚ್ಚಳವಾಗಬಹುದು ಎಂದು ಮೂಲಗಳು ತಿಳಿಸಿವೆ ಇದಲ್ಲದೆ ಕೈಗಾರಿಕೆ ಮತ್ತು ವಾಣಿಜ್ಯ ಬಳಕೆಯ ವಿದ್ಯುತ್ ದರ ಯೂನಿಟ್‌ಗೆ 99 ಪೈಸೆ ಹೆಚ್ಚಳವಾಗುವ ▶ 10ನೇ ಪುಟಕ್ಕೆ



ಹೆದ್ದಾರಿ ಸಂಚಾರವೂ ದುಬಾರಿ

ಬೆಂಗಳೂರು: ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್‌ವೇ ಸೇರಿದಂತೆ ರಾಜ್ಯದ ಪ್ರಮುಖ ಹೆದ್ದಾರಿಗಳಲ್ಲಿನ ಸಂಚಾರವೂ ಏಪ್ರಿಲ್ 1ರಿಂದ ದುಬಾರಿಯಾಗುವ ಸಾಧ್ಯತೆ ಇದೆ.

ವಾರ್ಷಿಕ ಪರಿಷ್ಕರಣೆ ಭಾಗವಾಗಿ ರಾಷ್ಟ್ರೀಯ ಹೆದ್ದಾರಿಗಳ ಟೋಲ್ ದರ ಶೇ.3ರಿಂದ 5ರಷ್ಟು ಏರಿಕೆಯಾಗಲಿದ್ದು, ಪರಿಣಾಮ ರಾಜ್ಯದ 9 ಪ್ರಮುಖ ಹೆದ್ದಾರಿಗಳಲ್ಲಿ ವಾಹನ ಸವಾರರಿಗೆ ಹೆಚ್ಚುವರಿ ಬರೆ ಬೀಳಲಿದೆ. ಇದು ಹಣದುಬ್ಬರ ಸಂಬಂಧಿತ ಹೆಚ್ಚಳವಾಗಿದ್ದು, ಟೋಲ್ ಪ್ಲಾಜಾಗಳಲ್ಲಿ ಪರಿಷ್ಕೃತ ದರಗಳು ಜಾರಿಗೆ ಬರಲಿವೆ ಎನ್ನಲಾಗಿದೆ

ಮೈಸೂರಿನ ಹೋಟೆಲ್, ಬೇಕರಿ, ಸ್ವೀಟ್ ಅಂಗಡಿಗಳಿಗೆ ವಾಣಿಜ್ಯ ಸಿಲಿಂಡರ್ ಪೂರೈಕೆ

ನಿಟ್ಟುಸಿರು ಬಿಟ್ಟ ಮಾಲೀಕರು, ಬಂದ್ ಆಗಿದ್ದ ಹೋಟೆಲ್‌ಗಳೂ ಆರಂಭ

- ಡೀಲರ್‌ಗಳಲ್ಲಿ ಗ್ರಾಹಕರಾದವರಿಗೆ ಮಾತ್ರ ಅವಕಾಶ
- ನಿಗದಿತ ಅರ್ಜಿ, ಡೆಪಾಸಿಟ್, ದಾಖಲಾತಿ ಕಡ್ಡಾಯ
- ಸಿಲಿಂಡರ್ ಪೂರೈಕೆಗೆ ತೈಲ ಕಂಪನಿಗಳಿಂದ ಅನುಮೋದನೆ
- ಸಿಲಿಂಡರ್ ಪೂರೈಕೆಯಲ್ಲಿ ಪಾರದರ್ಶಕತೆ

ಮೈಸೂರು, ಮಾ.30(ಬಿಎಲ್‌ಯು)- ಮೈಸೂರಿನ ಹೋಟೆಲ್, ಬೇಕರಿ, ಸ್ವೀಟ್ ಮಳಿಗೆಗಳಿಗೆ ವಾಣಿಜ್ಯ ಸಿಲಿಂಡರ್ ಪೂರೈಕೆ ಕೊನೆಗೂ ಆರಂಭವಾಗಿದೆ. ಕಳೆದ ಒಂದು ತಿಂಗಳಿನಿಂದ ಸಿಲಿಂಡರ್‌ಗಳಿಲ್ಲದೆ ಪರದಾಡುತ್ತಿದ್ದ ಹೋಟೆಲ್, ಬೇಕರಿ ಹಾಗೂ ಸ್ವೀಟ್ ಅಂಗಡಿಯವರು ಇದರಿಂದ ನಿಟ್ಟುಸಿರು ಬಿಟ್ಟಿದ್ದಾರೆ.

ಮಧ್ಯಪ್ರಾಚ್ಯ ಯುದ್ಧವಿದ್ದರೂ ಹಾರ್ಮುಜ್ ಜಲಸಂಧಿಯಿಂದ ತೈಲ ಹೊತ್ತ ಭಾರತದ ಹಡಗುಗಳು ಸಾಗಲು ಇರಾನ್ ಅನುಮತಿ ನೀಡಿರುವ ಕಾರಣ ಪ್ರತಿದಿನ ಎಲ್‌ಪಿಜಿ ಹಾಗೂ ತೈಲ ಹೊತ್ತ ಹಡಗುಗಳು ಸುರಕ್ಷಿತವಾಗಿ ದೇಶ ತಲುಪಿವೆ.

ಸೌದೆ ಒಲೆಯಲ್ಲಿ ಆಹಾರ ತಯಾರಿಸಲು ಒಪ್ಪದೆ ಕಾರ್ಮಿಕರು ಕೆಲಸಕ್ಕೆ ಗುಡ್ ಬೈ!

ವಾಣಿಜ್ಯ ಸಿಲಿಂಡರ್ ಪೂರೈಕೆ ವ್ಯತ್ಯಯವಾದ ಹಿನ್ನೆಲೆಯಲ್ಲಿ ಹೋಟೆಲ್‌ನವರು ಸೌದೆ ಒಲೆಯಲ್ಲಿ ಆಹಾರ ತಯಾರಿಸುತ್ತಿದ್ದರು. ಆದರೆ ಸೌದೆ ಒಲೆಯಲ್ಲಿ ಆಹಾರ ತಯಾರಿಸಲು ಒಪ್ಪದ ಬಹಳಷ್ಟು ನೌಕರರು ಕೆಲಸಕ್ಕೆ ಗುಡ್ ಬೈ ಹೇಳಿ ಹೊರಟಿದ್ದಾರೆ.

ಹೋಟೆಲ್‌ಗಳ ಅಡುಗೆ ತಯಾರಕರಿಗೆ ಗ್ಯಾಸ್ ಮೂಲಕವೇ ಆಹಾರ ತಯಾರಿಸಿ ಅಭ್ಯಾಸವಾಗಿ ಬಿಟ್ಟಿದೆ. ಇದರಿಂದ ಸೌದೆ ಒಲೆ ಆಹಾರ ಅವರಿಗೆ ಕಷ್ಟವಾಗಿದೆ. ಆದರೆ ವಾಣಿಜ್ಯ ಸಿಲಿಂಡರ್ ದೊರೆಯದ ಕಾರಣ ಹೋಟೆಲ್ ಮಾಲೀಕರು ಸೌದೆ ಒಲೆ ಖರೀದಿಸಿದ್ದಾರೆ. ಆದರೆ ಸೌದೆ ಒಲೆಯಲ್ಲಿ ಆಹಾರ ತಯಾರಿಸಲು ನೌಕರರು ಒಪ್ಪುತ್ತಿಲ್ಲ. ಇದರಿಂದ ಗ್ಯಾಸ್ ಬಂದ ನಂತರವೇ ಕೆಲಸಕ್ಕೆ ಬರುತ್ತೇವೆ ಎಂದು ಕೆಲಸಕ್ಕೆ ಗುಡ್ ಬೈ ಹೇಳಿ ಹೋಗಿದ್ದಾರೆ. ಸಾವಿರಾರು ರೂಪಾಯಿ ಕೊಟ್ಟು ಸೌದೆ ಒಲೆ ಹಾಗೂ ಸೌದೆ ಖರೀದಿ ಮಾಡಿದರೂ ಮಾಲೀಕರಿಗೆ ಸಂಕಷ್ಟ ತಪ್ಪಿಲ್ಲ.



ಹೋಟೆಲ್‌ಗಳಿಗೆ ಸಿಲಿಂಡರ್ ಪೂರೈಕೆ ಆರಂಭವಾಗಿದೆ. ಕಳೆದ ಒಂದು ತಿಂಗಳಿಂದ ಸಿಲಿಂಡರ್ ವ್ಯತ್ಯಯದಿಂದ ಸಂಕಷ್ಟಕ್ಕೀಡಾಗಿದ್ದ ಹೋಟೆಲ್‌ನವರ ಸಮಸ್ಯೆ ಇನ್ನು ಪರಿಹಾರವಾಗಲಿದೆ. ಆದರೆ, ಅಧಿಕೃತ ಡೀಲರ್ ಮೂಲಕವೇ ಸಿಲಿಂಡರ್ ಪಡೆಯಬೇಕೆಂದು ಸರ್ಕಾರ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಇದರಿಂದ ಡೀಲರ್‌ಗಳಲ್ಲಿ ಗ್ರಾಹಕರಾದವರಿಗೆ ಈ ಅವಕಾಶ ದೊರೆಯಲಿದೆ. ಪ್ರತಿಯೊಂದು ಹೋಟೆಲ್‌ನವರು ಡೀಲರ್‌ಗಳಿಗೆ ಅರ್ಜಿ, ಡೆಪಾಸಿಟ್ ಹಾಗೂ ದಾಖಲಾತಿ ಸಲ್ಲಿಸಿ ಪಾರದರ್ಶಕ ರೀತಿಯಲ್ಲಿ ಸಿಲಿಂಡರ್ ಪಡೆಯುವುದು ಉತ್ತಮ.
- ಸಿ.ನಾರಾಯಣ ಗೌಡ, ಅಧ್ಯಕ್ಷ, ಮೈಸೂರು ಹೋಟೆಲ್ ಮಾಲೀಕರ ಸಂಘ

ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ವಿದೇಶಾಂಗ ಸಚಿವ ಜೈಶಂಕರ್ ಅವರ ರಾಜತಾಂತ್ರಿಕ ಸಂಧಾನದ ಯಶಸ್ವಿಯಿಂದ ಬೇರೆ ದೇಶಗಳಂತೆ ಭಾರತದಲ್ಲಿ ಅಷ್ಟಾಗಿ ಇಂಧನ ಸಮಸ್ಯೆ ಇರಲಿಲ್ಲ. ಈಗ ತೈಲ ಹೊತ್ತ ಹಡಗುಗಳು ಬರಲಾರಂಭಿಸಿರುವ ಕಾರಣ ದಿನಕಳೆದಂತೆ ಇಂಧನ ಸಮಸ್ಯೆ ಪರಿಹಾರವಾಗುವ ಸಾಧ್ಯತೆ ಇದೆ.

ಮೈಸೂರಿನ ಹೋಟೆಲ್, ಬೇಕರಿ ಹಾಗೂ ಸ್ವೀಟ್ ಅಂಗಡಿಗಳಿಗೆ ಇಂದಿನಿಂದ ವಾಣಿಜ್ಯ ಸಿಲಿಂಡರ್ ಸರಬರಾಜು ಆರಂಭವಾಗಿದೆ. ಆದರೆ ಪಕ್ಕಾ ದಾಖಲಾತಿ ಇರುವವರಿಗೆ ಮಾತ್ರ ಈ ಅವಕಾಶ ದೊರೆಯುತ್ತಿದೆ.

ಉದ್ಯಮಿಗಳು ಸರ್ಕಾರ ನಿಗದಿಪಡಿಸಿದ ಫಾರ್ಮ್ಯಾಟ್ ನಲ್ಲಿ ಅರ್ಜಿ ಭರ್ತಿ ಮಾಡಿ ತಾವು ಗ್ರಾಹಕರಾಗಿರುವ ಅಧಿಕೃತ ಡೀಲರ್‌ಗಳಿಗೆ ನೀಡುತ್ತಿದ್ದಾರೆ. ಅಲ್ಲದೆ ಪ್ರತಿ ಸಿಲಿಂಡರ್‌ಗೆ 2,400 ರೂಪಾಯಿ ಡೆಪಾಸಿಟ್ ಪಾವತಿಸುತ್ತಿದ್ದಾರೆ. ಜಿಎಸ್‌ಟಿ ಸಂಖ್ಯೆ, ಪ್ಯಾನ್ ಸಂಖ್ಯೆ ಹಾಗೂ ಲೈಸನ್ಸ್ ಇರುವ ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ತಮ್ಮ ಡೀಲರ್‌ಗಳಿಗೆ ನೀಡುತ್ತಿದ್ದು, ಡೀಲರ್‌ಗಳು ಐಒಸಿಎಲ್, ಬಿಪಿಸಿಎಲ್, ಹೆಚ್‌ಪಿಸಿಎಲ್ ಕಂಪನಿಗಳಿಗೆ ಸಲ್ಲಿಸುತ್ತಿದ್ದಾರೆ.

ಹೋಟೆಲ್, ಬೇಕರಿ, ಸ್ವೀಟ್ ಮಾರಾಟ ಮಳಿಗೆಗಳಿಗೆ ವಾಣಿಜ್ಯ ಸಿಲಿಂಡರ್ ಪೂರೈಕೆ ಆರಂಭವಾಗಿದ್ದು, ಶೇಕಡ 30ರಷ್ಟು ಸಿಲಿಂಡರ್ ನೀಡಲಾಗುತ್ತಿದೆ. ಮುಂದಿನ ತಿಂಗಳಿಂದ ಉಳಿದ ಶೇಕಡ 70ರಷ್ಟು ಸಿಲಿಂಡರ್ ಸರಬರಾಜು ಆರಂಭವಾಗಲಿದೆ. ಈ ಮೂಲಕ ಏಪ್ರಿಲ್ ತಿಂಗಳಾಂತ್ಯಕ್ಕೆ ವಾಣಿಜ್ಯ ಸಿಲಿಂಡರ್ ಸಮಸ್ಯೆ ಬಹುತೇಕ ಪರಿಹಾರವಾಗಲಿದೆ.
- ಮೆಹುಲ್ ಜೆ.ಪಟೇಲ್, ರಾಜ್ಯಾಧ್ಯಕ್ಷ, ಎಲ್‌ಪಿಜಿ ವರ್ತಕರ ಸಂಘ

ಅಧಿಕೃತ ಡೀಲರ್‌ಗಳು ಹೋಟೆಲ್, ಬೇಕರಿ, ಸ್ವೀಟ್ ಅಂಗಡಿಗಳ ಮಾಲೀಕರು ಸಲ್ಲಿಸುವ ಅರ್ಜಿ ಹಾಗೂ ದಾಖಲಾತಿಗಳನ್ನು ತೈಲ ಕಂಪನಿಗಳಿಗೆ ಆನ್‌ಲೈನ್ ಮೂಲಕ ಸಲ್ಲಿಸುತ್ತಿದ್ದಾರೆ. ತೈಲ ಕಂಪನಿಗಳು ಅನುಮೋದನೆ ನೀಡಿ, ಹೋಟೆಲ್, ಬೇಕರಿ ಹಾಗೂ ಸ್ವೀಟ್ ಅಂಗಡಿಗಳಿಗೆ ಇಂತಿಷ್ಟು ವಾಣಿಜ್ಯ ಸಿಲಿಂಡರ್ ಪೂರೈಕೆ ಮಾಡಬೇಕೆಂದು ನಿಗದಿ ಮಾಡುತ್ತಿದ್ದಾರೆ.

ಕಾನೂನಾತ್ಮಕವಾದ ಈ ಪ್ರಕ್ರಿಯೆಗಳಲ್ಲಿ ಭಾಗಿಯಾದವರಿಗೆ ಮಾತ್ರ ಸುಲಭವಾಗಿ ವಾಣಿಜ್ಯ ಸಿಲಿಂಡರ್‌ಗಳು ದೊರೆಯುತ್ತಿದೆ.

ಬಹಳಷ್ಟು ಹೋಟೆಲ್, ಬೇಕರಿ ಹಾಗೂ ಸ್ವೀಟ್ ಅಂಗಡಿ ಮಾಲೀಕರು ಡೀಲರ್‌ಗಳ ಮೂಲಕ ವಾಣಿಜ್ಯ ಸಿಲಿಂಡರ್ ಪಡೆಯುತ್ತಿದ್ದರು. ಆದರೆ ಕೆಲವರು ಸಬ್ ಡೀಲರ್ ಹಾಗೂ ಏಜೆಂಟ್‌ಗಳ ಮೂಲಕ ಪಡೆಯುತ್ತಿದ್ದರು. ಇಂತಹವರಿಗೆ ವಾಣಿಜ್ಯ ಸಿಲಿಂಡರ್ ದೊರೆಯುವುದಿಲ್ಲ. ಡೀಲರ್‌ಗಳಲ್ಲಿ ಗ್ರಾಹಕರಾಗಿರುವ ಹಾಗೂ ಪಕ್ಕಾ ದಾಖಲಾತಿ ಇರುವವರಿಗೆ ಮಾತ್ರ ಸಿಲಿಂಡರ್ ದೊರೆಯುತ್ತಿದೆ. ▶ 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಪತ್ನಿ : ನೀವೇನು ಮದುವೆ ಸರ್ಟಿಫಿಕೇಟ್ ಮಗುಚಿ ಮಗುಚಿ ನೋಡುತ್ತಿದ್ದೀರಿ? ಏನು ವಿಷಯ?

ಪತಿ : ಇದರಲ್ಲಿ expiry date ಇದೆಯಾ ಅಂತ ನೋಡುತ್ತಿದ್ದೇನೆ!!

ಮೈಸೂರು ಮಿತ್ರ

ಮಂಗಳವಾರ, ಮಾರ್ಚ್ 31, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಪ್ರಪಂಚ ನೀ ಹೇಗೆ ಇದ್ದರೂ ದೂಷಿಸುತ್ತದೆ. ಶ್ರೀರಾಮನಂತಿದ್ದರು. ಸತ್ಯ ಹರಿಶ್ಚಂದ್ರನಂತಾದರೂ... ಆದ್ದರಿಂದ ಲೋಕ ಮೆಚ್ಚಿಸುವ ಹುಚ್ಚು ಬೇಡ. ಸದಾಕಾಲ ನೀನು ನೀನಾಗಿರು.

ವೇದ ಸುಳ್ಳಾದರೂ { ಕೊಟ್ಟಿದ್ದು ತನಗೆ
ಗಾದೆ ಸುಳ್ಳಾಗದು { ಬಚ್ಚಿಟ್ಟಿದ್ದು ಪರರಿಗೆ

ನಿಮ್ಮ ಪತ್ರಗಳು

ನೀರಿನ ಘಟಕ ದುರಸ್ತಿ ನಿರ್ಲಕ್ಷ್ಯ

ಮಾನ್ಯರೆ,



ಮೈಸೂರು ತಾಲೂಕು ಪರಸಯ್ಯನಹುಂಡಿ ಗ್ರಾಮದ ಹೊರವಲಯದ ಕೋಟೆ ಮೇನ್ ರೋಡ್ ಕೊನೆಯಲ್ಲಿ ನೀರಿನ ಘಟಕ ವಿದ್ದು, ಕಳೆದ 10 ದಿನಗಳಿಂದ ಕೆಟ್ಟು ನಿಂತಿದೆ. ಇದು ಶ್ರೀರಾಂಪುರ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಇದೆ. ಸುತ್ತ ಹಲವಾರು ಬಡಾವಣೆಯವರಿಗೆ ಇದರ ಪ್ರಯೋಜನ ಇದ್ದು ಈಗ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಮೈಸೂರು ಜಿಲ್ಲಾ ಪಂಚಾಯತ್ ಸಿಇಓ ಕುಡಿಯುವ ನೀರಿಗೆ ಹೆಚ್ಚಿನ ಪ್ರಮಾಣದಲ್ಲಿ ಗಮನ ಕೊಡುವುದಕ್ಕೆ ಸಭೆ ನಡೆಸಿ, ಇದರ ಮೇಲೆ ತುರ್ತಾಗಿ ಕ್ರಮ ಕೈಗೊಳ್ಳಬೇಕು ಎಂದು ಎಲ್ಲಾ ಪಂಚಾಯತ್‌ಗೆ ನಿರ್ದೇಶನ ನೀಡಿದ್ದಾರೆ. ಆದರೆ ಸ್ಥಳೀಯ ಪಂಚಾಯತ್ ಅಧಿಕಾರಿಗಳು ಸೂಕ್ತ ಕ್ರಮವನ್ನು ಕೈಗೊಳ್ಳದೇ ಕಳೆದ 10 ದಿನಗಳಿಂದ ನಿರ್ಲಕ್ಷ್ಯ ಮಾಡಿದ್ದಾರೆ. ಆದ್ದರಿಂದ ಸಂಬಂಧಪಟ್ಟವರು ಶೀಘ್ರ ನೀರಿನ ಘಟಕ ದುರಸ್ತಿಗೊಳಿಸಬೇಕೆಂದು ಈ ಮೂಲಕ ಮನವಿ.

–ಇಂಜಿನಿಯರ್ (ನಿವೃತ್ತ), ಪರಸಯ್ಯನ ಹುಂಡಿ ಗ್ರಾಮ

ರೋಮ್ ಹೊತ್ತಿ ಉರಿಯುವಾಗ...!

ಮಾನ್ಯರೆ,

ಮೈಸೂರಿನ ಹೃದಯ ಭಾಗವಾದ ಸಯ್ಯಾಜಿರಾವ್ ರಸ್ತೆಯೂ ಸೇರಿದಂತೆ ನಗರದ ಪ್ರತಿಯೊಂದು ರಸ್ತೆಗಳ ಬದಿಯಲ್ಲಿರುವ ಪಾದಚಾರಿ ಮಾರ್ಗಗಳು ಅತಿಕ್ರಮಣಕ್ಕೊಳಗಾಗಿವೆ. ರಸ್ತೆಯ ಎರಡೂ ಬದಿಗಳು ಅನಧಿಕೃತ ವಾಹನಗಳ ಪಾರ್ಕಿಂಗ್ ಸ್ಥಳಗಳಾಗಿ ಮಾರ್ಪಟ್ಟಿವೆ. ರಸ್ತೆಗಳ ಸಿಂಹಪಾಲು ಗುಂಡಿಬಿದ್ದಿವೆ.

ಜನಸಾಮಾನ್ಯರು ಓಡಾಡಲು ಪಾದಚಾರಿ ಮಾರ್ಗವೂ ಇಲ್ಲ. ರಸ್ತೆಯ ಬದಿಯೂ ಇಲ್ಲ. ಗಾಯದ ಮೇಲೆ ಬರೆ ಎಂಬಂತೆ ನಗರದ ಸಣ್ಣ–ಪುಟ್ಟ ರಸ್ತೆಗಳಲ್ಲಿಯೂ ಸಾಲಾಗಿ ಸಿಗ್ನಲ್ ಲೈಟ್ ಅಳವಡಿಸಲಾಗಿದೆ. ಈ ಸಿಗ್ನಲ್ ಲೈಟುಗಳು ಇರುವ ವೃತ್ತದ ಅಷ್ಟದಿಕ್ಕುಗಳಲ್ಲಿಯೂ ಪಾದಚಾರಿ ಮಾರ್ಗಗಳೂ ಇಲ್ಲ. ರಸ್ತೆಯ ಬದಿಯಲ್ಲಿ ಕಾರುಗಳು ಜಮಾಯಿಸಿರುತ್ತವೆ. ಇವ್ಯಾವುದರ ಅರಿವಿಲ್ಲದೆ ಸಿಗ್ನಲ್ ಲೈಟುಗಳು ಕಣ್ಣುಮಿಟುಕಿಸುತ್ತಿರುತ್ತವೆ. ಶನಿವಾರ ಮೈಸೂರು ನಗರಕ್ಕೆ ಭೇಟಿ ನೀಡಿದ ಪೊಲೀಸ್ ಮಹಾ ನಿರ್ದೇಶಕರು ಈ ಬಗ್ಗೆ ತಲೆಕೆಡಿಸಿಕೊಳ್ಳದೆ ಪಿಯಾನೋ ನುಡಿಸಿದರಂತೆ....! 'ಮೈಸೂರು ಮಿತ್ರ'ದಲ್ಲಿ ಈ ಸುದ್ದಿ ಓದಿದೊಡನೆ 'ರೋಮ್ ಹೊತ್ತಿ ಉರಿಯುವಾಗ ದೊರೆ ನೀರೋ ಪಿಟೀಲು ಬಾರಿಸುತ್ತಿದ್ದನಂತೆ' ಎಂಬ ಮಾತು ನೆನಪಾಯಿತು!! –ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.

ಸಿಎಂ 'ಮೈಲಾರಿ' ದೋಸೆ; ಸಾರ್ವಜನಿಕರಿಗೆ ಸಂಕಷ್ಟ

ಮಾನ್ಯರೆ,

ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಮ್ಮ ತವರು ಜಿಲ್ಲೆ ಮೈಸೂರಿಗೆ ಬಂದಾಗ, ಸಾಮಾನ್ಯವಾಗಿ ತಮ್ಮ ನೆಚ್ಚಿನ ದೋಸೆ ಸವಿಯಲು ಮೈಲಾರಿ ಹೋಟೆಲ್‌ಗೆ ಭೇಟಿ ನೀಡುವುದು ಸರ್ವೇ ಸಾಮಾನ್ಯ. ಇದು ಅವರ ವೈಯಕ್ತಿಕ ವಿಚಾರ, ಇದನ್ನು ಯಾರೂ ಪ್ರಶ್ನೆ ಮಾಡುವಂತಿಲ್ಲ. ಆದರೆ ಮೊನ್ನೆ (29/03/2026, ಭಾನುವಾರ), ಮೈಸೂರಿನ ನಜರ್‌ಬಾದ್‌ನ ಮೈಲಾರಿ ಹೋಟೆಲ್‌ಗೆ ಬೆಳಿಗ್ಗೆ 10 ಗಂಟೆಗೆ ತಿಂಡಿ ತಿನ್ನಲು ಬಂದಾಗ ಸಾರ್ವಜನಿಕರಿಗೆ ನಜರ್‌ಬಾದ್ ಮುಖ್ಯ ರಸ್ತೆಯನ್ನು ಬ್ಯಾರಿಕೇಡ್ ಹಾಕಿ ಬಂದ್ ಮಾಡಲಾಯಿತು. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ಅಲ್ಲ.

ನಜರ್‌ಬಾದ್‌ನ ಈ ಹೋಟೆಲ್ ಮುಂಭಾಗದ ರಸ್ತೆಯು ತೀರಾ ಚಿಕ್ಕದಾಗಿದ್ದು, ಏಕಮುಖ ಸಂಚಾರ ರಸ್ತೆಯಾಗಿದೆ. ಸಿಎಂ ಬಂದರೆ ಅವರ ಹಿಂದೆ–ಮುಂದೆ ಹತ್ತಾರು ಕಾರುಗಳು, ಪೊಲೀಸ್ ಜೀಪುಗಳು ಬಂದು ಈ ರಸ್ತೆಯಲ್ಲಿ ನಿಲ್ಲುವುದರಿಂದ ಸಾರ್ವಜನಿಕರ ಸಂಚಾರವೇ ಅಸ್ತವ್ಯಸ್ತವಾಗುತ್ತದೆ. ನೀವು ಮೈಸೂರಿಗೆ ಬಂದಾಗಲೆಲ್ಲ ಮೈಲಾರಿ ಹೋಟೆಲ್‌ನ ದೋಸೆ ತಿನ್ನಬೇಕೆಂಬ ಬಯಕೆ ಇದ್ದರೆ ಒಂದು ಸರ್ಕಾರಿ ವಾಹನ ಕಳುಹಿಸಿ ನೀವು ಇರುವ ಕಡೆಗೇ ದೋಸೆ ತರಿಸಿಕೊಳ್ಳ ಬಹುದಲ್ಲವೇ? ಇದರಿಂದಾಗಿ ಸಾರ್ವಜನಿಕರಿಗೂ ತೊಂದರೆ ತಪ್ಪುತ್ತದೆ. ಹತ್ತಾರು ಕಾರುಗಳ ಪೆಟ್ರೋಲ್, ಡೀಸೆಲ್ ಉಳಿತಾಯ, ಸಮಯವೂ ಉಳಿತಾಯ. ಎಲ್ಲಕ್ಕಿಂತ ಹೆಚ್ಚಾಗಿ ನಿಮಗೆ ಮುಜುಗರವು ತಪ್ಪುತ್ತದೆ. ಮುಂದಿನ ಬಾರಿ ನೀವು ಮೈಸೂರಿಗೆ ಬಂದಾಗ ಈ ಬಗ್ಗೆ ಚಿಂತಿಸುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಒಳ್ಳೆಯದು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಸರ್ಕಾರದ ನಿರ್ಧಾರ ಸಮಯೋಚಿತ

ಮಾನ್ಯರೆ,

ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ತೃತೀಯ ಭಾಷೆಯಾದ ಹಿಂದಿಯಲ್ಲಿ ತೆಗೆದುಕೊಳ್ಳುವ ಅಂಕವನ್ನು ಪರಿಗಣಿಸದೆ ಗ್ರೇಡ್ ನೀಡುವ ಕ್ರಮ ಗ್ರಾಮೀಣ ಕರ್ನಾಟಕದ ವಿದ್ಯಾರ್ಥಿಗಳಿಗೆ ಸಿಕ್ಕ ಜಯವಾಗಿದೆ.

ಭಾಷೆಯನ್ನು ಓದುವುದು, ಬರೆಯುವುದು, ಕಲಿಯುವುದು ತಪ್ಪಲ್ಲ. ಆದರೆ ಆ ಕಲಿಯುವಿಕೆಯೇ ಭವಿಷ್ಯಕ್ಕೆ ಅಡ್ಡಿಯಾಗಬಾರದು. ಗ್ರಾಮಾಂತರ ಪ್ರದೇಶದ ಸಾವಿರಾರು ಸರ್ಕಾರಿ ಪ್ರೌಢಶಾಲೆಗಳಲ್ಲಿ ಹಿಂದಿ ಕಲಿಸುವವರೂ ಇಲ್ಲ. ಹೇಳಿ ಕೊಡುವವರೂ ಇಲ್ಲ. ಅವರ ಸ್ಥಿತಿ ಹೇಗಿದೆ ಎಂದರೆ ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತಿದೆ. ನಾವು ಎಸ್‌ಎಸ್‌ಎಲ್‌ಸಿ ಓದುವಾಗ 50 ಅಂಕಕ್ಕೆ ಹಿಂದಿ ಬರೆಯಬೇಕಿತ್ತು. ಎಷ್ಟು ಕಷ್ಟವಿತ್ತೆಂದರೆ ಹೇಳಲು ಅಸಾಧ್ಯ. ಆದರೆ ಈಗ 100 ಅಂಕವಿದೆ. ತಮ್ಮದಲ್ಲದ ಹಿಂದಿ ಭಾಷೆಯನ್ನು ಕಲಿತು ನೂರು ಅಂಕಗಳಿಗೆ ಬರೆಯುವುದಾದರೂ ಹೇಗೆ? ಮನೆಯಲ್ಲಿ, ಶಾಲೆಯಲ್ಲಿ ಕನ್ನಡ ಹೇಳಿ ಕೊಡುವವರಿದ್ದರೂ ನಪಾಸಾಗುವವರ ಸಂಖ್ಯೆ ಈಗಲೂ ಕಡಿಮೆಯಾಗಿಲ್ಲ. ಹೀಗಿರುವಾಗ ಹಿಂದಿ ಭಾಷಾ ವಿಷಯವನ್ನು ಪಾಸಾಗುವುದು ಕಡ್ಡಾಯ ಮಾಡಿ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುವುದು ಖಂಡಿತ ಸರಿಯಲ್ಲ. ಸರ್ಕಾರ ಈಗ ತೆಗೆದುಕೊಂಡಿರುವ ನಿರ್ಧಾರ ಸಮಯೋಚಿತವಾಗಿದ್ದು ಅದಕ್ಕೆ ರಾಜಕೀಯವಾಗಿ ವಿರೋಧ ಮಾಡುವುದು ಸರಿಯಲ್ಲ. ಪ್ರತಿ ವಿದ್ಯಾರ್ಥಿಯೂ ಹಿಂದಿ ಓದಬೇಕು, ಪರೀಕ್ಷೆ ಬರೆಯಬೇಕು. ಆದರೆ ತೆಗೆಯುವ ಅಂಕಗಳಿಗೆ ಎ, ಬಿ, ಸಿ, ಡಿ ಗ್ರೇಡ್ ನೀಡುವುದು, ಒಟ್ಟು ಅಂಕಗಳಿಗೆ ಪರಿಗಣಿಸದಿರುವುದು ಯುಕ್ತವಾದ ಕ್ರಮವಾಗಿದೆ. ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿ ಕೊಡುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ.

–ಬಲ್ಲೇನಹಳ್ಳಿ ಮಂಜುನಾಥ್. ಕೆ.ಆರ್.ಪೇಟೆ.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಓ ಮನವೇ ನೀನೆಷ್ಟು ಸುಖಿ...

ಓ ಮನವೇ ನೀನೆಷ್ಟು ಸುಖಿ ಎಂಬ ವಿಷಯವು ಮಾನವನ ಅಂತರಂಗದ ಆಳವಾದ ಭಾವನೆಗಳನ್ನು ಅನಾವರಣಗೊಳಿಸುವ ಒಂದು ಚಿಂತನೀಯ ವಿಷಯವಾಗಿದೆ. ಜೀವನದಲ್ಲಿ ನಾವೆಲ್ಲರೂ ಸುಖವನ್ನು ಹೊರಗಿನ ಸಂಪತ್ತು, ಸೌಕರ್ಯಗಳು ಮತ್ತು ಸಂಬಂಧಗಳಲ್ಲಿ ಹುಡುಕುತ್ತೇವೆ. ಆದರೆ ನಿಜವಾದ ಸುಖವು ಹೊರಗೆ ಅಲ್ಲ, ನಮ್ಮ ಮನಸ್ಸಿನಲ್ಲೇ ನೆಲೆಸಿರುವುದು ಎಂಬುದನ್ನು ಅನೇಕ ಸಂದರ್ಭಗಳಲ್ಲಿ ಮರೆತು ಬಿಡುತ್ತೇವೆ. ಮನಸ್ಸು ಶಾಂತವಾಗಿದ್ದರೆ, ತೃಪ್ತಿಯಿಂದ ಕೂಡಿದ್ದರೆ, ಅಲ್ಪದಲ್ಲೇ ಸಂತೋಷ ಕಂಡುಕೊಳ್ಳುವ ಶಕ್ತಿ ಹೊಂದಿದ್ದರೆ ಆಗಲೇ ಜೀವನ ನಿಜವಾದ ಅರ್ಥದಲ್ಲಿ ಸುಖಮಯವಾಗುತ್ತದೆ.

ಮನಸ್ಸಿನ ಸ್ಥಿತಿ, ಆಲೋಚನೆಗಳು ಮತ್ತು ಮನೋಭಾವಗಳು ನಮ್ಮ ಸುಖದ ಮೂಲವಾಗಿವೆ ಎಂಬುದನ್ನು ಅರಿಯುವುದು ಅತ್ಯಂತ ಅಗತ್ಯ. ಮನುಷ್ಯನ ಮನಸ್ಸು ಚಂಚಲವಾದದ್ದು, ಅದು ಕ್ಷಣ ಕ್ಷಣಕ್ಕೂ ಬದಲಾಗುವ, ಕೈಗೆಟುಕದ್ದನ್ನು ಬಯಸುವ ಗುಣವನ್ನು ಹೊಂದಿರುತ್ತದೆ. ಮನಸ್ಸು ಹೇಳಿದಂತೆಲ್ಲ ನಡೆಯಲು ಹೊರಟರೆ ಅಪಾಯ ಖಂಡಿತ. ನಾವು ಹೇಳಿದಂತೆ ಮನಸ್ಸು ಕೇಳಬೇಕೆ ವಿನಃ ಮನಸ್ಸು ಹೇಳಿದಂತೆ ನಡೆಯ ಹೊರಟರೆ ಬದುಕು ಹಳಿ ತಪ್ಪಿದ ರೈಲಿನಂತಾಗುತ್ತದೆ. ಇದನ್ನು ಅರಿತೆ ಹಿರಿಯರು ಮಾನವನ ಮನಸ್ಸನ್ನು ಮರ್ಕಟನಿಗೆ (ಕೋತಿಗೆ) ಹೋಲಿಸಿದ್ದಾರೆ. ಒಮ್ಮೆ ಇದ್ದಂತಿರದ ಸದಾ ಒಂದಲ್ಲ ಒಂದು ಸಂಗತಿಯಲ್ಲಿ ಕಳೆದು ಹೋಗುವ ಸ್ವಭಾವ ಮನಸ್ಸಿಗಿರುತ್ತದೆ.

ಮನವೇ ಮಿತ್ರ, ಮನವೇ ಶತ್ರು

ಮನುಷ್ಯನ ಮನಸ್ಸು ಎಂಬುದು ಮಿತ್ರನೂ ಹೌದು, ಶತ್ರುವೂ ಹೌದು. ಒಳ್ಳೆಯದನ್ನು ಮಾಡಬೇಕು. ಎಲ್ಲರೊಂದಿಗೆ ಬೆರತು ಸಹಬಾಳ್ವೆ ನಡೆಸಬೇಕು ಎಂದೆಲ್ಲ ಮಿತ್ರನಂತೆ ಆಲೋಚನೆಗಳು ಬಂದರೂ ಕೂಡ ಒಬ್ಬರಿಗೆ ಸಿಗುತ್ತಿರುವ ಅವಕಾಶ, ಅವರಿಗೆ ದೊರೆತಿರುವ ಸಂಪತ್ತು, ಹುದ್ದೆಗಳನ್ನು ನೋಡಿದ ಮರುಕ್ಷಣವೇ ಹೊಟ್ಟೆಕಿಚ್ಚೆಂಬ ಶತ್ರು ಉದ್ಭವನಾಗುತ್ತಾನೆ. ಎಷ್ಟರ ಮಟ್ಟಿಗೆ ಈ ಶತ್ರು ಆವರಿಸಿಕೊಳ್ಳುತ್ತಾನೆಂದರೆ ತನಗಿಂತ ಒಂದು ರೂಪಾಯಿ ಹೆಚ್ಚಿಗೆ ದೊರೆತರೂ ಅದನ್ನು ಸಹಿಸಿಕೊಳ್ಳುವಷ್ಟು ವ್ಯವಧಾನ ಮನಸ್ಸಿಗಿರುವುದಿಲ್ಲ. ನಮ್ಮ ಸಹದ್ಯೋಗಿ, ಗೆಳೆಯ, ಬಂಧು, ಸಂಬಂಧಿ ಅವನಿಗೆ ಒಳ್ಳೆಯ ಪ್ರಶಸ್ತಿಗಳು, ಉತ್ತಮ ಅವಕಾಶಗಳು ದೊರೆತಿವೆ.ಅವನು ಬೆಳೆದರೆ ನೋಡುವುದಕ್ಕೆ ಸಂತೋಷ ಎಂಬ ಆಲೋಚನೆಯೇ ಬರದಂತೆ ಎಲ್ಲವೂ ತನಗೆ ಮಾತ್ರ, ಇಡೀ ಪ್ರಪಂಚದಲ್ಲಿ ಏನೇ ಒಳ್ಳೆಯದು ದೊರೆತರೂ ಅದು ತನಗೆ ಮಾತ್ರ ದೊರಕಬೇಕು, ತಾನೊಬ್ಬನೇ ಬೆಳೆಯಬೇಕು, ಪ್ರಶಸ್ತಿ, ಹುದ್ದೆ, ಅವಕಾಶ, ಉಪನ್ಯಾಸ, ಗುರುತಿಸಿಕೊಳ್ಳುವಿಕೆ ಹೀಗೆ ಏನೇ ಆದರೂ ಅದು ತಾನೊಬ್ಬನಿಗೆ ಮಾತ್ರ ಎಂಬ ಅಸೂಯೆ ತುಂಬಿ ತುಳುಕುವಂತೆ ಮಾಡುತ್ತದೆ.

ನಮ್ಮಂತೆ ಇತರರು ಎಂಬ ಮನೋಭಾವವೇ ಮರೆಯಾಗಿ ಇಲ್ಲಸಲ್ಲದ ಮಾತುಗಳನ್ನಾಡುತ್ತಾ ನಮಗೇನು ತೊಂದರೆ ಮಾಡದಿದ್ದರೂ ಅವರ ವಿರುದ್ಧ ಮಸಲತ್ತು ಮಾಡುವಷ್ಟರ ಮಟ್ಟಿಗೆ ಮನಸ್ಸು ಪ್ರಚೋದನೆ ನೀಡುತ್ತದೆ. ಎಲ್ಲಿವರೆಗೆ ಒಳ್ಳೆಯ ಆಲೋಚನೆಗಿಂತ ಈ ತರಹದ ನಕರಾತ್ಮಕ ಚಿಂತನೆಗಳಿಗೆ ಹೆಚ್ಚು ಪ್ರಾಧ್ಯಾನತೆ ನೀಡುತ್ತೇವೆಯೋ ಅಲ್ಲಿವರೆಗೂ ಮನಸ್ಸಿನ ಗುಲಾಮನಾಗಿ ವರ್ತಿಸಬೇಕಾಗುತ್ತದೆ. ಈ ಗುಣ ಒಮ್ಮೆ ಮನವನ್ನು ಹೊಕ್ಕರೆ ಮುಂದೆ ಇದರ ಹಿಡಿತದಿಂದ ಹೊರ ಬರುವುದು ಕಷ್ಟವಾಗುತ್ತದೆ. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಗಾದೆ ಮಾತಿನಂತೆ ಆರಂಭದಿಂದಲೇ ಈ ತರಹದ ಅನುಪಯುಕ್ತವಾದ ಸಂಗತಿಗಳಿಂದ ದೂರವಾಗುವುದನ್ನು ಕಲಿತರೆ ಉತ್ತಮ.

ಪ್ರಚೋದನೆ ಕೊಡುವ ಮನಸ್ಸು

ಪ್ರಪಂಚದಲ್ಲಿ ನೂರು ಒಳ್ಳೆಯ ವಿಚಾರಗಳಿದ್ದರೂ, ಸುತ್ತಮುತ್ತ ಅನೇಕ ಒಳ್ಳೆಯ ಜನರಿದ್ದರೂ, ಒಳ್ಳೆಯದ್ದನ್ನು ಕಲಿಯಲು ಬೇಕಾದಷ್ಟು ಅವಕಾಶವಿದ್ದರೂ ಕೆಟ್ಟದ್ದು ಪ್ರಚೋದನೆ ನೀಡುವಷ್ಟು ಒಳ್ಳೆಯದು ಪ್ರಚೋದನೆ ನೀಡಲಾರದು. ಉದಾಹರಣೆಗೆ ಗಾಳಿ ನಿರಂತರವಾಗಿ ಬೀಸುತ್ತಿದ್ದರೂ ಅದರ ಬಗ್ಗೆ ಮಾತಾನಾಡದ ನಾವು ಸ್ವಲ್ಪ ಸಮಯ ದುರ್ಗಂಧವನ್ನು ಬೀರಿದರೆ ಸಾಕು ಹಿಡಿ ಶಾಪವನ್ನು ಹಾಕುತ್ತೇವೆ.

ಎತ್ತಿನ ಗಾಡಿಯಾಗಲೀ, ಕುದುರೆ ಬಂಡಿಯಾಗಲೀ, ಯಾವುದೇ ಬಗೆಯ ವಾಹನವಾಗಲೀ ಅದನ್ನು ಚಾಲನೆ ಮಾಡುವವರು ನಾವೇ ಆಗಿದ್ದಾಗ ಅದರ ಹಿಡಿತ ನಮ್ಮಲ್ಲಿದ್ದರೆ ಮಾತ್ರ ಅದನ್ನು ಹೇಗೆ ಓಡಿಸುತ್ತಿದ್ದರೂ ಬೇಕೆಂದಾಗ ಅದರ ಹತೋಟಿಯನ್ನು ಮಾಡಲು ಸಾಧ್ಯ. ಹಾಗೆಯೇ ಮನವೆಂಬ ಗಾಡಿಯ ನಿಯಂತ್ರಣವನ್ನು ನಾವೇ ಮಾಡಿದರೆ ಒಳಿತು. ಇಲ್ಲದಿದ್ದರೆ ಬೇಡದ ವಿಚಾರಗಳೆಡೆಗೆ ಗಮನಹರಿಯುವಂತೆ ಮಾಡಿ ಇನ್ನಿಲ್ಲದಂತೆ ನಿಯಂತ್ರಣಕ್ಕೆ ಸಿಗದಂತಾಗುತ್ತದೆ. ಆಗ ಮನಸ್ಸು ಹೇಳಿದಂತೆ ಕೇಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ, ಆಗ ಸಹಜವಾಗಿ ಪ್ರಚೋದನೆ ಒಳಗಾಗಿ ಇನ್ನಿಲ್ಲದಂತೆ ಅದರ ಹತೋಟಿಗೆ ಸಿಲುಕಿ ಕೈಗೊಂಬೆಯಾಗಿ ವರ್ತಸಿಬೇಕಾಗುತ್ತದೆ.

ಮನಸ್ಸು ಕೆಟ್ಟದ್ದರ ಬಗ್ಗೆ ಎಷ್ಟೇ ಪ್ರಚೋದನೆ ನೀಡಿದರೂ ಅದನ್ನು ನಮ್ಮ ದಾರಿಗೆಳೆದುಕೊಂಡು ಬಂದು ಅದನ್ನು ನಿಯಂತ್ರಿಸದಿದ್ದರೆ ಅಪಾಯವಾಗುತ್ತದೆ. ನಕರಾತ್ಮಕ ಕ್ರಿಯೆಗಳು,ಮತ್ತೊಬ್ಬರನ್ನು ನೋಡಿ ಹೀಯ್ಯಾಳಿಸುವ, ನಿಂದಿಸುವ, ಛೇಡಿಸುವ, ಇಲ್ಲಸಲ್ಲದ ಮಾತುಗಳನ್ನಾಡುವ ಗುಣಗಳು ಖಂಡಿತವಾಗಿ ತಿರುಗುಬಾಣಗಳಾಗಿ ಕರ್ಮ ಹಿಂತಿರುಗುವಂತೆ ನಮಗೆ ನೋವನ್ನುಂಟು ಮಾಡುತ್ತವೆ, ಇದರಲ್ಲಿ ಯಾವುದೇ ಅನುಮಾನವಿಲ್ಲ.



> “ಸುಖಿಯಾಗಿರುವ ಮನಸ್ಸಿಗೆ ಇಲ್ಲಸಲ್ಲದ ಸರಪಳಿಗಳನ್ನು ಬಿಗಿದು ಕಟ್ಟಿ ಹಾಕಿ ದುಃಖಕ್ಕೀಡು ಮಾಡುವುದಕ್ಕಿಂತ ಅದನ್ನು ಅದರಷ್ಟಕ್ಕೆ ಬಿಟ್ಟು ಕಡಿವಾಣ ನಿಯಂತ್ರಣದೊಂದಿಗೆ ಲಗಾಮನ್ನು ಇಟ್ಟುಕೊಂಡು ಸ್ವಚ್ಛಂದ ದಾರಿಯಲ್ಲಿ ವಿಹರಿಸುವಂತೆ ಬಿಡಬೇಕು. ನಿಜವಾದ ಸುಖವು ಹೊರಗಿನ ಸಂಪತ್ತಿನಲ್ಲಿ ಅಲ್ಲ, ನಮ್ಮ ಮನಸ್ಸಿನ ಶಾಂತಿ, ತೃಪ್ತಿಯಲ್ಲಿದೆ. ಜೀವನದಲ್ಲಿ ಏನೇ ಸವಾಲುಗಳು ಬಂದರೂ ಮನಸ್ಸನ್ನು ಸಮತೋಲನದಲ್ಲಿಟ್ಟುಕೊಂಡು, ಸಕಾರಾತ್ಮಕ ಚಿಂತನೆಗಳನ್ನು ಬೆಳೆಸಿದಾಗ ಮಾತ್ರ ನಾವೇ ನಮ್ಮ ಸುಖದ ನಿರ್ಮಾತೃಗಳಾಗುತ್ತೇವೆ. ಆದ್ದರಿಂದ ಮನಸ್ಸನ್ನು ನಿಯಂತ್ರಿಸಿಕೊಂಡು, ಆಸೆ–ಆಕಾಂಕ್ಷೆಗಳನ್ನು ಮಿತಿಗೊಳಿಸಿ, ಇರುವುದು ಸಾಕೆಂದು ತೃಪ್ತಿಯಿಂದ ಬದುಕಿದಾಗ ಮಾತ್ರ ನಿಜವಾದ ಸುಖ ಅನುಭವಿಸಲು ಸಾಧ್ಯ.

ಅನಿಯಂತ್ರಿತ ಮನ

ಮನುಷ್ಯನ ಮನಸ್ಸು ಎಷ್ಟರ ಮಟ್ಟಿಗೆ ನಿಯಂತ್ರಣವನ್ನು ಹೊಂದಿರುತ್ತದೆ ಎಂದರೆ ಅದರ ಆಸೆಗಳಿಗೆ ಕೊನೆ ಎಂಬುದಾಗಲೀ ಇರುವುದೇ ಇಲ್ಲ. ಮನಸ್ಸಿನ ಆಸೆ – ಆಕಾಂಕ್ಷೆಗಳಿಗೆ ಮಿತಿ ಎಂಬುದೇ ಇರಲಾರದು. ಒಂದು ಆಸೆ ಪೂರೈಕೆಯಾದ ಮರುಕ್ಷಣವೇ ಆಸೆಗಳ ಪಟ್ಟಿ ಬೆಳೆಯುತ್ತದೆಯೇ ವಿನಃ ಕಡಿಮೆಯಾಗಲಾರದು. ಆಸೆಗಳಿಲ್ಲದಿದ್ದರೆ ಜೀವನ ಹೇಗಿರುತ್ತಲಿತ್ತು? ಎಂಬ ಪ್ರಶ್ನೆ ಒಮ್ಮೆ ನುಸುಳಿದಾಗ ನಕ್ಕು ಸುಮ್ಮನಾಗಿದ್ದೆ. ಆಸೆಗಳಿಲ್ಲದ ಜೀವನವನ್ನು ಕಲ್ಪನೆ ಮಾಡಿಕೊಳ್ಳಲು ಸಾಧ್ಯವಿಲ್ಲ.ಒಂದಲ್ಲ ಒಂದು ಆಸೆಯೂ ಮನುಷ್ಯನನ್ನು ಆಕ್ರಮಿಸಿಕೊಂಡು ನಿರೀಕ್ಷೆಗಳನ್ನು ಹೆಚ್ಚಾಗುವಂತೆ ಮಾಡಿರುತ್ತವೆ. ಆಸೆಗಳಿಲ್ಲದೆ ಮನುಷ್ಯ ಜೀವಿಸಲಾರನು, ಪ್ರತಿಯೊಂದು ಕ್ಷಣದಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಆಸೆಯ ಬೆನ್ನತ್ತಿಯೇ ಬದುಕನ್ನು ನಡೆಸುತ್ತಿರುತ್ತಾನೆ. ಇದನ್ನು ಅರಿತು ಏನೋ 12ನೇ ಶತಮಾನದಲ್ಲಿದ್ದ ಅಂಬಿಗರ ಚೌಡಯ್ಯ ತನ್ನ ವಚನವೊಂದರಲ್ಲಿ ಮನುಷ್ಯರ ಸ್ವಭಾವವನ್ನು ತಿಳಿಸಿವ ವಚನವೊಂದನ್ನು ಬರೆದಿದ್ದಾನೆ.

ಬಡತನಕ್ಕೆ ಉಂಬುವ ಚಿಂತೆ,
ಉಣಲಾದರೆ ಉಡುವ ಚಿಂತೆ,
ಉಡಲಾದರೆ ಇಡುವ ಚಿಂತೆ,
ಇಡಲಾದರೆ ಹೆಂಡಿರ ಚಿಂತೆ,
ಹೆಂಡಿರಾದರೆ ಮಕ್ಕಳ ಚಿಂತೆ,
ಮಕ್ಕಳಾದರೆ ಬದುಕಿನ ಚಿಂತೆ,
ಬದುಕಾದರೆ ಕೇಡಿನ ಚಿಂತೆ,
ಕೇಡಾದರೆ ಮರಣದ ಚಿಂತೆ,
ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆನು.
ಶಿವನ ಚಿಂತೆಯಲ್ಲಿದ್ದವರೊಬ್ಬರನೂ ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯ [ನಿಜ]ಶರಣನು

ನಮ್ಮ ಹತ್ತಿರ ಏನು ಇಲ್ಲವೋ ಅದರೆಡೆಗೆ ಮನಸ್ಸು ಆಕರ್ಷಿಸುವಂತೆ ಮಾಡುತ್ತದೆ.ಒಂದು ವೇಳೆ ಅದು ದೊರೆತರೆ ತಕ್ಷಣವೇ ಮತ್ತೊಂದು, ಮಗದೊಂದು ಹೀಗೆ ಒಂದಲ್ಲ ಒಂದು ಆಸೆಗಳು ನುಸುಳಿ ಚಿಂತೆಗಳಾಗಿ ಮಾರ್ಪಾಡಾಗಿ ಸದಾ ನಮ್ಮನ್ನು ನಿಯಂತ್ರಣದಲ್ಲಿಟ್ಟು ತನ್ನ ಶಕ್ತಿ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತದೆಯೇ ಹೊರತು ಕಡಿಮೆ ಮಾಡಿಕೊಳ್ಳಲಾಗದು.

ಈ ಹಿನ್ನೆಲೆಯಲ್ಲಿ ಮನವನ್ನು ನಿಯಂತ್ರಿಸುವುದು ಕಷ್ಟವೆನಿಸಿದರೂ ಕೂಡ ಅದನ್ನು ನಮ್ಮ ನಿಯಂತ್ರಣಕ್ಕೆ ಎಳೆದು ತಂದು ಅದನ್ನು ಸದಾ ಚಾರದೆಡೆಗೆ, ಒಳ್ಳೆಯ ದಾರಿಯಲ್ಲಿ ಸಂಚರಿಸುವಂತೆ ಮಾಡಲೇಬೇಕು, ಇದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿರುತ್ತದೆ.ಬೀಚಿ ಅವರು ಮನಸ್ಸಿನ ಬಗ್ಗೆ ಹೇಳಿರುವ ಮಾತೊಂದು ಇಲ್ಲಿ ಉಲ್ಲೇಖಾರ್ಹ

ಮಾನವನ ಮನಸ್ಸು ಇದ್ದಲ್ಲಿಯೇ ಬಿದ್ದಿರುವ ಒಂದು ಕಲ್ಲು ಗುಂಡಲ್ಲ. ಆ ತುದಿಯಿಂದ ಈ ತುದಿಗೂ, ಈ ತುದಿಯಿಂದ ಆ ತುದಿಗೂ ಸದಾ ತೂಗಾಡುವ ಒಂದು ಲೋಕ. ಅತ್ಯುನ್ನತ ಶಿಖರವನ್ನೇರಿ ಸರ್ವೇ ಜನಾಃ ಸುಖಿನೋಭವಂತು ಎಂದು ಒಂದು ಬಾರಿ ಅನ್ನುವ ಅದೇ ಮನಸ್ಸು ಇನ್ನೊಂದು ಬಾರಿ ಪಾತಾಳಕ್ಕೆ ಬಿದ್ದು ಎಲ್ಲವನ್ನೂ ಹರಿದುಂಬ ಮಹಾ ಸ್ವಾರ್ಥ ರಾಕ್ಷಸನೂ ಆಗುತ್ತದೆ. –ನನ್ನ ಭಯಾಗ್ರಫಿ–ಬೀಚಿ

ಚಿತ್ರ ವಿಚಿತ್ರ ಮನಸ್ಸು

ಹೊಗಳುವಂತಿದ್ದರೆ ತಮ್ಮನ್ನು ಮಾತ್ರ ಹೊಗಳಬೇಕು, ಮತ್ತೊಬ್ಬರನ್ನು ಹೊಗಳಿದರೆ, ಅವರ ಮುಂದೆ ಮತ್ತೊಬ್ಬರಿಗೆ ಮಾನ್ಯತೆ ನೀಡಿದರೆ ಅದನ್ನು ಕನಿಷ್ಠ ಪಕ್ಷ ಸಹಿಸುವ ಗುಣವು ಇಲ್ಲದಿರುವ ವಿಚಿತ್ರ ಸ್ವಭಾವ ಕೆಲವು ಮನಸ್ಸುಗಳಿಗಿರುತ್ತದೆ. ಹೊಗಳಿದರೆ ಅದು ತಮ್ಮನ್ನು ಮಾತ್ರ ಹೊಗಳಬೇಕು. ಯಾವ ಕಾರಣಕ್ಕೂ ತನ್ನ ತಪ್ಪುಗಳನ್ನು ಮತ್ತೊಬ್ಬರು ಗುರುತಿಸಬಾರದು, ಎದುರಿಗೆ ಹೇಳಬಾರದು, ಪ್ರಶ್ನಾತೀತ ವ್ಯಕ್ತಿತ್ವ ತನ್ನದು, ಧರೆಗಿಳಿದ ದೈವಮಾನವ, ಅವಧೂತ ತಾನು, ತನ್ನನ್ನು ಬಿಟ್ಟರೆ ಲೋಕದಲ್ಲಿಯೇ ಮತ್ತೊಬ್ಬರಿಲ್ಲ, ತಾನು ಪರಿಪೂರ್ಣತೆಯನ್ನು ಹೊಂದಿರುವ ಮನುಷ್ಯ ಎಂಬಂತಹ ಭ್ರಮೆಗಳನ್ನು ಹೊತ್ತ ಮನಸ್ಸುಗಳು ವಾಸ್ತವವನ್ನು ತಿಳಿಯದೇ, ಕನಿಷ್ಠ ತಿಳಿದು ಕೊಳ್ಳಲು ಬಯಸದೇ ಅತೃಪ್ತ ಆತ್ಮಗಳಂತೆ ತನ್ನ ಪರಿಧಿಯೊಳಗೆ ಮಾಯದ ಅರಮನೆ ಸೃಷ್ಟಿಸಿಕೊಂಡು ಅದರೊಳಗೆ ತನ್ನ ಗುಣವುಳ್ಳ ಇನ್ನಿತರ ಮನಸ್ಸುಗಳೊಂದಿಗೆ ಬೆರತು ತಾನೇ ರಾಜನೆಂಬ ಗರ್ವದಿಂದ ಮೆರೆಯುತ್ತಿರುತ್ತದೆ. ವಾಸ್ತವದ ಅರಿವಾದರೂ ಜಟ್ಟಿ ಜಾರಿ ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ಮೈಗೊಡವಿ ನಿಂತು ಕತ್ತಲಲ್ಲಿ ಇಲ್ಲದ ಕರಿಬೆಕ್ಕನ್ನು ಹುಡುಕುವ ಕೆಲಸವನ್ನು ಮಾಡುತ್ತಿರುತ್ತದೆ.

ಹೊಗಳಿಕೆ ತೆರೆದುಕೊಳ್ಳುವ ಗುಣವುಳ್ಳ ಮನಸ್ಸಿಗೆ, ತೆಗಳಿಕೆಗೂ ಕೂಡ ಹೊಂದಿಕೊಳ್ಳುವ ಗುಣವಿರಬೇಕು. ವಸ್ತುನಿಷ್ಠವಾಗಿ ಮಾತನಾಡುವವರ ಜೊತೆಗೆ, ಪೂರ್ವಗ್ರಹಪೀಡಿತರಾಗಿ ವರ್ತಿಸುವವರ ಜೊತೆ, ಅಸೂಯೆ ಪರರಾಗಿ ನಿಂದಿಸುವವರ ಮಾತುಗಳನ್ನು ಗ್ರಹಿಸುವ, ಸಕಾರಾತ್ಮಕವಾಗಿ ಸ್ವೀಕರಿಸುವ ಗುಣವನ್ನು ಬೆಳೆಸಿಕೊಳ್ಳಬೇಕು. ತನ್ನ ತಪ್ಪುಗಳನ್ನು ಭದ್ರವಾಗಿ ತಿಜೋರಿಯಲ್ಲಿ ಮುಚ್ಚಿಟ್ಟು ಮತ್ತೊಬ್ಬರ ತಪ್ಪುಗಳನ್ನು ವೈಭವೀಕರಿಸಿ ಎಲ್ಲರ ಮುಂದೆ ಎತ್ತಿ ತೋರಿಸಿ ಅತ್ಯಾನಂದ ಪಡುವ ಮನಸ್ಸುಗಳನ್ನು ನೋಡಿಯೂ ನೋಡದಂತೆ, ಹತ್ತಿರವಿದ್ದು ಹತ್ತಿರವಾಗದೇ ದೂರ ಸರಿದು ನಿಲ್ಲುವಂತೆ ಮಾಡಬೇಕು.

ಇಷ್ಟೆಲ್ಲಾ ಹೇಳಿದ ನಂತರವೂ ಒಳ್ಳೆಯದ್ದನ್ನು ಗುರುತಿಸುವ, ಮೆಚ್ಚಿ ಪ್ರೋತ್ಸಾಹ ನೀಡುವ, ಪರಸ್ಪರ ಸಹಕಾರ ನೀಡುವ, ಉತ್ತೇಜನ ಕೊಡುವ, ಒಳ್ಳೆಯ ಕೆಲಸಗಳಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸ್ಪಂದಿಸುವ ಮನಸ್ಸು ಉಳ್ಳವರು ಕೂಡ ಇದ್ದಾರೆ. ಆದರೆ ನಾವು ಭರವಸೆ ಕೊಡದವರೊಂದಿಗೆ, ಟೀಕೆ ಮಾಡುವುದನ್ನೇ ಖಾಯಂ ಕೆಲಸ ಮಾಡಿಕೊಂಡವರೊಂದಿಗೆ ಶಭ್ಬಾಸ್ ಗಿರಿ ಪಡೆಯಬೇಕೆಂಬ ಹುಚ್ಚು ಹಠದಲ್ಲಿ ನಮ್ಮತನವನ್ನಲ್ಲದೇ, ಸಮಯವನ್ನು ಕಳೆದುಕೊಂಡು ಸ್ವಚ್ಛವಾಗಿರುವ ಮನಸ್ಸನ್ನು ಕೆದಕಿ, ಕೆಣಕಿ ರಾಡಿ ಮಾಡಿಕೊಂಡು ಇರುವ ನೆಮ್ಮದಿಯನ್ನು ಕಳೆದುಕೊಂಡು ಕಾಣದ ಮರೀಚಿಕೆಯ ಬೆನ್ನತ್ತುವಂತೆ ಓಡುವ ಕೆಲಸವನ್ನು ಮಾಡುತ್ತಿದ್ದೇವೆ.

ಸುಖಿಯಾಗಿರುವ ಮನಸ್ಸಿಗೆ ಇಲ್ಲಸಲ್ಲದ ಸರಪಳಿಗಳನ್ನು ಬಿಗಿದು ಕಟ್ಟಿಹಾಕಿ ದುಃಖಕ್ಕೀಡು ಮಾಡುವುದಕ್ಕಿಂತ ಅದನ್ನು ಅದರಷ್ಟಕ್ಕೆ ಬಿಟ್ಟು ಕಡಿವಾಣ ನಿಯಂತ್ರಣದೊಂದಿಗೆ ಲಗಾಮನ್ನು ಇಟ್ಟುಕೊಂಡು ಸ್ವಚ್ಛಂದ ದಾರಿಯಲ್ಲಿ ವಿಹರಿಸುವಂತೆ ಬಿಡಬೇಕು. ನಿಜವಾದ ಸುಖವು ಹೊರಗಿನ ಸಂಪತ್ತಿನಲ್ಲಿ ಅಲ್ಲ, ನಮ್ಮ ಮನಸ್ಸಿನ ಶಾಂತಿ ಮತ್ತು ತೃಪ್ತಿಯಲ್ಲಿದೆ. ಜೀವನದಲ್ಲಿ ಏನೇ ಸವಾಲುಗಳು ಬಂದರೂ ಮನಸ್ಸನ್ನು ಸಮತೋಲನದಲ್ಲಿಟ್ಟುಕೊಂಡು, ಸಕಾರಾತ್ಮಕ ಚಿಂತನೆಗಳನ್ನು ಬೆಳೆಸಿದಾಗ ಮಾತ್ರ ನಾವೇ ನಮ್ಮ ಸುಖದ ನಿರ್ಮಾತೃಗಳಾಗುತ್ತೇವೆ. ಆದ್ದರಿಂದ ಮನಸ್ಸನ್ನು ನಿಯಂತ್ರಿಸಿಕೊಂಡು, ಆಸೆ–ಆಕಾಂಕ್ಷೆಗಳನ್ನು ಮಿತಿಗೊಳಿಸಿ, ಇರುವುದು ಸಾಕೆಂದು ತೃಪ್ತಿಯಿಂದ ಬದುಕಿದಾಗ ಮಾತ್ರ ನಿಜವಾದ ಸುಖವನ್ನು ಅನುಭವಿಸಲು ಸಾಧ್ಯ. ಕೊನೆಯಲ್ಲಿ, ಮನವೇ ಸುಖದ ಮೂಲವೆಂಬ ಸತ್ಯವನ್ನು ಅರಿತು ಅದನ್ನು ಸದಾ ಶುದ್ಧ, ಶಾಂತ ಮತ್ತು ಸಂತೋಷಕರವಾಗಿಟ್ಟುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ.

ಸರಿ ಇಲ್ಲದ ಮನಸ್ಸುಗಳ ಮಧ್ಯೆಯೇ
ಹೊಂದಾಣಿಕೆಯ ಮಾಡಿಕೊಂಡು
ಸಹಿಸಿಕೊಂಡು ತಾಳ್ಮೆಯಿಂದ
ಮುನ್ನಡೆಯುವುದೇ ಜೀವನ

'ಟ್ರಾಫಿಕ್ ಸಿಗ್ನಲ್ ಲೈಟ್ ಕಂಬಗಳ ಸರ್ಕಲ್' ಆಯ್ತು 'ಎಲ್ಜಿನ್ ಫೌಂಟೇನ್' ವೃತ್ತ!

ಮೈಸೂರು, ಮಾ.30(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಪಾರಂಪರಿಕ ಕುರುಹುಗಳಲ್ಲಿ ಒಂದಾಗಿರುವ 'ಎಲ್ಜಿನ್ ಫೌಂಟೇನ್' ವೃತ್ತವನ್ನು ಟ್ರಾಫಿಕ್ ಸಿಗ್ನಲ್ ಲೈಟ್ ಕಂಬಗಳಿಂದ ಮರೆ ಮಾಚಲಾಗಿದೆ...!

ಮೈಸೂರು–ಬೆಂಗಳೂರು ನೀಲಗಿರಿ ರಸ್ತೆ ಹಾಗೂ ಅಶೋಕ ರಸ್ತೆ ಜಂಕ್ಷನ್‌ನಲ್ಲಿರುವ ಐತಿಹಾಸಿಕ ಎಲ್ಜಿನ್ ಫೌಂಟೇನ್ ವೃತ್ತದ ಮಧ್ಯ ಹಾಗೂ ವೃತ್ತದ ಸುತ್ತಲೂ ಸಿಗ್ನಲ್ ಲೈಟ್ ಕಂಬಗಳನ್ನು ಅಳವಡಿಸುವ ಮೂಲಕ ಕಾರಂಜಿಯೊಂದಿಗಿನ ಆಕರ್ಷಕ ವಿನ್ಯಾಸವೂ ಕಾಣದಂತೆ ಮಾಡಲಾಗಿದೆ.

ಎನ್.ಆರ್.ಮೊಹಲ್ಲಾದಲ್ಲಿರುವ ಪ್ರಮುಖ ಆಕರ್ಷಣೆಯೂ ಆಗಿರುವ ಬೆಂಗಳೂರು ಕಡೆಯಿಂದ ಮೈಸೂರಿನತ್ತ ಬರುವವರನ್ನು ಸ್ವಾಗತಿಸುವ ಎಲ್ಜಿನ್ ಫೌಂಟೇನ್ ವೃತ್ತದಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್‌ಗಳೇ ಕಣ್ಣಿಗೆ ರಾಚುತ್ತಿದ್ದು, ಐತಿಹಾಸಿಕ ಕುರುಹು ಕಣ್ಮರೆಯಾದಂತಾಗಿದೆ.

ನಗರದಲ್ಲಿ ವಾಹನ ದಟ್ಟಣೆ ನಿಯಂತ್ರಿಸುವ ಹಾಗೂ ಸುಗಮ ಸಂಚಾರಕ್ಕಾಗಿ ಹಳೆಯ 53 ಸಿಗ್ನಲ್‌ಗಳ ಜೊತೆಗೆ ಹೊಸದಾಗಿ 43 ಸಿಗ್ನಲ್‌ಗಳನ್ನು ಅಳವಡಿಸಿದೆ. ಸಿಗ್ನಲ್ ಅಳವಡಿಕೆ ಉದ್ದೇಶ ಒಳ್ಳೆಯದೇ ಆದರೂ ಪಾರಂಪರಿಕ ಕುರುಹುಗಳು ಕಾಣದಂತೆ ಮಾಡುವುದು ಸರಿಯಲ್ಲ ಎಂಬ ಆಕ್ಷೇಪ ವ್ಯಕ್ತವಾಗಿದೆ.





ಭಾರತದ ವೈಸ್‌ರಾಯ್ ಆಗಿದ್ದ ಲಾರ್ಡ್ ಎಲ್ಜಿನ್ 1895ರ ನ.20ರಂದು ಮೈಸೂರಿಗೆ ಭೇಟಿ ನೀಡಿದ್ದರ ಸ್ಮರಣಾರ್ಥ ಈ ವೃತ್ತವನ್ನು ಅಭಿವೃದ್ಧಿಪಡಿಸಲಾಯಿತು ಎಂಬ ಐತಿಹ್ಯವಿದೆ. ಅಲ್ಲದೆ ಪ್ರತೀ ವರ್ಷ ದಸರಾ ಸಂದರ್ಭದಲ್ಲಿ ವಿದ್ಯುತ್ ದೀಪಾಲಂಕಾರದೊಂದಿಗೆ ಕಂಗೊಳಿಸುವ ವೃತ್ತದಲ್ಲಿ ಐದಾರು ಸಿಗ್ನಲ್ ಲೈಟ್ ಕಂಬಗಳನ್ನು ನೆಟ್ಟು ಮರೆ ಮಾಡಿರುವುದಕ್ಕೆ ಹಲವರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

2023ರಲ್ಲಿ ಮೈಸೂರು ಮಹಾನಗರ ಪಾಲಿಕೆಯು ಈ ಫೌಂಟೇನ್ ವೃತ್ತವನ್ನು ನೆಲಸಮಗೊಳಿಸಿ ಅದೇ ವಿನ್ಯಾಸದಲ್ಲಿ ಹೊಸದಾಗಿ ನಿರ್ಮಾಣ ಮಾಡಲು ಮುಂದಾಗಿತ್ತು. ಆದರೆ ಅಂದಿನ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ವೃತ್ತದ ಐತಿಹಾಸಿಕ ಹಿನ್ನಲೆ ತಿಳಿದು ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಪೈಂಟಿಂಗ್ ಹಾಗೂ ಸುತ್ತಲೂ ಗ್ರಿಲ್ ಅಳವಡಿಸುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಆದ ರೀಗ ವೃತ್ತವನ್ನು ನೆಲಸಮ ಮಾಡದೇ ಇದ್ದು ಇಲ್ಲದಂತಾಗಿಸುವ ನಿಟ್ಟಿನಲ್ಲಿ ನಗರ ಪೊಲೀಸ್ ಇಲಾಖೆ ನಡೆದುಕೊಳ್ಳುತ್ತಿದೆ ಎಂದು ಕಿಡಿಕಾರಿದ್ದಾರೆ.

> “ಬನ್ನಿಮಂಟಪದಲ್ಲಿ ಅತ್ಯಾಕರ್ಷಕ ಆನೆ ಪ್ರತಿಮೆಗಳಿರುವ ಮೌಲಾನಾ ಅಬ್ದುಲ್ ಕಲಾಂ ಅಜಾದ್ ವೃತ್ತ(ಹೈವೇ ವೃತ್ತ)ದ ಮಧ್ಯದಲ್ಲೂ ಸಿಗ್ನಲ್ ಲೈಟ್ ಕಂಬಗಳನ್ನು ನಿಲ್ಲಿಸಿ, ಆನೆ ಪ್ರತಿಮೆಯನ್ನು ಮರೆ ಮಾಚಲಾಗಿತ್ತು. ನಂತರ ವ್ಯಾಪಕ ವಿರೋಧ ವ್ಯಕ್ತವಾದ ಬೆನ್ನಲ್ಲೆ ತೆರವುಗೊಳಿಸಿ, ಸೂಕ್ತ ಸ್ಥಳಗಳಲ್ಲಿ ಸಿಗ್ನಲ್ ಲೈಟ್ ಕಂಬಗಳನ್ನು ಅಳವಡಿಸಲಾಯಿತು. ಅದರಂತೆ ಐತಿಹಾಸಿಕ ಎಲ್ಜಿನ್ ಫೌಂಟೇನ್ ವೃತ್ತದಲ್ಲಿರುವ ಸಿಗ್ನಲ್ ಕಂಬಗಳನ್ನು ತೆರವುಗೊಳಿಸಿ, ಫೌಂಟೇನ್ ಕಲಾಕೃತಿ ಸಂರಕ್ಷಣೆಯಾಗಬೇಕು.
> –ಮೈಸೂರಿನ ಪ್ರಜ್ಞಾವಂತ ನಾಗರಿಕರು.

ಪ್ರಸ್ತುತ ಮೈಸೂರು–ಬೆಂಗಳೂರು ರಸ್ತೆ ಹಾಗೂ ಅಶೋಕ ರಸ್ತೆ ಜಂಕ್ಷನ್‌ನಲ್ಲಿರುವ ಎಲ್ಜಿನ್ ಫೌಂಟೇನ್ ಕಲಾಕೃತಿ ಮೊದಲು ಕೆ.ಆರ್.ವೃತ್ತದಲ್ಲಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆ ಸ್ಥಾಪನೆ ವೇಳೆ ಅಂದರೆ 1951–52ರ ವೇಳೆ

ಮೈಸೂರಲ್ಲಿ ಮತ್ತೊಂದು ಅಂದಗೆಡಿಸುವ ಕಾರ್ಯಕ್ಕೆ ಸಾರ್ವಜನಿಕರ ಬೇಸರ

ಎಲ್ಜಿನ್ ಫೌಂಟೇನ್ ಕಲಾಕೃತಿಯನ್ನು ಧನ್ವಂತರಿ ರಸ್ತೆಗೆ ಸ್ಥಳಾಂತರಿಸಲಾಯಿತು. 1985ರ ನಂತರ ಧನ್ವಂತರಿ ರಸ್ತೆಯಿಂದ ಪ್ರಸ್ತುತ ಸ್ಥಳದಲ್ಲಿ ಸ್ಥಾಪಿಸಲಾಯಿತು. ಇಂತಹ ಐತಿಹಾಸಿಕ ಹಿನ್ನಲೆಯುಳ್ಳ ಎಲ್ಜಿನ್ ಫೌಂಟೇನ್ ಎಲ್ಲರ ಆಕರ್ಷಣೆಯಾಗಿದೆ ಎಂದು ಪಾರಂಪರಿಕ ತಜ್ಞ ಪ್ರೊ.ರಂಗರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಯುಳ್ಳ ಕೆ.ಆರ್. ವೃತ್ತವನ್ನು ಅಂದು ಸರ್.ಎಂ.ವಿಶ್ವೇಶ್ವರಯ್ಯ ಅವರು ಉದ್ಘಾಟಿಸಿದ್ದರು. ಆದರೆ, ಇತ್ತೀಚಿನ ವರ್ಷಗಳಲ್ಲಿ ಮೈಸೂರಿನ ಪರಂಪರೆಯನ್ನು ಕುಗ್ಗಿಸುವ ಕೆಲಸಗಳಾಗುತ್ತಿವೆ. ನಿರ್ವಹಣೆ ಇಲ್ಲದೆ ಪ್ರಮುಖ ವೃತ್ತಗಳ ಕಳೆಗುಂದುತ್ತಿವೆ ಎಂದು ವಿಷಾದಿಸಿದರು.

ತೆರವುಗೊಳಿಸಲು ಆಗ್ರಹ: 'ಎಲ್ಜಿನ್ ಫೌಂಟೇನ್' ವೃತ್ತದಲ್ಲಿ ಅಳವಡಿಸಿರುವ ಟ್ರಾಫಿಕ್ ಸಿಗ್ನಲ್ ಲೈಟ್ ಕಂಬಗಳನ್ನು ತೆರವುಗೊಳಿಸಬೇಕು. ಇಲ್ಲವೇ ಸಿಗ್ನಲ್ ಲೈಟ್ ಕಂಬಗಳನ್ನು ಬೇರೆ ಜಾಗದಲ್ಲಿ ಅಳವಡಿಸಿ ವೃತ್ತದಲ್ಲಿನ ಕಲಾಕೃತಿ ಕಾಣುವಂತೆ ಮಾಡಬೇಕು ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು ಆಗ್ರಹಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಮಸ್ಯೆ ನಡುವೆಯೂ ಮಹಿಳೆಯರಿಂದ ಯಶಸ್ಸಿನ ಹೆಜ್ಜೆ

ಹೊಯ್ಸಳ ಕರ್ನಾಟಕ ಸಂಘದಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಮೈಸೂರು, ಮಾ. 30– ಎಲ್ಲ ರಂಗಗಳಲ್ಲೂ ದಾಪುಗಾಲಿಡುತ್ತಿರುವ, ಅಂತಹ ಎಲ್ಲ ಕ್ಷೇತ್ರಗಳಲ್ಲಿಯೂ ಒಂದಿಲ್ಲೊಂದು ಸಮಸ್ಯೆ, ಸಂಭ್ರಮ ಎಲ್ಲವನ್ನೂ ಎದುರಿಸುತ್ತಲೇ ಮಹಿಳೆ ಯಶಸ್ವಿಯಾಗಿ ಮುನ್ನಡೆಯುತ್ತಿರುವುದು ಸಂತೋಷದ ಸಂಗತಿ ಎಂದು ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್ ಹೇಳಿದರು.

ನಗರದ ಲಕ್ಷ್ಮೀಪುರಂ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಹೊಯ್ಸಳ ಕರ್ನಾಟಕ ಸಂಘದಲ್ಲಿ ಹೊಯ್ಸಳ ಕರ್ನಾಟಕ ಸಂಘದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ ಸಾಧನೆ ಮಾಡಿದ ಹೊನ್ನಾರತಿ ಗೌರಿ ಎಸ್. ಭಾರದ್ವಾಜ್, ನೇತ್ರ ರಘುನಂದನ್, ಮಂಗಳಾ ರಾಮಮೂರ್ತಿ, ಲಕ್ಷ್ಮೀ ಕುಮಾರ್, ಸ್ವರ್ಣಲತಾ ನಾಗರಾಜ್, ಡಾ. ಅಶ್ವಿನಿ ಎಸ್. ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಮಹಿಳೆ ತನ್ನ ನಿರಂತರ ಶ್ರಮ, ಶ್ರದ್ಧೆಯ ಫಲವಾಗಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯ, ಶೈಕ್ಷಣಿಕ ರಂಗದಲ್ಲಿ ಮುನ್ನಡೆದಿದ್ದಾಳೆ. ಹೇಳಿಕೊಳ್ಳಲಾಗದ ಸಮಸ್ಯೆಗಳ ನಡುವೆಯೂ ಯಶಸ್ಸಿನ ಹೆಜ್ಜೆ ಇರಿಸಿದ್ದಾಳೆ. ತನ್ನ ಅರಿವಿನ ಹಂದರ ಇನ್ನಷ್ಟು ವಿಸ್ತಾರಗೊಳಿಸಿದ್ದಾಳೆ ಎಂದರು.

ಈ ಎಲ್ಲ ಯಶಸ್ವಿನ ನಡುವೆಯೂ ಗಂಭೀರ ಹೊಣೆಗಾರಿಕೆಯೂ ಆಕೆಯ ಹೆಗಲಿನಲ್ಲಿದೆ. ಮನೆ, ಉದ್ಯೋಗ, ಸಮಾಜ ಎಲ್ಲದರ ನಡುವೆ ಸಮತೋಲನ ಸಾಧಿಸಬೇಕಾದ ದೃಢ ಚಿತ್ತ ಗಳಿಸಬೇಕಾದ ಸವಾಲು ಅವಳ ಮುಂದಿದೆ. ಇದನ್ನು ಯಶಸ್ವಿಯಾಗಿ ನಿಭಾಯಿಸುವ ಹಂತವನ್ನು ನಿಧಾನವಾಗಿ ತಲುಪುತ್ತಿದ್ದಾಳೆ ಎಂಬುದು ಗುರುತಿಸಬೇಕಾದ ಬೆಳವಣಿಗೆ ಎಂದರು.

ಉಪಾಧ್ಯಕ್ಷೆ ಎಸ್.ಎನ್. ಶ್ರೀಮತಿ, ಕಾರ್ಯದರ್ಶಿ ಎಸ್.ಎನ್.ಜಯಸಿಂಹ, ಸಹ ಕಾರ್ಯದರ್ಶಿ, ಎಚ್.ಎ.ವಿಜಯಕುಮಾರ್, ಖಜಾಂಚಿ, ಸುಂದರಮೂರ್ತಿ ಕಾರ್ಯಕಾರಿ ಸಮಿತಿ ಸದಸ್ಯ ಡಾ.ವಿದ್ಯಾಶಂಕರ ಡಿ.ಎಸ್, ವೆಂಕಟೇಶ ಪ್ರಸಾದ್‌ಬಿ.ಕೆ., ಅನುಪಮ ಕೆ. ವೀಣಾ ಜಿ.ಆರ್. ಶೈಲಜಾ ಶ್ರೀಲಕ್ಷ್ಮೀ ಎಂ.ಆರ್. ಹೊಯ್ಸಳ ಚಾರಿಟಬಲ್ ಟ್ರಸ್ಟ್‌ನ ವಿಜಯ ಪ್ರಸಾದ್, ಸಂಧ್ಯಾ ನಂದ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ವಿಜಯನಗರದಲ್ಲಿ ಮನೆ ಬೀಗ ಮುರಿದು 7.53 ಲಕ್ಷ ರೂ. ನಗ–ನಾಣ್ಯ ದೋಚಿ ಪರಾರಿ



ಮೈಸೂರು, ಮಾ.30(ಜಿಎ)–ಮನೆಯೊಂದರ ಬೀಗ ಮುರಿದು ಕಳ್ಳರು 7.53 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಮತ್ತು ನಗದು ದೋಚಿಕೊಂಡು ಹೋಗಿರುವ ಘಟನೆ ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದೆ.

ಮೈಸೂರಿನ ವಿಜಯನಗರ 4ನೇ ಹಂತ 2ನೇ ಘಟ್ಟದ ಮುಖ್ಯರಸ್ತೆಯಲ್ಲಿರುವ ಹೆಚ್.ಆರ್.ರಘು ಅವರ ಮನೆಯಲ್ಲಿ ಈ ಕಳ್ಳತನ ನಡೆದಿದೆ. ರಘು ಅವರು ಮಾ.28ರಂದು ಮಧ್ಯಾಹ್ನ ಮನೆಗೆ ಬೀಗ ಹಾಕಿಕೊಂಡು ಆಲನಹಳ್ಳಿಯಲ್ಲಿರುವ ಅಕ್ಕನ ಮನೆಗೆ ಕುಟುಂಬ ಸಮೇತ ತೆರಳಿದ್ದಾರೆ. ಮಾ.29ರಂದು ಬೆಳಗಿನ ಜಾವ 4.30ಕ್ಕೆ ಮನೆಗೆ ಬಂದು ನೋಡಿದಾಗ ಮನೆ ಮುಂಬಾಗಿಲು ತೆಗೆದಿತ್ತು. ಯಾವುದೋ ಚೂಪಾದ ಆಯುಧದಿಂದ ಬಾಗಿಲನ್ನು ಮೀಟಿ ಬೀಗ ಮುರಿದು ಮನೆಯೊಳಗೆ ಕಳ್ಳರು ನುಗ್ಗಿರುವುದು ಕಂಡು ಬಂದಿತು.

ಇದರಿಂದ ಗಾಬರಿಗೊಂಡ ರಘು ಮನೆಯ ಒಳಗೆ ಹೋಗಿ ನೋಡಿದಾಗ ಕಳ್ಳರು ಮನೆಯಲ್ಲಿದ್ದ ಬೀರು, ಕಬೋರ್ಡ್‌ಗಳನ್ನು ಜಾಲಾಡಿ ಬಟ್ಟೆ ಮತ್ತು ವಸ್ತುಗಳನ್ನು ಚೆಲ್ಲಾಪಿಲ್ಲಿಗೊಳಿಸಿ ಬೀರು ಡ್ರಾಯರ್‌ನಲ್ಲಿದ್ದ 30 ಗ್ರಾಂ, 23 ಗ್ರಾಂ ತೂಕದ ಚಿನ್ನದ ಚೈನ್, 13 ಗ್ರಾಂ ತೂಕದ ಎರಡು ಉಂಗುರ, 230 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ದೀಪ, 10 ಕೈಗಡಿಯಾರ ಹಾಗೂ 50 ಸಾವಿರ ರೂ. ನಗದು ಹಾಗೂ ಇತರೆ ಬೆಲೆಬಾಳುವ ವಸ್ತುಗಳು ದೋಚಿಕೊಂಡು ಹೋಗಿರುವುದು ತಿಳಿಯಿತು. ಈ ಸಂಬಂಧ ವಿಜಯನಗರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ತೃತೀಯ ಭಾಷೆ ನಿರ್ಲಕ್ಷ್ಯದಿಂದ ಶಿಕ್ಷಣ ವ್ಯವಸ್ಥೆಗೆ ಧಕ್ಕೆ

ಮುಖ್ಯಮಂತ್ರಿ, ಶಿಕ್ಷಣ ಸಚಿವರಿಗೆ ಪತ್ರ ಬರೆದ ವಿಧಾನಪರಿಷತ್ ಸದಸ್ಯ ವಿವೇಕಾನಂದ

ಮೈಸೂರು, ಮಾ.30(ಜಿಎ)–ತೃತೀಯ ಭಾಷೆಯ ನಿರ್ಲಕ್ಷ ಶಿಕ್ಷಣ ವ್ಯವಸ್ಥೆಗೆ ದೊಡ್ಡ ಹೊಡೆತ ನೀಡುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಣದಲ್ಲಿ ಭಾಷಾ ಬೋಧನೆಯ ಗಾಂಭಿರ್ಯತೆ ಅರಿತು ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕೆಂದು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಒತ್ತಾಯಿಸಿದ್ದಾರೆ.

ಮೈಸೂರಿನ ಜಲದರ್ಶಿನಿಯಲ್ಲಿರುವ ವಿವೇಕಾನಂದ ಅವರ ಕಚೇರಿಗೆ ಸೋಮವಾರ ಮೈಸೂರು ಮತ್ತು ಚಾಮರಾಜನಗರ ಹಿಂದಿ ಭಾಷಾ ಶಿಕ್ಷಕರ ಸಂಘದ ಪದಾಧಿಕಾರಿಗಳು ಭೇಟಿ ನೀಡಿ ತೃತೀಯ ಭಾಷಾ ನಿರ್ಲಕ್ಷ್ಯ ಮತ್ತು ತೃತೀಯ ಭಾಷಾ ಬೋಧಿಸುವ ಶಿಕ್ಷಕರ ಹುದ್ದೆಗೆ ಕಂಟಕವಾಗಲಿದೆ. ಈ ವಿಚಾರವಾಗಿ ಸರ್ಕಾರ ದೊಂದಿಗೆ ಚರ್ಚಿಸಬೇಕೆಂದು ಕೋರಿಕೊಂಡರು.

ಈ ವೇಳೆ ವಿವೇಕಾನಂದರು ನಾನು ಈಗಾಗಲೇ ಸರ್ಕಾರದ ಈ ಭಾಷಾ ವಿರೋಧಿ ನೀತಿಯನ್ನು ವಿರೋಧಿಸುತ್ತಿದ್ದೇನೆ. ಶಿಕ್ಷಕರಿಗೆ ಯಾವುದೇ ರೀತಿ ಸಮಸ್ಯೆಯಾಗದಂತೆ ಮುಖ್ಯಮಂತ್ರಿಗಳು ಹಾಗೂ ಶಿಕ್ಷಣ ಮಂತ್ರಿಗಳ ಗಮನಕ್ಕೆ ತರುತ್ತೇನೆ ಎಂದು ಭರವಸೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಿಕ್ಷಣ ಸಚಿವ ಮಧು ಬಂಗಾರಪ್ಪರಿಗೆ ಪತ್ರ ಬರೆದು, ಶಾಲಾ ಶಿಕ್ಷಣ ಇಲಾಖೆಯಲ್ಲಿ ತೃತೀಯ ಭಾಷೆಗಳಾದ ಹಿಂದಿ, ಮರಾಠಿ, ತೆಲುಗು, ಉರ್ದು, ಸಂಸ್ಕೃತ ಹಾಗೂ ಕನ್ನಡ ಭಾಷೆಗಳ ವಿಷಯವನ್ನು ರದ್ದುಪಡಿಸಿ ಕೇವಲ 525 ಅಂಕಗಳಿಗೆ ಸೀಮಿತಗೊಳಿಸುತ್ತಿರುವುದು ಅತ್ಯಂತ ವಿಷಾದನೀಯ ಸಂಗತಿಯಾಗಿದೆ. ಮೂರನೇ ಭಾಷೆ ಅಂದರೆ ಕೇವಲ ಹಿಂದಿ ಭಾಷೆ ಅಲ್ಲ ಅನೇಕ ಭಾಷೆಗಳ ಸಮೂಹ ಎಂದರು.

ರಾಜ್ಯಾದ್ಯಂತ ತೃತೀಯ ಭಾಷೆ ಬೋಧನೆ ಮಾಡುವ ಸಾವಿರಾರು ಶಿಕ್ಷಕರು ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಬೋಧಿಸುತ್ತಾ ಬಂದಿದ್ದಾರೆ. ಅಲ್ಲದೆ ಭಾಷಾ ಕಲಿಕೆಯಿಂದ ವಿದ್ಯಾರ್ಥಿಗಳಲ್ಲಿ ಸಂಪರ್ಕ ಭಾಷೆಗಳ ಮೇಲೆ ಹಿಡಿತವನ್ನು ಸಾಧಿಸಿ ಬೇರೆ ಬೇರೆ ಹುದ್ದೆಗಳಿಗೆ ಸೇರಿಕೊಂಡಾಗ ಇದರ ಉಪಯೋಗವಾಗುತ್ತದೆ. ಅದರಲ್ಲು ತೃತೀಯ ಭಾಷೆಯ ಬಗ್ಗೆ ಪರೀಕ್ಷಾ ಸಮಯದಲ್ಲಿ ಚರ್ಚೆಗೆ ಬಂದಿರುವುದು ಅಷ್ಟು ಸರಿಯಲ್ಲ ಇದು ಮಕ್ಕಳ ಕಲಿಕೆಯ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ ಎಂದು ಹೇಳಿದರು.



ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರಿಗೆ ಮೈಸೂರು ಮತ್ತು ಚಾಮರಾಜನಗರ ಹಿಂದಿ ಭಾಷಾ ಶಿಕ್ಷಕರ ಸಂಘದ ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ತೃತೀಯ ಭಾಷಾ ಹಕ್ಕನ್ನು ಕಸಿದುಕೊಳ್ಳುತ್ತಿರುವ ಮಕ್ಕಳಲ್ಲಿ ಭಾಷಾ ಸಾಮರ್ಥ್ಯ ಕುಸಿಯುತ್ತದೆ. ಅಲ್ಲದೆ ಮಕ್ಕಳಲ್ಲಿ ಭಾವೈಕ್ಯತೆಯ ಮನೋಭಾವನೆ ಕುಂಠಿತಗೊಳ್ಳುವ ಸಾಧ್ಯತೆಯಿದೆ. ಒಟ್ಟಾರೆಯಾಗಿ ಹೇಳುವುದಾರೆ ತೃತೀಯ ಭಾಷೆಯ ನಿರ್ಲಕ್ಷ ಶಿಕ್ಷಣ ವ್ಯವಸ್ಥೆಗೆ ದೊಡ್ಡ ಹೊಡೆತ ನೀಡುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಣದಲ್ಲಿ ಭಾಷಾ ಬೋಧನೆಯ ಗಾಂಭಿರ್ಯತೆ ಅರಿತು ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕೆಂದು ಎಂದು ಪತ್ರದ ಮೂಲಕ ಸರ್ಕಾರವನ್ನು ವಿಧಾನಪರಿಷತ್ ಸದಸ್ಯ ವಿವೇಕಾನಂದ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲೆಯ ಹಿಂದಿ ಭಾಷಾ ಶಿಕ್ಷಕರ ಸಂಘದ ಅಧ್ಯಕ್ಷ ನಾಗರಾಜ್ ಶರ್ಮ, ಮೈಸೂರು ಜಿಲ್ಲೆಯ ಹಿಂದಿ ಭಾಷಾ ಶಿಕ್ಷಕರ ಸಂಘದ ಅಧ್ಯಕ್ಷ ಮುರಳಿ ಮತ್ತಿತರರು ಉಪಸ್ಥಿತರಿದ್ದರು.

ಸಂಗೀತವು ಮುದ ನೀಡುವುದರ ಜೊತೆಗೆ ಎಲ್ಲವನ್ನು ಮರೆಸುವ ಶಕ್ತಿ ಹೊಂದಿದೆ



ಮಹಿಳಾ ದಿನಾಚರಣೆ ಅಂಗವಾಗಿ ಶ್ರೀ ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಪ್ರಜ್ಞಾ ಮರಾಠೆ ಅವರ ರಸಮಂಜರಿ ಕಾರ್ಯಕ್ರಮವನ್ನು ವೀಣಾ ಎಸ್.ಎ. ಉದ್ಘಾಟಿಸಿದರು.

ಮೈಸೂರು,ಮಾ.30–ಸಂಗೀತವು ಮನಸ್ಸಿಗೆ ಮುದ ನೀಡುತ್ತದೆ ಹಾಗೂ ಸಂಗೀತಕ್ಕೆ ಎಲ್ಲವನ್ನೂ ಮರೆಸುವ ಶಕ್ತಿ ಇದೆ ಎಂದು ನಗರದ ಸರಸ್ವತಿಪುರಂ ವಿಜಯ ವಿಠಲ ವಿದ್ಯಾಶಾಲೆಯ ಪ್ರಾಂಶುಪಾಲರಾದ ವೀಣಾ ಎಸ್.ಎ. ಅಭಿಪ್ರಾಯಪಟ್ಟರು.

ಮಹಿಳಾ ದಿನಾಚರಣೆ ಅಂಗವಾಗಿ ಶ್ರೀ ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್ ವತಿಯಿಂದ ನಗರದ ಕೃಷ್ಣಮೂರ್ತಿಪುರಂನ ಬಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ಏರ್ಪಡಿಸಿದ್ದ ಗಾಯಕಿ ಪ್ರಜ್ಞಾ ಮರಾಠೆ ಅವರ ರಸಮಂಜರಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಸಮರ್ಪಣ ಸಂಸ್ಥೆಯ ಕಾರ್ಯದರ್ಶಿ ಡಾ.ಸುಧಾ ಫಣೀಶ್ ಮಾತನಾಡಿ, ಸ್ವಾತಂತ್ರ್ಯ ವೀರರ ಸಂತತಿಯುಳ್ಳವರು ಚಿತ್ಪಾವನರು. ಚಿತ್ಪಾವನ ಮಹಿಳೆಯರು ಬಹಳ ಗಟ್ಟಿಗರು ಎಂದರು.

ಚಿತ್ಪಾವನ ಮಹಿಳೆಯರಿಗೆ ಅಗತ್ಯ ಮುಖ್ಯಸ್ಥರಾದ ನೆರವು ನೀಡುವುದು, ರಾಜ್ಯಾದ್ಯಂತ ಆಗಾಗ್ಗೆ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಟ್ರಸ್ಟ್ ಧ್ಯೇಯವಾಗಿದೆ ಎಂದು ಟ್ರಸ್ಟ್ ಅಧ್ಯಕ್ಷೆ ವೀಣಾ ಡೋಂಗ್ರೆ ಹೇಳಿದರು.

ಶ್ರೀ ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್ ಬೆಂಗಳೂರು ವಿಭಾಗದ ಮುಖ್ಯಸ್ಥರಾದ ಸುಮಾ ಪಟವರ್ಧನ್, ಟ್ರಸ್ಟ್ ಕಾರ್ಯದರ್ಶಿ ಸುಜಲಾ ಗೋರೆ, ಕೋಶಾಧಿಕಾರಿ ದೀಪಾ ಹೆಬ್ಬಾರ್, ಸದಸ್ಯೆ ಮಧುರಾ ತಾಮ್ಹನ್‌ಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಂತರ ನಡೆದ ರಸಮಂಜರಿ ಕಾರ್ಯಕ್ರಮದಲ್ಲಿ ಬೆಂಗಳೂರಿನ ಜೀ ಕನ್ನಡದ ಸರಿಗಮಪ ಖ್ಯಾತಿಯ ಕಲಾವಿದರಾದ ಪ್ರಜ್ಞಾ ಮರಾಠೆ ಮತ್ತು ಅನ್ವಿತ್ ಕುಮಾರ್ ಅವರು 70–80ರ ದಶಕದ ಕನ್ನಡ ಸಿನಿಮಾದ ಹಾಡುಗಳನ್ನು ಹಾಡಿದರು.

ಕಾರ್ಯಕ್ರಮದಲ್ಲಿ ವಿಜಯ ವಿಠಲ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ವಾಸುದೇವ ಭಟ್, ಲೇಖಕಿ ವಿಜಯಾ ವಿಷ್ಣುಭಟ್, ವಿಪ್ರ ಮಹಿಳಾ ಸಂಗಮದ ಅಧ್ಯಕ್ಷರಾದ ಡಾ.ಕೆ.ವಿ.ಲಕ್ಷ್ಮೀದೇವಿ, ನೃತ್ಯಗಿರಿಯ ನಿರ್ದೇಶಕಿ ಕೃಪಾ ಫಡ್ಕೆ ಹಾಜರಿದ್ದರು. ತುಳಸಿ ಗೋರೆ ಪ್ರಾರ್ಥಿಸಿದರು. ರಂಜಿನಿ ಹೆಬ್ಬಾರ್ ಅತಿಥಿಗಳನ್ನು ಪರಿಚಯಿಸಿದರು.

ತಂದೆ–ತಾಯಿ ನಿರ್ಲಕ್ಷ್ಯಿಸುವ ಸರ್ಕಾರಿ ನೌಕರರ ವೇತನ ಕಡಿತ!



ರೇವಂತ್ ರೆಡ್ಡಿ

ಹೈದರಾಬಾದ್: ಸರ್ಕಾರಿ ನೌಕರರ ತಂದೆ–ತಾಯಿಯ ನೆಮ್ಮದಿಗಾಗಿ ತೆಲಂಗಾಣ ಸರ್ಕಾರ ಮಾದರಿ ಕ್ರಮಕ್ಕೆ ಮುಂದಾಗಿದೆ. ತಂದೆ–ತಾಯಿಯನ್ನು ನೋಡಿಕೊಳ್ಳದೇ ನಿರ್ಲಕ್ಷ್ಯ ವಹಿಸಿದ ಸರ್ಕಾರಿ ನೌಕರರ ವೇತನ ಕಡಿತಗೊಳಿಸುವ 'ತೆಲಂಗಾಣ ನೌಕರರ ಹೊಣೆಗಾರಿಕೆ ಮತ್ತು ಪೋಷಕರ ಬೆಂಬಲ ಮೇಲ್ವಿಚಾರಣೆ ಮಸೂದೆ–2026' ಅನ್ನು ಅಲ್ಲಿನ ವಿಧಾನಸಭೆ ಅಂಗೀಕರಿಸಿದೆ. ನಿರ್ಲಕ್ಷ್ಯಕ್ಕೊಳಗಾದ ಪೋಷಕರಿಗೆ ಆರ್ಥಿಕ ಭದ್ರತೆಯನ್ನು ಖಾತ್ರಿಪಡಿಸುವ ಗುರಿಯನ್ನು ಈ ಮಸೂದೆ ಹೊಂದಿದೆ. ನೌಕರರ ವೇತನದ ಶೇ.15ರಷ್ಟು ಹಣವನ್ನು ಕಡಿತಗೊಳಿಸಿ ಅವರ ತಂದೆ–ತಾಯಿ ಖಾತೆಗೆ ಹಾಕುವ ಬಗ್ಗೆ ಉಲ್ಲೇಖಿಸಲಾಗಿದೆ. ಮಸೂದೆ ಅಂಗೀಕರಿಸಿದ ಬಳಿಕ ವಿಧಾನಸಭೆಯಲ್ಲಿ ಮಾತನಾಡಿರುವ ಸಿಎಂ ರೇವಂತ್ ರೆಡ್ಡಿ, ಇದು ಸಾಮಾಜಿಕ ಜವಾಬ್ದಾರಿಯಾಗಿದ್ದು, ನಿರ್ಲಕ್ಷ್ಯದ ಪ್ರಕರಣಗಳಲ್ಲಿ ಪೋಷಕರಿಗೆ ಪಾವತಿಸಲು ನೌಕರರ ವೇತನದ ಶೇ.15ರಷ್ಟು ಅಥವಾ 10,000 ರೂ., ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಕಡಿತಗೊಳಿಸಿ ಕಾನೂನು ಕಡ್ಡಾಯಗೊಳಿಸುತ್ತದೆ ಎಂದರು.

ಏ.4, ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಸ್ವಾತಿ ನಕ್ಷತ್ರ ಪೂಜೆ

ಮೈಸೂರು: ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಏ.4ರಂದು ಸ್ವಾತಿ ನಕ್ಷತ್ರ ವಿಶೇಷ ಪೂಜೆಯನ್ನು ದೇವಸ್ಥಾನದ ಸಂಸ್ಥಾಪಕ ಡಾ. ಶ್ರೀ ಭಾಷ್ಯಂ ಸ್ವಾಮೀಜಿ ನೇತೃತ್ವದಲ್ಲಿ ನಡೆಸಲಾಗುವುದು ಎಂದು ಆಡಳಿತಾಧಿಕಾರಿ ಶ್ರೀನಿವಾಸನ್ ತಿಳಿಸಿದ್ದಾರೆ. ಅಂದು ಬೆಳಗ್ಗೆ 9 ಗಂಟೆಗೆ ಪೂಜೆ ಆರಂಭವಾಗಿ ಮಧ್ಯಾಹ್ನ 12 ಗಂಟೆಗೆ ಪ್ರಸಾದ ವಿತರಿಸಲಾಗುವುದು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಏ.2ರಂದು ಮಹಾ ಮೃತ್ಯುಂಜಯ ಹೋಮ

ಮೈಸೂರು, ಮಾ.30– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಏಪ್ರಿಲ್ 2ರ ಗುರುವಾರ ಉತ್ತಮ ಆರೋಗ್ಯಕ್ಕಾಗಿ ಮೃತ್ಯುಂಜಯ ಹೋಮ ಮತ್ತು ಮೇಷ, ಸಿಂಹ, ವೃಶ್ಚಿಕ, ಕುಂಭ, ಮೀನಾ ರಾಶಿಯವರಿಗೆ ಶನಿ ಮಹಾಶಾಂತಿ ಏರ್ಪಡಿಸಲಾಗಿದೆ.

ಇದಲ್ಲದೆ ಕುಜ ಶಾಂತಿ, ರಾಹು ಶಾಂತಿ, ಕೇತು ಶಾಂತಿ, ಗುರು ಮಹಾಶಾಂತಿ, ಸ್ವಯಂ ಸ್ವಯಂವರಾ ಪಾರ್ವತಿ ಹೋಮ (ಅವಿವಾಹಿತರಿಗೆ) ನೆರವೇರಿಸಲ್ಪಡುತ್ತದೆ. ಬೆಳಿಗ್ಗೆ 9.30ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ.

ಅಫ್ಘಾನಿಸ್ತಾನದಲ್ಲಿ ಭಾರೀ ಪ್ರವಾಹ: 17 ಮಂದಿ ಸಾವು

ಕಾಬೂಲ್: ಅಫ್ಘಾನಿಸ್ತಾನದ ಕೆಲವು ಭಾಗಗಳಲ್ಲಿ ತೀವ್ರ ಪ್ರವಾಹ, ಭೂಕುಸಿತ ಮತ್ತು ಗುಡುಗು ಸಹಿತ ಮಳೆಯಿಂದಾಗಿ 17 ಜನರು ಸಾವನ್ನಪ್ಪಿ, 26ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಇನ್ನೂ ಅಧಿಕ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದು, ಮುಂಜಾಗ್ರತೆ ವಹಿಸಲು ಸಾರ್ವಜನಿಕರಿಗೆ ಸೂಚಿಸಲಾಗಿದೆ. ಅಫ್ಘಾನ್ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಿಬ್ಬಂದಿ ಮಳೆಪೀಡಿತ ಪ್ರದೇಶಗಳ ಸಮೀಕ್ಷೆ ನಡೆಸುತ್ತಿದ್ದು, ಸಾವು–ನೋವುಗಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಅಫ್ಘಾನಿಸ್ತಾನದ 34 ರಾಜ್ಯಗಳಲ್ಲಿ ಹೆಚ್ಚಾಗಿ ದೇಶದ ಪಶ್ಚಿಮ, ಮಧ್ಯ ಮತ್ತು ವಾಯುವ್ಯ ಭಾಗಗಳಲ್ಲಿ ಮಳೆ ಪರಿಣಾಮ ಹೆಚ್ಚಾಗಿದೆ. 147 ಮನೆಗಳಿಗೆ ಹಾನಿಯಾಗಿದೆ.

ಗೌರವಾನ್ವಿತ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿ.ಶ್ರೇ.)
ಮತ್ತು ಜೆ.ಎಂ.ಎಫ್.ಸಿ., ಕೊಳ್ಳೇಗಾಲ
ಓ.ಎಸ್.ನಂ. 45:2025

ವಾದಿ: ಸುಬ್ರಮಣ್ಯಸ್ವಾಮಿ ಎಂ.
ವಿರುದ್ಧ
ಪ್ರತಿವಾದಿ: ಕುರಿಸೀಗನಾಯ್ಕ ಮತ್ತು ಇತರರು

1) ಕುರಿಸೀಗನಾಯ್ಕ ಬಿನ್ ಲೇಟ್ ಕುಳ್ಳಸೀಗನಾಯ್ಕ, ವಯಸ್ಸು: 67 ವರ್ಷ. (2) ಯಶೋಧಮ್ಮ, ಕೋಂ. ಕುರಿಸೀಗನಾಯ್ಕ, ವಯಸ್ಸು: 57 ವರ್ಷ. (3) ಶ್ರೀಮತಿ ನೀಲಾ ಕೋಂ ಸಿದ್ದಪ್ಪಾಜಿ, ವಯಸ್ಸು: 31 ವರ್ಷ.

ಎಲ್ಲರ ವಾಸ: ನಾಯಕರ ಹೊಸಬೀದಿ, ಚಿಕ್ಕಲ್ಲೂರು ರಸ್ತೆ, ಪಾಳ್ಯ ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ವಾದಿಯು ಪ್ರತಿವಾದಿಗಳ ವಿರುದ್ಧ ದಿನಾಂಕ: 27–1–2022ರಂದು ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ನೋಂದಣಿ ಕ್ರಯದ ಕರಾರಿನ ಅನ್ವಯ ನಿರ್ದಿಷ್ಟ ಪರಿಹಾರ ಕಾಯ್ದೆಯಡಿ ದಾವೆಯನ್ನು ಸಲ್ಲಿಸಿದ್ದು, ಸದರಿ ಮೇಲ್ಕಂಡ ಪ್ರಕರಣವು ದಿನಾಂಕ: 29–04–2026 ಇದ್ದು, ನೀವುಗಳು ಸದರಿ ದಿನದಂದು ಘನ ನ್ಯಾಯಾಲಯಕ್ಕೆ ಖುದ್ದು ಹಾಜರಾತಿಯಾಗುವುದು, ಇಲ್ಲದಿದ್ದಲ್ಲಿ ನಿಮ್ಮಗಳ ಗೈರುಹಾಜರಾತಿಯಲ್ಲಿ ಈ ದಾವೆಯಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ಪಾಳ್ಯ ಗ್ರಾಮದ ಹೊಸ ಬೀದಿಯಲ್ಲಿರುವ ಸ್ವತ್ತಿನ ಸಂ: 717, ಆರ್‌ಸಿಸಿ ಮನೆ, ಪೂರ್ವ–ಪಶ್ಚಿಮ: 29 ಅಡಿ ; ಉತ್ತರ–ದಕ್ಷಿಣ: 40 ಅಡಿಗೆ ಚಕ್ಕುಬಂದಿ ಕೆಳ ಕಂಡಂತೆ ಇರುತ್ತದೆ. ಪೂರ್ವಕ್ಕೆ: ಸೈಟ್ ನಂ. 4 ; ಪಶ್ಚಿಮಕ್ಕೆ: ಸೈಟ್ ನಂ. 2 ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ಹಿಡುವಳಿ.

ನ್ಯಾಯಾಲಯದ ಪರವಾಗಿ
ಸಹಿ/– ಶಿರಸ್ತೇದಾರರು
ಹಿರಿಯ ಸಿವಿಲ್ ನ್ಯಾಯಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕೊಳ್ಳೇಗಾಲ

ವಾದಿಯ ಪರ ವಕೀಲರು
ಸಹಿ/– ಬಿ.ಎಂ. ವಿಜಯ, ಬಿ.ಎ., ಎಲ್.ಎಲ್.ಬಿ. ವಕೀಲರು, ಕೊಳ್ಳೇಗಾಲ

17ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎಂ.ಆರ್ ಸತ್ಯನಾರಾಯಣ್
ಮ್ಯಾನೇಜರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಕಛೇರಿ ಎಂ.ಡಿ.ಒ. ಮೈಸೂರು

ನೀವು ನಮ್ಮನ್ನಗಲಿ ಇಂದಿಗೆ 17ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಪತ್ನಿ: ಸುನೀತ, ಮಗ: ಬಿಪಿನ್, ಸೊಸೆ: ಸವಿತಾ, ಮಗಳು: ಕೃತಿಕಾ, ಅಳಿಯ: ವಿಕ್ರಮ್

2ನೇ ವರ್ಷದ ಸವಿನೆನಪು



B.R ಬಿಳಿಗಿರಯ್ಯ (RPF)

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ನಿಮ್ಮ ಪತ್ನಿ: ಮಹದೇವಮ್ಮ, ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು



ಸುಭಾಷ್‌ಚಂದ್ರ ಬೋಸ್ ಬಾಕ್ಸಿಂಗ್ ಚಾಂಪಿಯನ್‌ಶಿಪ್
ಮೈಸೂರು ಬಾಕ್ಸರ್ ಕೊರಳಿಗೆ 28 ಪದಕ



ಮೈಸೂರಿನ ಬಾಕ್ಸರ್‌ಗಳು 6 ಚಿನ್ನ, 7 ಬೆಳ್ಳಿ ಮತ್ತು 15 ಕಂಚಿನ ಪದಕ ಸೇರಿದಂತೆ ಒಟ್ಟು 28 ಪದಕಗಳನ್ನು ಗಳಿಸಿದರು.

ಮೈಸೂರು, ಮಾ.30(ಎಂಕೆ)–ಬೆಂಗಳೂರಿನ ಡಾ.ಪುನೀತ್ ರಾಜ್‌ಕುಮಾರ್ ಮೈದಾನದಲ್ಲಿ ನಡೆದ ರಾಜ್ಯಮಟ್ಟದ ಶ್ರೀ ನೇತಾಜಿ ಸುಭಾಷ್‌ಚಂದ್ರಬೋಸ್ ಬಾಕ್ಸಿಂಗ್ ಚಾಂಪಿಯನ್‌ಶಿಪ್–2026 ನಲ್ಲಿ ಮೈಸೂರಿನ ಬಾಕ್ಸರ್‌ಗಳು 6 ಚಿನ್ನ, 7 ಬೆಳ್ಳಿ ಮತ್ತು 15 ಕಂಚಿನ ಪದಕಗಳನ್ನು ಒಳಗೊಂಡಂತೆ ಒಟ್ಟು 28 ಪದಕಗಳನ್ನು ಜಯಿಸಿದ್ದಾರೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಹಕಾರದೊಂದಿಗೆ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಿದ್ದ ಮೈಸೂರು ಜಿಲ್ಲಾ ಹವ್ಯಾಸಿ ಬಾಕ್ಸಿಂಗ್ ಸಂಘದ ಬಾಕ್ಸಿಂಗ್ ಪಟುಗಳು ವಿವಿಧ ವಿಭಾಗಗಳಲ್ಲಿ ಪದಕಗಳನ್ನು ಜಯಿಸುವ ಮೂಲಕ ಮೈಸೂರಿಗೆ ಕೀರ್ತಿ ತಂದಿದ್ದಾರೆ.

ವೈಯಕ್ತಿಕ ಪ್ರಶಸ್ತಿಗಳಲ್ಲಿನ ಸಬ್ ಜೂನಿಯರ್ ಬಾಯ್ಸ್ ವಿಭಾಗದಲ್ಲಿ ಧ್ಯಾನ್ ಬಾಲು ಅತ್ಯುತ್ತಮ ಬಾಕ್ಸರ್ ಪ್ರಶಸ್ತಿ ಪಡೆದರೆ, ಎಲೈಟ್ ಮೆನ್ ವಿಭಾಗದಲ್ಲಿ ಕೆ.ಜೆ.ಹೇಮಂತ್ ಭರವಸೆಯ ಬಾಕ್ಸರ್ ಪ್ರಶಸ್ತಿ ಹಾಗೂ ಕಬ್ಸ್ ಬಾಯ್ಸ್ ವಿಭಾಗದಲ್ಲಿ ಗೃಹಿತ್‌ಗೌಡ ಸವಾಲಿನ ಬಾಕ್ಸರ್ ಪ್ರಶಸ್ತಿ ಪಡೆದಿದ್ದಾರೆ.

ವಿಜೇತ ಬಾಕ್ಸರ್‌ಗಳಿಗೆ ಮೈಸೂರು ಜಿಲ್ಲಾ ಹವ್ಯಾಸಿ ಬಾಕ್ಸಿಂಗ್ ಸಂಘದ ಉಪಾಧ್ಯಕ್ಷ ಚಂದ್ರಕುಮಾರ್, ಮೈಸೂರು ವಿವಿ ತರಬೇತುದಾರ ಎಸ್.ಜಸ್ವಂತ್, ರೆಫರಿ ಗುರುಪ್ರಸಾದ್, ತರಬೇತುದಾರರಾದ ಎಂ.ಸಹನಾ, ಮ್ಯಾನೇಜರ್ ಗೋಪಿಚಂದನ್ ಮತ್ತಿತರರು ಅಭಿನಂದಿಸಿದ್ದಾರೆ.

ಮತ್ಸ್ಯದರ್ಶಿನಿ ಆರಂಭಿಸಲು ಹಳೆ ಡಿಸಿ ಕಚೇರಿ ಬಳಿಯ ಕ್ಯಾಂಟೀನ್ ನೆಲಸಮಕ್ಕೆ ವಿರೋಧ

ಮೈಸೂರು,ಮಾ.30(ಎಂಟಿವೈ)– 'ಮತ್ಸ್ಯದರ್ಶಿನಿ'ಗಾಗಿ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಶಿಥಿಲಾವಸ್ಥೆ ತಲುಪಿರುವ ಕ್ಯಾಂಟೀನ್ ಕಟ್ಟಡವನ್ನು ನೆಲಸಮ ಮಾಡದಂತೆ ಪಾರಂಪರಿಕ ತಜ್ಞ ಪ್ರೊ ಎನ್.ಎಸ್.ರಂಗರಾಜು ಒತ್ತಾಯಿಸಿದ್ದಾರೆ.

ಮೈಸೂರಲ್ಲಿ 'ಮತ್ಸ್ಯದರ್ಶಿನಿ' ನಿರ್ಮಿಸಲು ರಾಜ್ಯ ಸರ್ಕಾರ ಬಜೆಟ್‌ನಲ್ಲಿ 50 ಲಕ್ಷ ರೂ. ಮೀಸಲಿಟ್ಟಿದ್ದು, ಅದಕ್ಕಾಗಿ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ, ಶಿಥಿಲಾವಸ್ಥೆ ತಲುಪಿರುವ ನಿರುಪಯುಕ್ತ ಕ್ಯಾಂಟೀನ್ ಕಟ್ಟಡವನ್ನು ಮೀನುಗಾರಿಕಾ ಇಲಾಖೆಗೆ ಹಸ್ತಾಂತರಿಸಲಾಗಿತ್ತು. ಇದೀಗ ಮೀನುಗಾರಿಕಾ ಇಲಾಖೆ 80 ಲಕ್ಷ ರೂ. ವೆಚ್ಚದಲ್ಲಿ ಯೋಜನೆಗೆ ಡಿಪಿಆರ್ ಸಿದ್ಧಪಡಿಸಿ ಟೆಂಡರ್ ಕರೆದಿದ್ದು, ಹಳೇ ಕ್ಯಾಂಟೀನ್ ಕಟ್ಟಡದಲ್ಲಿ ಕಾಮಗಾರಿ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಕಟ್ಟಡ ನೆಲಸಮಕ್ಕೆ ಆಕ್ಷೇಪ: ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜು, ಕ್ಯಾಂಟೀನ್ ಕಟ್ಟಡದ ಸುತ್ತ ಬ್ಯಾರಿಕೇಡ್ ಮಾದರಿಯಲ್ಲಿ ತಗಡಿನ ಶೀಟ್ ಕಟ್ಟಲು ಮರದ ಪೋಲ್ ನೆಡುತ್ತಿದ್ದ ಕೆಲಸಗಾರರ ಬಳಿ ಬಂದು, ಮಾಹಿತಿ ಪಡೆದರು. ಬಳಿಕ ಮಾತನಾಡಿದ ಪ್ರೊ. ರಂಗರಾಜು, ಈ ಕ್ಯಾಂಟೀನ್ ಕಟ್ಟಡದಲ್ಲಿ ಕರಾವಳಿ ಶೈಲಿಯ ಮೀನೂಟ ಒದಗಿಸುವ ಉದ್ದೇಶದಿಂದ ಮತ್ಸದರ್ಶಿನಿ ನಿರ್ಮಿಸಲು ಮುಂದಾಗಿರುವುದು ಖಂಡನೀಯ. ಹಳೆ ಜಿಲ್ಲಾಧಿಕಾರಿ ಕಚೇರಿ, ಮಹಾರಾಣಿ ಕಾಲೇಜು, ಓರಿಯಂಟಲ್ ರಿಸರ್ಚ್ ಸೆಂಟರ್, ಕ್ರಾಫರ್ಡ್ ಭವನದಂತಹ ಪಾರಂಪರಿಕ ಕಟ್ಟಡ ಸಮೀಪವಿರುವ ಈ ಹಳೆ ಕ್ಯಾಂಟೀನ್ ಕಟ್ಟಡ ಧ್ವಂಸ ಮಾಡಬಾರದು. ಅದರ ಬದಲು ಸಂರಕ್ಷಣೆ ಮಾಡಬೇಕು. ಪಾರಂಪರಿಕ ಕಟ್ಟಡದ 100 ಮೀಟರ್ ಅಂತರದಲ್ಲಿ ಯಾವುದೇ ಹೊಸ ಕಟ್ಟಡ ಕಟ್ಟಬಾರದು ಎಂಬ ನಿಯಮವಿದೆ ಎಂದು ಸ್ಪಷ್ಟಪಡಿಸಿದರು.

ಪಾರಂಪರಿಕ ನಗರವಾಗಿರುವ ಮೈಸೂರಿನ ಮೇಲೆ ಒಂದೆಡೆ ಪ್ರವಾಸೋದ್ಯಮ ಇಲಾಖೆ, ಮತ್ತೊಂದೆಡೆ ಜಿಲ್ಲಾಡಳಿತದಿಂದ ದಾಳಿ ನಡೆಯುತ್ತಿದೆ. ಅರಮನೆ ಮುಂಭಾಗ ಟಾಂಗಾ ನಿಲ್ದಾಣ ನಿರ್ಮಿಸಲು ಹೋಗಿದ್ದರು. ವಿರೋಧ ವ್ಯಕ್ತವಾದ ನಂತರ ಆ ಕಾಮಗಾರಿ ಸ್ಥಗಿತಗೊಂಡಿದೆ. ಇದೀಗ ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡದ ಬಳಿ ಇರುವ ಹಳೆ ಕ್ಯಾಂಟೀನ್ ಕಟ್ಟಡವನ್ನು ನೆಲಸಮ ಮಾಡಲು ಮುಂದಾಗಿರುವುದು ಖಂಡನೀಯ ಎಂದರು.



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ 'ಮತ್ಸದರ್ಶಿನಿ' ನಿರ್ಮಿಸಲು ಉದ್ದೇಶಿಸಿರುವ ಹಳೆ ಕ್ಯಾಂಟೀನ್ ಕಟ್ಟಡ.



ಕ್ಯಾಂಟೀನ್ ಕಟ್ಟಡದ ಮುಂದೆ ಪಾರಂಪರಿಕ ತಜ್ಞ ಪ್ರೊ.ಎನ್.ಎಸ್. ರಂಗರಾಜು ಪತ್ರಕರ್ತರೊಂದಿಗೆ ಮಾತನಾಡುತ್ತಿರುವುದು.


ಸಂರಕ್ಷಣೆ ಹೆಸರಲ್ಲಿ ನವೀಕರಣಕ್ಕೆ ಅಭ್ಯಂತರವಿಲ್ಲ

ಹಳೇ ಜಿಲ್ಲಾಧಿಕಾರಿ ಕಚೇರಿ ಬಳಿ ಇರುವ ಕ್ಯಾಂಟೀನ್ ಕಟ್ಟಡ ಪಾರಂಪರಿಕ ಕಟ್ಟಡವಲ್ಲ. ಆದರೆ, ಪಾರಂಪರಿಕ ಕಟ್ಟಡದಿಂದ 100 ಮೀಟರ್ ಅಂತರದಲ್ಲಿದೆ. 2004ರಲ್ಲಿ ಮೈಸೂರು ನಗರವನ್ನು ಪಾರಂಪರಿಕ ನಗರ ಎಂದು ಘೋಷಿಸಲಾಗಿದ್ದು, ಅದರಲ್ಲಿ ಪಾರಂಪರಿಕ ಕಟ್ಟಡದ 100 ಮೀಟರ್ ಅಂತರದಲ್ಲಿ ಹೊಸದಾಗಿ ಯಾವುದೇ ಕಟ್ಟಡ, ಬಹುಮಹಡಿ ಕಟ್ಟಡ ಕಟ್ಟದಂತೆ ನಿಯಮ ರೂಪಿಸಲಾಗಿದೆ. ಈ ಹಳೆ ಕ್ಯಾಂಟೀನ್ ಕಟ್ಟಡವನ್ನು ಧ್ವಂಸ ಮಾಡದೆ, ಸಂರಕ್ಷಣೆ ಹೆಸರಲ್ಲಿ ನವೀಕರಿಸಬಹುದು. ಆಗ ಅದನ್ನು ಹೋಟೆಲ್ ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ಬಹುಮಹಡಿ ಕಟ್ಟಡ ನಿರ್ಮಿಸಿದರೆ ನಿಯಮ ಉಲ್ಲಂಘಿಸಿದಂತಾಗುತ್ತದೆ.

– ಪ್ರೊ.ಎನ್.ಎಸ್.ರಂಗರಾಜು, ಪಾರಂಪರಿಕ ತಜ್ಞ

ನಾಳೆಯಿಂದ ಯುವತಿಯರಿಗೆ ಉಚಿತ ಕಂಪ್ಯೂಟರ್ ತರಬೇತಿ

ಮೈಸೂರು, ಮಾ. 30– ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ ಬಡ ವಿದ್ಯಾವಂತ ನಿರುದ್ಯೋಗಿ ಯುವತಿಯರಿಗೆ ಉಚಿತ ಕಂಪ್ಯೂಟರ್ ತರಬೇತಿ ಮತ್ತು ಉದ್ಯೋಗ ವಿಕಸನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ತರಬೇತಿಯ ಅವಧಿ ಮೂರು ತಿಂಗಳು ಇರುತ್ತದೆ. ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯ ವರೆಗೆ ತರಗತಿ ನಡೆಯಲಿದ್ದು, ತರಗತಿಯಲ್ಲಿ ಬಿಪಿಓ, ಕಂಪ್ಯೂಟರ್ ಕೌಶಲ್ಯ, ಕಮ್ಯುನಿಕೇಶನ್ ಕೌಶಲ್ಯ, ಬ್ಯಾಂಕಿಂಗ್– ಹಣಕಾಸು ಸೇವೆಗಳು ಮತ್ತು ವಿಮೆ ಕೌಶಲ್ಯಗಳ ಉಚಿತ ತರಬೇತಿ ನೀಡಲಾಗುವುದು.



ಕನಿಷ್ಠ ಎಸ್.ಎಸ್.ಎಲ್.ಸಿ ಉತ್ತೀರ್ಣ ಆಗಿರಬೇಕು, ವಯಸ್ಸು: 18 ರಿಂದ 35 ವರ್ಷ ಒಳಗಿರಬೇಕು. ಆರ್ಥಿಕವಾಗಿ ಹಿಂದುಳಿದ ವಿದ್ಯಾವಂತ ಬಡ ಯುವತಿಯರು ಸದರಿ ತರಬೇತಿಗೆ ಅರ್ಹತೆ ಹೊಂದಿರುತ್ತಾರೆ. ತರಬೇತಿಯು ಏಪ್ರಿಲ್ 01 ರಿಂದ ಪ್ರಾರಂಭವಾಗುತ್ತದೆ.

ಬೇಕಾಗಿರುವ ದಾಖಲಾತಿಗಳು: ಶೈಕ್ಷಣಿಕ ದಾಖಲಾತಿಗಳು, ಆಧಾರ್ ಕಾರ್ಡ್, ಆದಾಯ ಪ್ರಮಾಣ ಪತ್ರ/ ಬಿಪಿಎಲ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ ನೀಡಬೇಕಾಗುತ್ತದೆ. ಮಾಹಿತಿಗಾಗಿ ಸಮರ್ಥನಂ ಅಂಗವಿಕಲರ ಸಂಸ್ಥೆ, ನಂ –676, ನ್ಯೂ ಕೆ–21, ಲಕ್ಷ್ಮಿ ಚಿತ್ರಮಂದಿರ ಹತ್ತಿರ, ಚಾಮರಾಜ ಜೋಡಿ ರಸ್ತೆ, ಅಗ್ರಹಾರ, ಮೈಸೂರು 570004 ಅಥವಾ 6364867818, 9035084948, 9035084949 ಸಂಪರ್ಕಿಸಬಹುದು ಎಂದು ಸಂಸ್ಥೆಯ ಮೈಸೂರು ವಿಭಾಗೀಯ ಮುಖ್ಯಸ್ಥ ಶಿವರಾಜು ತಿಳಿಸಿದ್ದಾರೆ.

ಆನೆ ವೈದ್ಯ ಡಾ.ನಾಗರಾಜ್ ಸೇವೆಯಿಂದ ನಿವೃತ್ತಿ, ಹಿತೈಷಿಗಳಿಂದ ಅಭಿನಂದನೆ

ಮೈಸೂರು: ಖ್ಯಾತ ಪಶುವೈದ್ಯ ಹಾಗೂ ಆನೆ ವೈದ್ಯರೆಂದೇ ಹೆಸರುವಾಸಿಯಾಗಿರುವ ಡಾ.ನಾಗರಾಜ್ ಇಂದು ನಿವೃತ್ತಿ ಹೊಂದುತ್ತಿದ್ದಾರೆ. ಅವರು, 21 ಬಾರಿ ಮೈಸೂರು ದಸರಾ ಸಂದರ್ಭದಲ್ಲಿ ಗಜಪಡೆ ಯೋಗ ಕ್ಷೇಮವನ್ನು ನೋಡಿಕೊಂಡು ಅಂಬಾರಿ ಕಟ್ಟುವ ರೀತಿ–ನೀತಿಗಳ ಬಗ್ಗೆ ಮಾರ್ಗದರ್ಶನ ಮಾಡುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದರು.

ರಾಮನಗರದಲ್ಲಿ ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಇಂದು ನಿವೃತ್ತಿ ಹೊಂದುತ್ತಿದ್ದಾರೆ. ಸರಳ–ಸಜ್ಜನಿಕೆಯ ವ್ಯಕ್ತಿಯಾಗಿ, 250ಕ್ಕೂ ಹೆಚ್ಚು ಹುಲಿ ಮತ್ತು ಆನೆಗಳ ಸೆರೆ ಕಾರ್ಯಾಚರಣೆಯಲ್ಲಿ ಭಾಗವಹಿಸಿ ಯಶಸ್ವಿಯಾಗಿದ್ದಾರೆ. ಅಲ್ಲದೆ ಅರಣ್ಯದಲ್ಲಿ ಸಂಕಷ್ಟದಲ್ಲಿದ್ದ ಪ್ರಾಣಿ–ಪಕ್ಷಿಗಳಿಗೆ ವೈದ್ಯೋಪಚಾರ ಮಾಡಿ, ನೂರಾರು ಪ್ರಾಣಿ–ಪಕ್ಷಿಗಳ ಜೀವ ಉಳಿಸಿದ್ದಾರೆ. ಇವರು ನಿವೃತ್ತಿಯಾಗುತ್ತಿರುವುದು ಕೊರತೆ ಕಾಡಲಿದೆ. ಇಂದು ಅವರು ನಿವೃತ್ತರಾಗುತ್ತಿರುವ ವೇಳೆ ಅವರ ಹಿತೈಷಿಗಳಾದ ಚಿತ್ರ ನಿರ್ದೇಶಕ ಬಿ.ಸಿದ್ದೇಗೌಡ, ವಕೀಲ ಕೆ.ಟಿ.ಸುರೇಶ್, ಕೃಷ್ಣಪ್ಪ, ಪ್ರಭು ಚಿಕ್ಕಾಡೆ, ನಿವೃತ್ತ ಪ್ರಾಂಶುಪಾಲ ಪ್ರೊ.ನಾಗರಾಜ್, ಗಾಯಕ ಸಿಎಫ್‌ಟಿಆರ್‌ಐನ ಕೃಷ್ಣಮೂರ್ತಿ, ಕೆ.ಜಿ.ಕೊಪ್ಪಲು ನಾಗಣ್ಣ, ಫೈನಾನ್ಷಿಯರ್ ಬಲ್ಲಳ್ಳಿ ಲಿಂಗೇಗೌಡ, ಡಾ.ನಾಗರಾಜ್ ದಂಪತಿಯನ್ನು ಸನ್ಮಾನಿಸಿ, ನಿವೃತ್ತಿ ಜೀವನ ಸುಖಮಯವಾಗಿರಲೆಂದು ಹಾರೈಸಿದರು.



ವಯೋ ನಿವೃತ್ತಿ ಹೊಂದಿದ ಖ್ಯಾತ ಪಶುವೈದ್ಯ ಡಾ.ನಾಗರಾಜ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮಾಜಿ ಪ್ರಧಾನಿ ದೇವೇಗೌಡರ ಅಪರೂಪದ ಛಾಯಾಚಿತ್ರ ಸಂಗ್ರಹ

ಬೆಂಗಳೂರು, ಮಾ.30(ಕೆಎಂಶಿ)–



ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಸಾರ್ವಜನಿಕ ಜೀವನ ಬಿಂಬಿಸುವ ಛಾಯಾಚಿತ್ರಗಳನ್ನು ಅಭಿಮಾನಿಗಳಿಂದ ಸಂಗ್ರಹಿಸಲು ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಎಚ್.ಎನ್.ಕೃಷ್ಣ ಮುಂದಾಗಿದ್ದಾರೆ.

ದೇವೇಗೌಡರ ರಾಜಕೀಯ ಬದುಕಿನ ಆರಂಭದ ದಿನಗಳ ಛಾಯಾಚಿತ್ರಗಳ ಸಂಗ್ರಹ ಇದ್ದವರು, ಅವುಗಳನ್ನು drkrishnahn@gmail.com ಗೆ ಕಳುಹಿಸಲು ಕೋರಿದ್ದಾರೆ ಮುದ್ರಿತ ಫೋಟೋಗಳಿದ್ದರೆ ಅವುಗಳನ್ನು ಸ್ಕ್ಯಾನ್ ಮಾಡಿಕೊಂಡು ಹಿಂತಿರುಗಿಸಲಾಗುವುದು ಎಂದು ಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದು ವಾರ ರಾಜ್ಯದ ವಿವಿಧೆಡೆ ವರ್ಷಧಾರೆ
ಮೈಸೂರು ಭಾಗದಲ್ಲಿ ಎರಡು ದಿನ ಸಾಧಾರಣ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಹಲವೆಡೆ ಪೂರ್ವ ಮುಂಗಾರು ಬಿರುಸುಗೊಂಡಿದ್ದು, ಏ.6ವರೆಗೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು ನಗರ, ಬೆಂ.ಗ್ರಾಮಾಂತರ, ಬೆಂ.ದಕ್ಷಿಣ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಮುಂದಿನ 48 ಗಂಟೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ಕೊಡಗು, ಹಾಸನ, ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗದಲ್ಲಿ ಮಾ.31ರಿಂದ ಏ.6ವರೆಗೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ವಿಜಯಪುರದಲ್ಲಿ ಮುಂದಿನ 2 ದಿನ ಗುಡುಗು, ಮಿಂಚು, ಬಿರುಗಾಳಿ ಸಹಿತ ಭಾರೀ ಮಳೆಯಾಗಲಿದೆ.

ಉತ್ತರ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಮಿಂಚು, ಬಿರುಗಾಳಿ ಅಧಿಕವಾಗುವ ಸಾಧ್ಯತೆ ಇರುವುದರಿಂದ ಆರೆಂಜ್ ಅಲರ್ಟ್ ಘೋಷಿಸಿದ್ದು, ರೈತರು ಮತ್ತು ಕುರಿಗಾಹಿಗಳು ಕೃಷಿ ಭೂಮಿಯಲ್ಲಿರುವಾಗ ಎಚ್ಚರಿಕೆ ವಹಿಸುವಂತೆ ಸಲಹೆ ನೀಡಲಾಗಿದೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮುಂದಿನ 5 ದಿನ ಗರಿಷ್ಠ ಹಾಗೂ ಕನಿಷ್ಠ ತಾಪಮಾನದಲ್ಲಿ ದೊಡ್ಡ ಬದಲಾವಣೆ ಇರುವುದಿಲ್ಲ ಎಂದು ತಿಳಿಸಲಾಗಿದೆ.

ಸನ್ಮತಿ ಲೇಡಿಸ್ ಫೌಂಡೇಶನ್‌ನಿಂದ ವಿಶ್ವ ಮಹಿಳಾ ದಿನಾಚರಣೆ...



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸನ್ಮತಿ ಲೇಡಿಸ್ ಫೌಂಡೇಶನ್ ವತಿಯಿಂದ ಮಹಿಳಾ ದಿನ ಆಚರಿಸಲಾಯಿತು. ಈ ವೇಳೆ ಪೌರಕಾರ್ಮಿಕ ಮಹಿಳೆಗೆ ಸೀಮಂತ, ಇನ್ನೋರ್ವ ಮಹಿಳೆಯನ್ನು ಆತ್ಮೀಯವಾಗಿ ಗೌರವಿಸಲಾಯಿತು. ಸನ್ಮತಿ ಲೇಡಿಸ್ ಫೌಂಡೇಶನ್ ಪದಾಧಿಕಾರಿಗಳಾದ ಸವಿತಾ ಗೋವಿಂದೇಗೌಡ, ಜ್ಯೋತಿ ಸೀತಾರಾಮ್, ಕೋಮಲ ವೆಂಕಟೇಶ್, ಗೀತಾ ರುಕ್ಮಾಂಗದ, ಮಮತಾ ಶ್ರೀಧರ್, ಸುಜಾತ, ಹೇಮ, ರಾಣಿ ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಕುವೈತ್ ವಿದ್ಯುತ್ ಸ್ಥಾವರದ ಮೇಲೆ ಇರಾನ್ ದಾಳಿ; ಭಾರತೀಯ ಕಾರ್ಮಿಕ ಸಾವು!

ಕುವೈತ್: ಕುವೈತ್‌ನ ವಿದ್ಯುತ್ ಉತ್ಪಾದನೆ ಮತ್ತು ನೀರು ನಿರ್ಲವಣೀಕರಣ ಘಟಕದ ಸೇವಾ ಕಟ್ಟಡದ ಮೇಲೆ ಇರಾನ್ ನಡೆಸಿದ ದಾಳಿಯ ಪರಿಣಾಮ ಭಾರತೀಯ ಕಾರ್ಮಿಕನೊಬ್ಬ ಸಾವನ್ನಪ್ಪಿದ್ದಾನೆ ಎಂದು ಕುವೈತ್‌ನ ವಿದ್ಯುತ್, ನೀರು ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ತಿಳಿಸಿದೆ.

ಈ ದಾಳಿಯು ಕುವೈತ್ ರಾಜ್ಯದ ವಿರುದ್ಧದ ಇರಾನಿನ ಆಕ್ರಮಣದ ಭಾಗವಾಗಿದೆ ಎಂದು ಹೇಳಿದೆ. ಈ ದಾಳಿಯಿಂದ ಗಮನಾರ್ಹ ಹಾನಿಯನ್ನುಂಟಾಗಿದ್ದು ಓರ್ವ ಕಾರ್ಮಿಕನ ಸಾವಿಗೆ ಕಾರಣವಾಯಿತು. ಅವರ ಗುರುತು ಇನ್ನೂ ಬಹಿರಂಗಗೊಂಡಿಲ್ಲ ಎಂದು ಸೋಮವಾರ (ಮಾರ್ಚ್ 30, 2026) ಬಿಡುಗಡೆ ಮಾಡಿದ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ಕುವೈತ್ ವಿರುದ್ಧ ಇರಾನ್ ನಡೆಸಿದ ಆಕ್ರಮಣದ ಭಾಗವಾಗಿ ವಿದ್ಯುತ್ ಮತ್ತು ನೀರು ನಿರ್ಲವಣೀಕರಣ ಘಟಕದ ಸೇವಾ ಕಟ್ಟಡದ ಮೇಲೆ ದಾಳಿ ನಡೆಸಲಾಗಿದ್ದು, ಇದರ ಪರಿಣಾಮವಾಗಿ ಒಬ್ಬ ಭಾರತೀಯ ಕಾರ್ಮಿಕ ಸಾವನ್ನಪ್ಪಿದ್ದಾನೆ ಮತ್ತು ಕಟ್ಟಡಕ್ಕೆ ಗಮನಾರ್ಹ ವಸ್ತು ಹಾನಿಯಾಗಿದೆ ಎಂದು ಸಚಿವಾಲಯದ ವಕ್ತಾರ ಎಂಜಿನಿಯರ್ ಫಾತಿಮಾ ಅಬ್ಬಾಸ್ ಜವಾಹರ್ ಹಯಾತ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಘಟನೆಯ ಬಗ್ಗೆ ಕುವೈತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಅಥವಾ ವಿದೇಶಾಂಗ ಸಚಿವಾಲಯ ಈ ಕುರಿತು ಹೇಳಿಕೆ ನೀಡಿಲ್ಲ.

ಇತ್ತೀಚಿನ ಸಾವಿನೊಂದಿಗೆ ಪಶ್ಚಿಮ ಏಷ್ಯಾ ಸಂಘರ್ಷ ಪ್ರಾರಂಭವಾದಾಗಿನಿಂದ ಸಾವನ್ನಪ್ಪಿದ ಭಾರತೀಯರ ಸಂಖ್ಯೆ ಏಳಕ್ಕೆ ಏರಿದೆ.ವರದಿಯಾದ ಸಾವುನೋವುಗಳಲ್ಲಿ ಸೌದಿ ಅರೇಬಿಯಾದಲ್ಲಿ ಒಬ್ಬ ಭಾರತೀಯ, ಒಮಾನ್‌ನಲ್ಲಿ ಇಬ್ಬರು ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಇಬ್ಬರು ಸೇರಿದ್ದಾರೆ, ಆದರೆ ಕನಿಷ್ಠ ಒಬ್ಬ ಭಾರತೀಯ ಪ್ರಜೆ ಕಾಣೆಯಾಗಿದ್ದಾನೆ ಎಂದು ವರದಿಯಾಗಿದೆ. ರಿಯಾದ್, ಮಸ್ಕತ್, ಅಬುಧಾಬಿ ಮತ್ತು ಬಾಗ್ದಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಗಳು ಮೃತದೇಹಗಳನ್ನು ಸ್ವದೇಶಕ್ಕೆ ತರುವ ಕೆಲಸವನ್ನು ಮಾಡುತ್ತಿದೆ.

ಘಟನೆಯ ನಂತರ ತುರ್ತು ತಂಡಗಳು ಮತ್ತು ತಾಂತ್ರಿಕ ಸಿಬ್ಬಂದಿ ಸ್ಥಳಕ್ಕೆ ತಕ್ಷಣವೇ ಧಾವಿಸಿ, ಪರಿಸ್ಥಿತಿಯನ್ನು ನಿರ್ವಹಿಸಲು ಮತ್ತು ವಿದ್ಯುತ್ ಮತ್ತು ನೀರು ಸೇವೆಗಳು ಯಾವುದೇ ಅಡೆತಡೆಯಿಲ್ಲದೆ ಮುಂದುವರಿಯುವುದನ್ನು ಖಚಿತಪಡಿಸಿಕೊಳ್ಳಲು ಅನುಮೋದಿತ ತುರ್ತು ಯೋಜನೆಗಳಿಗೆ ಅನುಗುಣವಾಗಿ ಕೆಲಸ ಪ್ರಾರಂಭಿಸಿದರು ಎಂದು ಅವರು ಹೇಳಿದರು.

ಪೀಡಿತ ಸ್ಥಳಗಳನ್ನು ಸುರಕ್ಷಿತಗೊಳಿಸಲು ಅಧಿಕಾರಿಗಳು ಭದ್ರತಾ ಸಂಸ್ಥೆಗಳು ಮತ್ತು ಇತರ ಸಂಬಂಧಿತ ಇಲಾಖೆಗಳೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ವಕ್ತಾರರು ತಿಳಿಸಿದ್ದಾರೆ.

ಲಷ್ಕರ್–ಎ–ತೊಯ್ಬಾ ಶಂಕಿತ ಕಾರ್ಯಕರ್ತ ಬಂಧನ

ಹೊಸದಿಲ್ಲಿ: ಭಾರತದಲ್ಲಿ ವಿಧ್ವಂಸಕ ದಾಳಿ ನಡೆಸಲು ಬಾಂಗ್ಲಾದೇಶದಿಂದ ಯೋಜನೆ ರೂಪಿಸುತ್ತಿದ್ದ ಲಷ್ಕರ್–ಎ–ತೊಯ್ಬಾ ಸಂಘಟನೆಯ ಶಂಕಿತ ಕಾರ್ಯಕರ್ತನನ್ನು ದೆಹಲಿ ಗಡಿಯ ಬಳಿ ಪೊಲೀಸರು ಸೋಮವಾರ(ಮಾ.30) ಬಂಧಿಸಿದ್ದಾರೆ ಎಂದು ವರದಿಯಾಗಿದೆ.

ಜಮ್ಮು–ಕಾಶ್ಮೀರದ ಶ್ರೀನಗರದಲ್ಲಿನ ಕಂಗನ್ ನಿವಾಸಿ ಶಬ್ಬೀರ್ ಅಹ್ಮದ್ ಲೋನ್ ಎಂಬಾತನನ್ನು ಉಗ್ರಚಟುವಟಿಕೆಗಳ ಆರೋಪದ ಮೇಲೆ ಬಂಧಿಸಲಾಗಿದೆ. ಈತ ಬಾಂಗ್ಲಾದೇಶದ ಢಾಕಾದ ತನ್ನ ಅಡಗುತಾಣದಿಂದ ಲಷ್ಕರ್ ಮಾಡ್ಯೂಲ್ ಅನ್ನು ನಿರ್ವಹಿಸುತ್ತಿದ್ದ ಎನ್ನಲಾಗಿದ್ದು, ಪೊಲೀಸ್ ಆಯುಕ್ತ ಸತೀಶ್ ಗೋಲ್ಚಾ ಅವರ ನಿಕಟ ಮೇಲ್ವಿಚಾರಣೆಯಲ್ಲಿ 2 ತಿಂಗಳ ಕಾರ್ಯಾಚರಣೆಯ ಬಳಿಕ ಬಂಧಿಸಲಾಗಿದೆ.

ಈತ ಇಂಟರ್–ಸರ್ವೀಸಸ್ ಇಂಟೆಲಿಜೆನ್ಸ್ ನಿರ್ದೇಶನದ ಮೇರೆಗೆ ಲಷ್ಕರ್ ನಡೆಸುವ ಭಾರತೀಯ ವಿರೋಧಿ ಚಟುವಟಿಕೆಗಳನ್ನ ನಿರ್ವಹಿಸುತ್ತಿದ್ದ. ಇದರಲ್ಲಿ ಪಾಕಿಸ್ತಾನದ ಕೈವಾಡ ಮರೆಮಾಚಲು ಭಾರತದಲ್ಲಿನ ಅಕ್ರಮ ವಲಸಿಗರು ಸೇರಿದಂತೆ ಬಾಂಗ್ಲಾದೇಶದ ಪ್ರಜೆಗಳನ್ನು ನೇಮಿಸಿಕೊಳ್ಳುತ್ತಿದ್ದ. ಇತ್ತೀಚೆಗೆ ದೆಹಲಿ, ಕೋಲ್ಕತ್ತಾ ಮತ್ತು ತಮಿಳುನಾಡಿನಲ್ಲಿ ಭಯೋತ್ಪಾದಕ ಚಟುವಟಿಕೆಗಳಿಗೆ ಯುವಕರನ್ನು ನೇಮಕ ಮಾಡಿಕೊಳ್ಳುವಲ್ಲಿ ಈತನ ಪಾತ್ರವಿತ್ತು ಎನ್ನಲಾಗಿದೆ.

ಸೋನಿಯಾ ಗಾಂಧಿ ಆರೋಗ್ಯ ಸುಧಾರಣೆಗಾಗಿ ಕಾಂಗ್ರೆಸ್ ನಗರ ಓಬಿಸಿ ಘಟಕದಿಂದ ವಿಶೇಷ ಪೂಜೆ

ಮೈಸೂರು, ಮಾ.30– ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರು ಗುಣಮುಖರಾಗಲೆಂದು ಕಾಂಗ್ರೆಸ್ ಓಬಿಸಿ ಘಟಕದ ವತಿಯಿಂದ ಈಡುಗಾಯಿ ಸೇವೆಯೊಂದಿಗೆ ಕೋಟೆ ಆಂಜನೇಯ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಕಾಂಗ್ರೆಸ್ ಓಬಿಸಿ ಘಟಕದ ನಗರಾಧ್ಯಕ್ಷ ಎನ್.ಆರ್.ನಾಗೇಶ್ ನೇತೃತ್ವದಲ್ಲಿ 101 ಈಡುಗಾಯಿ ಒಡೆದು ವಿಶೇಷ ಪೂಜೆ ಸಲ್ಲಿಸಿದ ಬಳಿಕ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು, ಸೋನಿಯಾ ಗಾಂಧಿ ಅವರ ಆರೋಗ್ಯ ಸುಧಾರಿಸಲೆಂದು ದೇವರಲ್ಲಿ ಮೊರೆಯಿಟ್ಟರು.

ಈ ವೇಳೆ ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ ಮಾತನಾಡಿ, ಕಾಂಗ್ರೆಸ್ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಅವರು ಆದಷ್ಟು ಬೇಗ ಚೇತರಿಸಿಕೊಂಡು ಮತ್ತೆ ಪಕ್ಷ ಸಂಘಟನೆಯಲ್ಲಿ ಸಕ್ರಿಯರಾಗಬೇಕೆಂದು ಪಕ್ಷದ ಓಬಿಸಿ ಘಟಕದಿಂದ ವಿಶೇಷ ಪೂಜೆ ಸಲ್ಲಿಸುವ ವೇಳೆ ನಾನೂ ಭಾಗಿಯಾಗಿ ದೇವರಲ್ಲಿ ಪ್ರಾರ್ಥಿಸಿದ್ದೇನೆ ಎಂದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಅಧಿಕಾರಕ್ಕಾಗಿ ಹಪಹಪಿಸುವ ಈ ಕಾಲದಲ್ಲಿ ತಮಗೆ ಒಲಿದು ಬಂದಿದ್ದ ಅತ್ಯುನ್ನತ ಸ್ಥಾನವನ್ನು ತ್ಯಾಗ ಮಾಡಿ ಕಾಂಗ್ರೆಸ್ ಪಕ್ಷವನ್ನು ಬಲಿಷ್ಠವಾಗಿ ದೀರ್ಘಕಾಲ ಮುನ್ನಡೆಸಿದ ಕೀರ್ತಿ ಸೋನಿಯಾ ಗಾಂಧಿ ಅವರಿಗೆ ಸಲ್ಲುತ್ತದೆ. ಅವರು ಆದಷ್ಟು ಬೇಗ ಗುಣಮುಖರಾಗಿ ಪಕ್ಷವನ್ನು ಯಶಸ್ವಿಯಾಗಿ ಮುನ್ನಡೆಸಬೇಕು ಎಂದು ಆಶಿಸಿದರು.

ನಗರ ಪ್ರಧಾನ ಕಾರ್ಯದರ್ಶಿ ಶಿವಣ್ಣ ಮಾತನಾಡಿ, ಸೋನಿಯಾ ಗಾಂಧಿ ಅವರು ವಿಶ್ವ ಮೆಚ್ಚಿದ ನಾಯಕಿ. ಅಧಿಕಾರವನ್ನು ತ್ಯಾಗ ಮಾಡಿ ದೇಶಕ್ಕಾಗಿ ಶ್ರಮಿಸಿದ ತ್ಯಾಗಮಯಿ. ಅವರ ಆರೋಗ್ಯ ಆದಷ್ಟು ಬೇಗ ಸುಧಾರಣೆಯಾಗಲಿ ಎಂದರು.

ಓಬಿಸಿ ಘಟಕದ ನಗರಾಧ್ಯಕ್ಷ ಎನ್.ಆರ್. ನಾಗೇಶ್ ಮಾತನಾಡಿ, ಕಾಂಗ್ರೆಸ್ ಪಕ್ಷದ ಮಹಾನಾಯಕಿ ಸೋನಿಯಾ ಗಾಂಧಿ ಅವರು, ದೇಶದ ಪ್ರಧಾನಿಯಾಗುವ ಸುವರ್ಣ ಅವಕಾಶವನ್ನು ತ್ಯಾಗ ಮಾಡಿದರು. ಇಂತಹ ನಿಸ್ವಾರ್ಥ ನಾಯಕಿಯ ಸೇವೆ ಈ ದೇಶಕ್ಕೆ ಅಗತ್ಯವಿದೆ. ಅವರ ಆರೋಗ್ಯ ಬಹುಬೇಗ ಸುಧಾರಣೆಯಾಗಲೆಂದು ಕೋಟೆ ಆಂಜನೇಯಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, 101 ಈಡುಗಾಯಿ ಸೇವೆ ಸಮರ್ಪಿಸಲಾಗಿದೆ. ಈ ಕಾರ್ಯದಲ್ಲಿ ಭಾಗಿಯಾದ ಪಕ್ಷದ ಮುಖಂಡರು, ಕಾರ್ಯಕರ್ತರಿಗೆ ಧನ್ಯವಾದ ತಿಳಿಸುತ್ತೇನೆ ಎಂದರು.

ಈ ವೇಳೆ ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮಾಜಿ ಉಪಮೇಯರ್ ಸಿದ್ದರಾಜು, ಪಕ್ಷದ ದೇವರಾಜ ಬ್ಲಾಕ್ ಅಧ್ಯಕ್ಷ ನಾಗಭೂಷಣ್, ಓಬಿಸಿ ವಿಭಾಗದ ನಗರ ಕಾರ್ಯದರ್ಶಿ ಬಿ.ಜಿ. ಕೇಶವ, ಮುಖಂಡರಾದ ಆರ್.ಕೆ.ರವಿ, ವಿನೋದ್ ಉಪ್ಪಾರ್, ಮಹೇಂದ್ರ ಕಾಗಿನೆಲೆ, ರವಿ ನಾಯಕ್, ಸೌಮ್ಯಾ, ಜಯಲಕ್ಷ್ಮಿ, ವೆಂಕಟೇಶ್ ಮಡಿವಾಳ, ರವಿ ಕುಮಾರ್, ಲಕ್ಷ್ಮಿ ನಾರಾಯಣ, ಗೋಪಾಲ್, ಗಿರೀಶ್, ಆನಂದ್, ಮಾಯಾ ಶಿವಣ್ಣ, ಮಮತ, ಸರಸ್ವತಿ, ಸುಮನ, ಆರ್ಟಿಸ್ಟ್ ನಾಗರಾಜು, ಪರಶುರಾಮ, ಎಲ್.ರೂಪ ಮತ್ತಿತರರು ಉಪಸ್ಥಿತರಿದ್ದರು.



ಸೋನಿಯಾ ಗಾಂಧಿ ಅವರು ಶೀಘ್ರ ಗುಣಮುಖರಾಗಲೆಂದು ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಮಹಾವೀರ ಅಹಿಂಸಾ ಮಾರ್ಗ ಉತ್ತಮ ಜೀವನ ವಿಧಾನ



ಮೈಸೂರಿನ ಚಾಮುಂಡಿಪುರಂನಲ್ಲಿ ಭಗವಾನ್ ಶ್ರೀ ಮಹಾವೀರ ಜನ್ಮ ಕಲ್ಯಾಣ ಮಹೋತ್ಸವ ನಡೆಯಿತು.

ಮೈಸೂರು, ಮಾ.30(ಎಂಕೆ)– ಅಹಿಂಸೆಯ ಪ್ರತಿಪಾದಕರಾದ ಭಗವಾನ್ ಮಹಾವೀರರ ತತ್ವ–ಆದರ್ಶಗಳನ್ನು ಮೈಗೂಡಿಸಿಕೊಂಡು ಅಹಿಂಸಾ ಮಾರ್ಗದಲ್ಲಿ ನಡೆಯಬೇಕು ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ಮೈಸೂರಿನ ಚಾಮುಂಡಿಪುರಂನಲ್ಲಿರುವ ಜೈನ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿನ ಭಗವಾನ್ 1008ರ ಶ್ರೀ ಪಾರ್ಶ್ವನಾಥ ಜಿನ ಮಂದಿರದಲ್ಲಿ ಜೈನ ಬ್ರಾಹ್ಮಣ ಸ್ವಯಂ ಸೇವಾ ಸ್ನೇಹ ಬಳಗದ ವತಿಯಿಂದ ಆಯೋಜಿಸಿದ್ದ ಭಗವಾನ್ ಶ್ರೀ ಮಹಾವೀರ ಜನ್ಮ ಕಲ್ಯಾಣ ಮಹೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವಿಶ್ವ ಶಾಂತಿ ಮತ್ತು ಅಹಿಂಸೆ ಸ್ಥಾಪನೆಗೆ ಸಕಲ–ಸಂಪತ್ತನ್ನೂ ತ್ಯಾಗ ಮಾಡಿ, ತಪಸ್ಸು ಮಾಡಿದ ಮಹನೀಯ ಮಹಾವೀರರು ಎಂದು ಸ್ಮರಿಸಿದರು.

ಜಗತ್ತಿನಲ್ಲಿ ಶಾಂತಿ ನೆಲೆಸಬೇಕಾದರೆ ಪ್ರತಿಯೊಬ್ಬರು ಮಹಾವೀರರ ತತ್ವ– ಆದರ್ಶಗಳನ್ನು ಮೈಗೂಡಿಸಿಕೊಂಡು ಅಹಿಂಸಾ ದಾರಿಯಲ್ಲಿ ನಡೆಯಬೇಕು. ಪ್ರಸ್ತುತ ಯುದ್ಧದ ಕಾಲಘಟ್ಟದಲ್ಲಿ ಮಹಾವೀರರ ಅಹಿಂಸಾ ಪಾಲನೆ ಸಂದೇಶ ಅಗತ್ಯವಾಗಿದೆ. ಅವರ ಆರಾಧನೆ ಮತ್ತು ಅನುಸರಣೆ ಅತ್ಯವಶ್ಯವಾಗಿದೆ ಎಂದು ತಿಳಿಸಿದರು.

ಇದೇ ವೇಳೆ 1008 ಪಾರ್ಶ್ವನಾಥ ತೀರ್ಥಂಕರ ಹಾಗೂ ಮಹಾವೀರ ತೀರ್ಥಂಕರ ಉತ್ಸವ ಮೂರ್ತಿಗಳಿಗೆ ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸಿ, ನವಕಳಸ ಪಂಚಾಮೃತ ಅಭಿಷೇಕ ಹಾಗೂ ಇನ್ನಿತರ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ನಗರಪಾಲಿಕೆ ಮಾಜಿ ಸದಸ್ಯ ಮ.ವಿ.ರಾಮಪ್ರಸಾದ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಜೈನ್ ಬ್ರಾಹ್ಮಣ ಸ್ವಯಂ ಸೇವಾ ಸ್ನೇಹ ಬಳಗದ ಅಧ್ಯಕ್ಷ ಸಂಜೀವ್ ಕುಮಾರ್, ಕಾರ್ಯದರ್ಶಿ ಮೀನಾಶ್ರೀ, ಮುಖಂಡರಾದ ರವಿಕಾಂತ್, ಕುಮಾರ್, ನರೇಂದ್ರ, ಕುಮಾರ್, ಸ್ವರೂಪ್, ಸುಧಾಕರ್, ಶಿಲ್ಪ ಮತ್ತಿತರರಿದ್ದರು.

ಮೈಸೂರು ಮಿತ್ರ ಮಂಗಳವಾರ 31 ಮಾರ್ಚ್ 2026

ರಾಷ್ಟ್ರೀಯ ದಂತ ಆಯೋಗದ ಅಧ್ಯಕ್ಷರಾಗಿ ಡಾ.ಉಷಾ ಹೆಗ್ಡೆ ನೇಮಕ



ಡಾ.ಉಷಾ ಹೆಗ್ಡೆ

ಮೈಸೂರು, ಮಾ.30(ವಿಎನ್ಎಸ್)– ಮೈಸೂ ರಿನ ಜೆಎಸ್ಎಸ್ ದಂತ ಕಾಲೇಜು ಮತ್ತು ಆಸ್ಪತ್ರೆಯ ಓರಲ್ ಪೆಥಾಲಜಿ ವಿಭಾಗದ ಪ್ರಾಧ್ಯಾಪಕಿ ಡಾ.ಉಷಾ ಹೆಗ್ಡೆ ಅವರನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ರಾಷ್ಟ್ರೀಯ ದಂತ ಆಯೋಗದ (ಎನ್‌ಡಿಸಿ) ಪೂರ್ಣಾವಧಿ ಸದಸ್ಯರಾಗಿ ನೇಮಕ ಮಾಡಿದೆ. ದೇಶಾದ್ಯಂತ ದಂತ ವೈದ್ಯರ ವೃತ್ತಿಪರ ನಡವಳಿಕೆ ಮತ್ತು ನೋಂದಣಿಗಾಗಿ ರಚಿಸಲಾದ ಎನ್‌ಡಿಸಿಯ ವೃತ್ತಿ ನಿಷ್ಠತೆ ಮತ್ತು ದಂತ ನೋಂದಣಿ ಮಂಡಳಿಯಲ್ಲಿ 4 ವರ್ಷಗಳ ಅವಧಿಗೆ ಡಾ.ಉಷಾ ಹೆಗ್ಡೆ ಪೂರ್ಣಾವಧಿ ಸದಸ್ಯರಾಗಿ ರಲಿದ್ದಾರೆ. ನವದೆಹಲಿಯ ಕಚೇರಿಯಿಂದಲೇ ಎನ್‌ಡಿಸಿಯಲ್ಲಿ ತಮ್ಮ ಅವಧಿ ಸೇವೆ ಸಲ್ಲಿಸಲಿದ್ದಾರೆ.

ಸೋಮವಾರ ಬೆಳಿಗ್ಗೆ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಡಾ.ಉಷಾ ಹೆಗ್ಡೆ, ತಾವು, ರಾಷ್ಟ್ರೀಯ ದಂತ ಆಯೋಗದ ಭಾಗವಾಗಿ ರುವುದು ಒಂದು ಉನ್ನತ ಗೌರವವಾಗಿದೆ. ಈ ಕಾರ್ಯ ಹಾಗೂ ದಂತ ವೈದ್ಯಶಾಸ್ತ್ರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಉತ್ಸುಕತೆಯಿಂದ ಇದ್ದೇನೆ ಎಂದರು.

ಮೈಸೂರಿನ ಹೆಸರಾಂತ ಮೂಳೆ ಶಸ್ತ್ರ ಚಿಕಿತ್ಸಕ ಡಾ.ಅಜಯ್ ಹೆಗ್ಡೆ ಅವರ ಪತ್ನಿ ಡಾ.ಉಷಾ ಹೆಗ್ಡೆ ಓರ್ವ ನಿಪುಣ ಅಥ್ಲೀಟ್ ಆಗಿದ್ದು, ಎವರೆಸ್ಟ್ ಶಿಖರ ಏರಿದ ಮೊದಲ ಮೈಸೂರು ಮಹಿಳೆಯಾಗಿದ್ದಾರೆ.

ಮೈಸೂರಲ್ಲಿ ಭಕ್ತಿಭಾವ, ಅದ್ಧೂರಿ ಮಹಾವೀರ ಜಯಂತಿ ಆಚರಣೆ

ಮೈಸೂರು, ಮಾ.30(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸೋಮವಾರ ಮಹಾವೀರ ಜಯಂತಿಯನ್ನು ಭಕ್ತಿಭಾವ ಹಾಗೂ ಅದ್ಧೂರಿಯಾಗಿ ಆಚರಿಸಲಾಯಿತು. ಮಹಾವೀರ ಜಯಂತಿ ಹಿನ್ನೆಲೆಯಲ್ಲಿ ನಗರದಲ್ಲಿ ಮಹಾವೀರರ ಅದ್ಧೂರಿ ಮೆರವಣಿಗೆ ನಡೆಯಿತು. ಮೈಸೂರಿನ ಚಂದ್ರಗುಪ್ತ ರಸ್ತೆಯ ವರ್ಧಮಾನಯ್ಯ ಜೈನ್ ಬೋರ್ಡಿಂಗ್‌ನಲ್ಲಿ ಮುಂಜಾನೆ 6.30 ಗಂಟೆಗೆ ಮಹಾವೀರರಿಗೆ ಅಷ್ಟಗಂಧ, ಚಂದನ, ಕ್ಷೀರ, ಕಬ್ಬು ಸೇರಿದಂತೆ ಇತರೆ ದ್ರವ್ಯಗಳಿಂದ ಅಭಿಷೇಕ ನೆರವೇರಿಸಲಾಯಿತು.

ತರುವಾಯ ಪ್ರತ್ಯೇಕ ವಾಹನಗಳಲ್ಲಿ ಮೂರು ಮಹಾವೀರರ ಪ್ರತಿಮೆ ಇರುವ ಮೆರವಣಿಗೆ ವರ್ಧಮಾನಯ್ಯ ಜೈನ್ ಬೋರ್ಡಿಂಗ್ ನಿಂದ ಆರಂಭವಾಯಿತು. ಜೈನ ಬಾವುಟ ಹಿಡಿದ ನೂರಾರು ಮಂದಿ ಮಂಗಳ ವಾದ್ಯದೊಂದಿಗೆ ಮೆರವಣಿಗೆಯಲ್ಲಿ ಸಾಗಿದರು. ಮೆರವಣಿಗೆಯು ಅಶೋಕ ರಸ್ತೆ, ನೆಹರು ಸರ್ಕಲ್, ಮಹಾವೀರ ನಗರ, ಹಳ್ಳದಕೇರಿ ಮೂಲಕ ಮತ್ತೆ ವರ್ಧಮಾನಯ್ಯ ಜೈನ ಬೋರ್ಡಿಂಗ್‌ಗೆ ತಲುಪಿತು. ತರುವಾಯ ದೇವಸ್ಥಾನದಲ್ಲಿ ಮಹಾವೀರರ ಬಾಲ ಲೀಲೋತ್ಸವ ಸೇರಿದಂತೆ ಇತರೆ ಧಾರ್ಮಿಕ ಕಾರ್ಯಗಳು ನೆರವೇರಿತು. ಶ್ರೀ ದಿಗಂಬರ ಜೈನ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಸುನೀಲ್ ಜೈನ್, ಶ್ರೀ ಮಹಾವೀರ ಮಿತ್ರ ಮಂಡಳಿ ಅಧ್ಯಕ್ಷ ಅನಂತ ಪ್ರಸಾದ್, ಉಪಾಧ್ಯಕ್ಷ ದಿನಕಲ್, ನಿರ್ದೇಶಕರಾದ ಸನ್ಮತಿ, ಪ್ರಮೋದ್, ಹಿರಿಯ ವಕೀಲ ಹರೀಶ್ ಹೆಗ್ಡೆ ಸೇರಿದಂತೆ ಹಲವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನಲ್ಲಿ ಸೋಮವಾರ ಮಹಾವೀರ ಜಯಂತಿ ಪ್ರಯುಕ್ತ ಅದ್ಧೂರಿಯಾಗಿ ಮೆರವಣಿಗೆ ನಡೆಯಿತು.

ಬಸವ ಜಯಂತಿ ಕಾರ್ಯಕ್ರಮಕ್ಕೆ ಶಾಸಕ ಜಿ.ಟಿ.ದೇವೇಗೌಡರಿಗೆ ಆಹ್ವಾನ...



ಚಾಮುಂಡೇಶ್ವರಿ ಕ್ಷೇತ್ರದ ಶಾಸಕರು, ಮಾಜಿ ಸಚಿವರು ಹಾಗೂ ಸಹಕಾರ ಮಹಾ ಮಂಡಲದ ಅಧ್ಯಕ್ಷರಾದ ಜಿ.ಟಿ.ದೇವೇಗೌಡ ಅವರನ್ನು ಬಸವ ಜಯಂತಿ ಕಾರ್ಯಕ್ರಮಕ್ಕೆ ವಿಶೇಷವಾಗಿ ಆಹ್ವಾನಿಸಲಾಯಿತು. ಸಮಿತಿ ಅಧ್ಯಕ್ಷ ಎಂ.ಚಂದ್ರಶೇಖರ್, ಕೆ.ವಿ.ಮಲ್ಲೇಶ್, ಶಿವಮೂರ್ತಿ ಕಾನ್ಯ, ವಿರೂಪಾಕ್ಷ, ಕಲ್ಮಳ್ಳಿ ನಟರಾಜು, ಗಂಗಾಧರಸ್ವಾಮಿ, ಜಯಶಂಕರ್ ಇನ್ನಿತರರು ಉಪಸ್ಥಿತರಿದ್ದರು.

ರೈತ ಸಂಘಟನೆಗಳು, ಕಬ್ಬು ಬೆಳೆಗಾರರಿಂದ ಕೃಷಿ ಕಾರ್ಮಿಕ ಮಹಿಳೆಯರಿಗೆ ಸನ್ಮಾನ



ರೈತ ಸಂಘಟನೆಗಳ ಒಕ್ಕೂಟ, ಕಬ್ಬು ಬೆಳೆಗಾರ ಸಂಘದಿಂದ ಕೃಷಿ ಕಾರ್ಮಿಕ ಮಹಿಳೆಯರನ್ನು ಸನ್ಮಾನಿಸಲಾಯಿತು.

ಮೈಸೂರು, ಮಾ.30(ಜಿಎ)–ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕುರುಬೂರು ಶಾಂತಕುಮಾರ್ ಹುಟ್ಟುಹಬ್ಬದ ಅಂಗವಾಗಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರ ಸಂಘದ ವತಿಯಿಂದ ಕೃಷಿ ಕಾರ್ಮಿಕ ಮಹಿಳೆಯರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕುರುಬೂರು ಶಾಂತಕುಮಾರ್ ಮತ್ತು ಪತ್ರಿಕೋದ್ಯಮಿ ಮಹಿ ಮಹೇಶ್ ಅವರು ನಂಜನಗೂಡಿನ ನಾಗಮ್ಮ, ವಾಜಮಂಗಲದ ಭಾಗ್ಯಮ್ಮ, ಹೆಚ್.ಡಿ.ಕೋಟೆಯ ರೂಪ ಅವರನ್ನು ಸನ್ಮಾನಿಸಿದರು.

ನಂತರ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಕೃಷಿ ಕಾರ್ಯಕ್ಕೆ ಬೆನ್ನೆಲುಬಾಗಿ ಸದಾ ದುಡಿಯುವ ಮಹಿಳೆಯರನ್ನು ಗೌರವಿಸುತ್ತಿರುವುದು ರೈತ ಸಂಕುಲಕ್ಕೆ ಗೌರವ ತಂದುಕೊಡುತ್ತದೆ. ಕೃಷಿ ಕಾರ್ಮಿಕರು ರೈತರ ಕಣ್ಣುಗಳಿದ್ದಂತೆ. ಕೃಷಿ ಕಾರ್ಮಿಕ ಮಹಿಳೆಯರು ನಮ್ಮ ಸಮಾಜದ ಶಕ್ತಿಯಾಗಿದ್ದಾರೆ. ಅವರ ಶ್ರಮದಿಂದಲೇ ಕೃಷಿ ಕ್ಷೇತ್ರ ಬೆಳೆಯುತ್ತಿದೆ. ಆದ್ದರಿಂದ ಅವರನ್ನು ಗೌರವಿಸಿ, ಅವರ ಜೀವನ ಮಟ್ಟವನ್ನು ಸುಧಾರಿಸುವುದು ನಮ್ಮ ಎಲ್ಲರ ಹೊಣೆಗಾರಿಕೆಯಾಗಿದೆ ಎಂದರು.

ಸರ್ಕಾರ ಕೃಷಿ ಕಾರ್ಮಿಕ ಮಹಿಳೆಯರಿಗೆ ಉಚಿತ ಆರೋಗ್ಯ ಸೇವೆ ಹಾಗೂ ಜೀವನ ಭದ್ರತೆಯ ಕ್ರಮಗಳನ್ನು ಕೈಗೊಳ್ಳಬೇಕು. ಕೃಷಿ ಕ್ಷೇತ್ರದಲ್ಲಿ ಮಾತ್ರವಲ್ಲ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ದುಡಿಮೆಯಲ್ಲಿ ಮುಂದಾಗಿದ್ದಾರೆ ಎಂದು ತಿಳಿಸಿದರು.

ಜನರ ಧ್ವನಿ ಆಗಿ ಜನ ಸಾಮಾನ್ಯರ ಸಮಸ್ಯೆಗಳ ಬಗ್ಗೆ ಚಿಂತಿಸಬೇಕಾದ ಶಾಸಕರು ಹೈಟೆಕ್ ಭಿಕ್ಷುಕರಂತೆ ಐಪಿಎಲ್ ಕ್ರಿಕೆಟ್ ಟಿಕೆಟ್ ಬೇಡುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಕಿಡಿಕಾರಿದರು.

ಪತ್ರಿಕೋದ್ಯಮಿ ಮಹಿ ಮಹೇಶ್ ಮಾತನಾಡಿ, ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ತಮ್ಮ ಸಾಧನೆ ತೋರಿಸಿದ್ದಾರೆ. ಕೃಷಿ ಕ್ಷೇತ್ರದಲ್ಲೂ ಪುರುಷರಷ್ಟೇ ಸಮಾನವಾಗಿ ಕೆಲಸ ನಿರ್ವಹಿಸುತ್ತಾರೆ. ಸರ್ಕಾರಗಳು ಎಲ್ಲಾ ರಂಗದಲ್ಲಿಯೂ ಶೇ.50ರಷ್ಟು ಮೀಸಲಾತಿ ನೀಡುವುದು ಅವಶ್ಯಕವಿದೆ ಎಂದರು. ಈ ಸಂದರ್ಭದಲ್ಲಿ ರಾಜ್ಯ ಕಬ್ಬು ಬೆಳೆಗಾರ ಸಂಘದ ಖಜಾಂಚಿ ಎಂ.ಬಿ.ಚೇತನ್, ಕಮಲಮ್ಮ, ರೂಪ ಮುದುಕನಪುರ, ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಕಾರ್ಯಾಧ್ಯಕ್ಷ ಕಿರಗಸೂರು ಶಂಕರ್, ಜಿಲ್ಲಾಧ್ಯಕ್ಷ ಸೋಮಶೇಖರ್, ಮಾರ್ಬಳ್ಳಿ ನೀಲಕಂಠಪ್ಪ, ಲಕ್ಷ್ಮೀಪುರ ವೆಂಕಟೇಶ್, ವರಕೋಡು ನಾಗೇಶ್, ರಾಜೇಶ್, ದೇವನೂರು ವಿಜಯೇಂದ್ರ, ಕಿರಗಸೂರು ಪ್ರಸಾದ್ ನಾಯಕ, ಅಂಬಳೆ ಮಂಜುನಾಥ್, ಸಾತಗಳ್ಳಿ ಬಸವರಾಜ್, ಕಾಟೂರು ಮಹದೇವಸ್ವಾಮಿ, ದೇವನೂರು ಮಹಾದೇವಪ್ಪ, ಕೂರ್ಗಳ್ಳಿ ರವಿಕುಮಾರ್, ಕೆಂಡಗಣ್ಣಸ್ವಾಮಿ, ವಾಜಮಂಗಲ ಮಹಾದೇವು, ಪ್ರಭುಸ್ವಾಮಿ, ರಂಗರಾಜು ಉಪಸ್ಥಿತರಿದ್ದರು.

ಕಾವೇರಿ ಫಿಸಿಯೋಥೆರಪಿ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳಿಗೆ ರ್‍ಯಾಂಕ್



ಕೆ.ಎಂ. ಧನುಷ್



ಡಾ.ಡಿ.ಎಲ್.ಸಹನ

ಮೈಸೂರು, ಮಾ.30– ಮೈಸೂರಿನ ಡಾ.ಚಂದ್ರಶೇಖರ್ ಫೌಂಡೇಷನ್‌ನ ಕಾವೇರಿ ಸಮೂಹ ವಿದ್ಯಾಸಂಸ್ಥೆಗಳ ಅಂಗಸಂಸ್ಥೆ ಕಾವೇರಿ ಫಿಸಿಯೋಥೆರಪಿ ಕಾಲೇಜು, ಉತ್ತಮ ಫಲಿತಾಂಶ ಗಳಿಸಿದೆ.

ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಪ್ರಕಟಿಸಿದ 2026ನೇ ಸಾಲಿನ ಬ್ಯಾಚುಲರ್ ಆಫ್ ಫಿಸಿಯೋಥೆರಪಿ (ಬಿಪಿಟಿ) ಹಾಗೂ ಮಾಸ್ಟರ್ ಆಫ್ ಫಿಸಿಯೋಥೆರಪಿ (ಎಂಪಿಟಿ) ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಎಂಪಿಟಿ ನರವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ ಡಾ.ಡಿ.ಎಲ್.ಸಹನ ಹಾಗೂ ಬಿಪಿಟಿ ಪರೀಕ್ಷೆಯಲ್ಲಿ ಕೆ.ಎಂ.ಧನುಷ್ 5ನೇ ರ್‍ಯಾಂಕ್ ಪಡೆದಿದ್ದು, ಈ ಮೂಲಕ ಸತತ 2ನೇ ವರ್ಷವೂ ರ್‍ಯಾಂಕ್ ದೊರಕಿದೆ. ಅತ್ಯುತ್ತಮ ಸಾಧನೆ ಮಾಡಿದ ಈ ವಿದ್ಯಾರ್ಥಿಗಳನ್ನು ಕಾವೇರಿ ಸಮೂಹ ವಿದ್ಯಾಸಂಸ್ಥೆಗಳ ಆಡಳಿತ ಮಂಡಳಿ, ಫಿಸಿಯೋ ಥೆರಪಿ ಕಾಲೇಜಿನ ಪ್ರಾಂಶುಪಾಲರು ಹಾಗೂ ಅಧ್ಯಾಪಕ ವೃಂದ ಅಭಿನಂದಿಸಿದೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ 107 ಫಿಸಿಯೋಥೆರಪಿ ಕಾಲೇಜುಗಳು ಸಂಯೋಜಿತವಾಗಿದ್ದು, ಅವುಗಳಲ್ಲಿ ಕಾವೇರಿ ಫಿಸಿಯೋಥೆರಪಿ ಕಾಲೇಜ್ ಪ್ರತೀ ವರ್ಷವೂ ರ್‍ಯಾಂಕ್‌ಗಳೊಂದಿಗೆ ಶೇ.100ರಷ್ಟು ಫಲಿತಾಂಶ ಗಳಿಸುತ್ತಿರುವುದು ಗಮನಾರ್ಹ. ಇದು ಡಾ.ಜಿ.ಆರ್.ಚಂದ್ರಶೇಖರ್ ಅವರ ನೇತೃತ್ವದಲ್ಲಿ ಕಾವೇರಿ ಸಮೂಹ ವಿದ್ಯಾ ಸಂಸ್ಥೆಗಳು, ಕಾವೇರಿ ಹೃದಯ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ದೇಶದ ಪ್ರಮುಖ ಫಿಸಿಯೋಥೆರಪಿ ಕಾಲೇಜುಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಕೌಶಲ್ಯಯುತ, ಜ್ಞಾನ ಸಂಪನ್ನ ಹಾಗೂ ಮಾನವೀಯ ಮೌಲ್ಯ ಹೊಂದಿರುವ ಫಿಸಿಯೋ ಥೆರಪಿ ವೃತ್ತಿಪರರ ರೂಪಿಸುವ ಮೂಲಕ ಆರೋಗ್ಯ ಸಮಾಜ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಕಾವೇರಿ ಸಮೂಹ ವಿದ್ಯಾಸಂಸ್ಥೆಗಳ ಮುಖ್ಯ ಆಡಳಿತಾಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಮಾ. 30– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಏ. 2 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಮತಯಾಚನೆ...



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶ್ಯಾಮನೂರ್ ಪರ ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಪ್ರಚಾರ ನಡೆಸಿದರು. ಈ ವೇಳೆ ಮೈಲ್ಯಾಕ್ ಅಧ್ಯಕ್ಷ ಟಿ.ಡಿ.ಗಣೇಶ್ ಮತ್ತು ಕಾಂಗ್ರೆಸ್ ಮುಖಂಡ ಜವರೇಗೌಡ ಸೇರಿದಂತೆ ಇತರರು ಭಾಗವಹಿಸಿದ್ದರು.

ನಾಳೆಯಿಂದ ಮೈಸೂರಲ್ಲಿ ಬೇಸಿಗೆ ಕ್ರಿಕೆಟ್ ಶಿಬಿರ

ಮೈಸೂರು: ಮೈಸೂರಿನ ಐಎನ್‌ಎಸ್ ಕರ್ನಾಟಕ ಇನ್ಸ್‌ಟಿಟ್ಯೂಟ್ ಆಫ್ ಕ್ರಿಕೆಟ್ ವತಿಯಿಂದ ಗಂಡು ಮತ್ತು ಹೆಣ್ಣು ಮಕ್ಕಳಿಗಾಗಿ 14ನೇ ವಾರ್ಷಿಕ ಬೇಸಿಗೆ ಕ್ರಿಕೆಟ್ ಶಿಬಿರವನ್ನು ಏ.1ರಿಂದ ಮೇ 1ರವರೆಗೆ ಜೆ.ಕೆ.ಮೈದಾನದಲ್ಲಿ ಆಯೋಜಿಸಲಾಗಿದೆ.

ಶಿಬಿರವು ಬೆಳಗ್ಗೆ 7ರಿಂದ 9, ಸಂಜೆ 4ರಿಂದ 6.30ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 9738561320, 8073274654 ಸಂಪರ್ಕಿಸಿ.

ಗೋ.ಮಧುಸೂಧನ್‌ಗೆ ಮಾತೃವಿಯೋಗ



ಮೈಸೂರು, ಮಾ.30–ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂಧನ್ ಅವರ ತಾಯಿ, ಲೇಟ್ ಗೋಪಾಲಕೃಷ್ಣಚಾರ್ ಅವರ ಪತ್ನಿ ನಾಗವೇಣಿ ಬಾಯಿ(90) ಸೋಮವಾರ ನಿಧನರಾದರು.

ಮೃತರು ಪುತ್ರರಾದ ಗೋ. ಮಧುಸೂಧನ್ ಅಲ್ಲದೆ, ಗೋ ಶಶಿಕುಮಾರ್, ಗೋ ಸುದರ್ಶನ್ ಹಾಗೂ ಸೊಸೆಯಂದಿರು, ಮೊಮ್ಮಕ್ಕಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನ ಚಾಮರಾಜಪೇಟೆಯ ಟಿ.ಆರ್.ಮಿಲ್ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರು ಬೆಂಗಳೂರು ರಾಜಾಜಿನಗರ ಎರಡನೇ ಹಂತದ ನಿವಾಸಿ ಗೋ.ಶಶಿಕುಮಾರ್ ಅವರ ಮನೆಯಲ್ಲಿ ಕೆಲವು ದಿನಗಳಿಂದ ವಾಸವಿದ್ದು, ಚಿಕಿತ್ಸೆ ಪಡೆಯುತ್ತಿದ್ದರು.

ಶ್ರೀನಿವಾಸ್



ಮೈಸೂರು, ಮಾ.30– ನಂಜನಗೂಡು ತಾಲೂಕಿನ ಹಳ್ಳಿದಿಡಿ ಗ್ರಾಮದ ಹಿರಿಯ ಕಾಂಗ್ರೆಸ್ ಮುಖಂಡರೂ ಆದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಶ್ರೀನಿವಾಸ್ (80) ಅವರು ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಶಿವಮ್ಮ, ಮಕ್ಕಳಾದ ನಾಗಮ್ಮ, ಮಂಜುಳಾ, ಗಿರೀಶ್, ನಾಗಭೂಷಣ್, ಕೃಷ್ಣ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಹಳ್ಳಿದಿಡಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.3.2026 ಮಂಗಳವಾರ, ಮಳೆ ನಕ್ಷತ್ರ: ರೇವತಿ 31.03.2026 ರಿಂದ 13.04.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಪಿಸಿಓಡಿ ತೊಂದರೆ, ಬೊಜ್ಜು ನಿವಾರಣೆ, ಪಾರ್ಕಿನ್‌ಸನ್ಸ್ ಕಾಯಿಲೆ, ವಸಂತ ವಮನ ದೇಹಶುದ್ಧಿ, ಮೈಗ್ರೇನ್, ಕಿಡ್ನಿ ತಪಾಸಣೆ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ.

■ **ಅನ್ನಪೂರ್ಣ ಐ ಹಾಸ್ಪಿಟಲ್:** ಯುಗಾದಿ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಉಚಿತ ಕಣ್ಣಿನ ತಪಾಸಣೆ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, #199 ಸಾಯಿಪಾದಂ, ನ್ಯೂ ಕಾಂತರಾಜ್ ಅರಸ್ ರಸ್ತೆ, ಶಾರದಾದೇವಿ ನಗರ, ಬೆಳಗ್ಗೆ 10 ರಿಂದ.

■ **ಶ್ರೀ ಚುಂಚು ಗ್ರಾಮೀಣ ಸಂಗೀತ ಕಲಾ ಸಂಘ :** ಸಂಗೀತ ನೃತ್ಯ ಪ್ರತಿಭಾ ಕಲಾ ಪ್ರದರ್ಶನ, ಹೆಸರಾಂತ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಕು. ಅಯನ ಮತ್ತು ತಂಡದವರಿಂದ ಶ್ರೀ ಕೃಷ್ಣ ಅವತಾರ ನೃತ್ಯರೂಪಕ ಕಾರ್ಯಕ್ರಮ ಮತ್ತು ಕೋಲಾಟ, ಶ್ರೀಮತಿ ಅರವಿಂದ ಶ್ರೀನಿವಾಸ್ ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ (ಭಾವಗೀತೆಗಳು), ವಿದ್ವಾನ್ ಮಹದೇವ್ ಮತ್ತು ವೃಂದದವರಿಂದ ವಾದ್ಯ ಸಂಗೀತ ಕಾರ್ಯಕ್ರಮ, ವಿದ್ವಾನ್ ಚಂದನ್‌ಕುಮಾರ್ ಮತ್ತು ತಂಡದವರಿಂದ ದೇವರನಾಮ, ದಾಸರಪದಗಳು, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10 ರಿಂದ.

■ **ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್ :** 3ನೇ ವರ್ಷದ ವಾರ್ಷಿಕೋತ್ಸವ, ಸಖಿ ಸಂಭ್ರಮ–ವಿಶ್ವ ಮಹಿಳಾ ದಿನಾಚರಣೆ ಮತ್ತು ಸ್ಫೂರ್ತಿ ಸಖಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ನಿವೃತ್ತ ತಹಸೀಲ್ದಾರ್ ಡಾ.ವಿ.ರಂಗನಾಥ್, ಮುಖ್ಯ ಅತಿಥಿಗಳು: ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ, ರಾಜಾರಾಮ್‌ಭಟ್, ಟ್ರಸ್ಟ್ ಸಂಸ್ಥಾಪನಾ ಕಾರ್ಯದರ್ಶಿ ಗಾಯಿತ್ರಿ ಸುಂದರೇಶ್, ಸ್ಥಳ: ಸಿದ್ಧಿವಿನಾಯಕ ದೇವಸ್ಥಾನದ ಸಭಾಂಗಣ, ಕೆ.ಬ್ಲಾಕ್, ರಾಮಕೃಷ್ಣನಗರ, ಬೆಳಗ್ಗೆ 10.30 ರಿಂದ

■ **ಮೈಸೂರು ವಿಶ್ವವಿದ್ಯಾನಿಲಯ, ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ಸ್ಟಡಿ ವಿಭಾಗ, ಬಿ.ಎನ್. ರಾಣಿ ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್:** ಪ್ರೊ.ಡಿ.ಆನಂದ್ ಅವರಿಗೆ ಬೀಳ್ಕೊಡುಗೆ ಸಮಾರಂಭ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉಪಸ್ಥಿತರು: ಪ್ರೊ.ಬಿ.ಶಿವರಾಜ್, ಪ್ರೊ.ಡಿ.ಆನಂದ್, ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ಕುಲಸಚಿವ ಪ್ರೊ.ನಾಗರಾಜು, ಬಿಮ್ಸ್ ಅಧ್ಯಕ್ಷ ಪ್ರೊ.ಮಹೇಶ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಗ್ರಾಮ ಸಮೃದ್ಧಿ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ :** ವಿಶ್ವ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು : ಶಾಸಕ ಜಿ.ಟಿ. ದೇವೇಗೌಡ, ಶ್ರೀಮತಿ ಲಲಿತಾ ದೇವೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಚಂದ್ರಿಕಾ ಸುರೇಶ್, ಬಿ.ಎನ್. ಚಂದ್ರಶೇಖರ್, ರಾಕೇಶ್ ಪಾಪಣ್ಣ, ಕೂರ್ಗಳ್ಳಿ ಮಹದೇವ್, ಸ್ಥಳ: ಹುಣಸೂರು–ಮೈಸೂರು ಮುಖ್ಯ ರಸ್ತೆ, ಕೃಷ್ಣ ಬೇಕರಿ ಹತ್ತಿರ, ಹೂಟಗಳ್ಳಿ, ಬೆಳಗ್ಗೆ 10.30 ರಿಂದ.

■ **ಕರ್ನಾಟಕ ರಾಜ್ಯ ವೈಚಾರಿಕ ಚಿಂತಕರ ವೇದಿಕೆ, ಕ್ರೈಸ್ಟ್ ಕಾಲೇಜು, ಶ್ರೀರಾಂಪುರ:** ವಿಶ್ವ ಮಹಿಳಾ ದಿನಾಚರಣೆ, ಉದ್ಘಾಟನೆ: ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತ ಡಾ.ಬಾಣೇಗೌಡ, ಅಧ್ಯಕ್ಷತೆ : ಕ್ರೈಸ್ಟ್ ಕಾಲೇಜು ಪ್ರಿನ್ಸಿಪಾಲ್ ಫಾದರ್ ಜಿಂಟೋ ಜೋಸ್, ಆಶಯ ನುಡಿ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಮೈಸೂರು ಮಹಾನಗರಪಾಲಿಕೆ ಉಪ ಆಯುಕ್ತರಾದ ಪ್ರಭಾ ಚಂದ್ರಶೇಖರ್, ಪ್ರಾಸ್ತಾವಿಕ ನುಡಿ: ವೇದಿಕೆ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಮುಖ್ಯ ಅತಿಥಿಗಳು: ಕಾಲೇಜು ಉಪ ಪ್ರಿನ್ಸಿಪಾಲ್ ರೆಜೋ ಜೆಕಬ್, ವೇದರಾಜ್ ಕೊರಗಲ್, ಸ್ಥಳ: ಕ್ರೈಸ್ಟ್ ಕಾಲೇಜು ಸಭಾಂಗಣ, ಶ್ರೀರಾಂಪುರ, ಮಧ್ಯಾಹ್ನ 2.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ವಿಭಾಗ, ಯುವರಾಜ ಕಾಲೇಜು:** ಡಾ.ಎಚ್.ಜೆ.ಲಕ್ಕಪ್ಪಗೌಡ ಬದುಕು–ಬರಹ ಸಾಹಿತ್ಯ ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ: ಯುವರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ.ಎಸ್. ಮಹದೇವ ಮೂರ್ತಿ, ಸ್ಥಳ: ಕೊಠಡಿ ಸಂಖ್ಯೆ 50, ಐನ್‌ಸ್ಟೀನ್ ಸಭಾಂಗಣ, ಯುವರಾಜ ಕಾಲೇಜು, ಮಧ್ಯಾಹ್ನ 2.30ಕ್ಕೆ.

■ **ಜನ ಚೈತನ್ಯ ಫೌಂಡೇಷನ್:** ನಾ ಹಾಡಲು ನೀವು ಕೇಳಬೇಕು ಶೀರ್ಷಿಕೆಯಡಿ ಜನಪ್ರಿಯ ಚಲನಚಿತ್ರ ಗೀತೆಗಳ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಕೆ.ಆರ್.ಆಸ್ಪತ್ರೆ ಅಧೀಕ್ಷಕಿ ಡಾ.ಶೋಭಾ, ಶ್ರೀ ವಿದ್ಯಾಭಾರತಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ರಂಗನಾಥಯ್ಯ, ನಿವೃತ್ತ ಪ್ರಿನ್ಸಿಪಾಲ್ ಶಂಭು, ರಂಗನಾಥ್, ಪರಿಸರ ಕಾರ್ಯಕರ್ತ ಸತೀಶ್ ಪರಿಸರ, ಕೆ.ಆರ್.ಆಸ್ಪತ್ರೆ ಸರ್ಜನ್ ಡಾ.ಸುಭಾಷ್, ಹಿರಿಯ ಗಿಟಾರ್ ವಾದಕ ಬಾಬಿ, ಸ್ಥಳ: ಜನ ಚೈತನ್ಯ ಫೌಂಡೇಷನ್, ಟಿ.ಎಸ್.ಸುಬ್ಬಣ್ಣ ಹಾಸ್ಟೆಲ್ ಹಿಂಭಾಗ, ಸಂಜೆ 5ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ದತ್ತಿ ಉಪನ್ಯಾಸಗಳು, ಪ್ರಾಸ್ತಾವಿಕ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ: ಹಿರಿಯ ಸಮಾಜಸೇವಕರು ಡಾ.ಕೆ.ರಘುರಾಂ ವಾಜಪೇಯಿ, ಅಧ್ಯಕ್ಷತೆ: ಮೈಸೂರು ಪರಮಹಂಸ ಯೋಗ ಮಹಾವಿದ್ಯಾಲಯ ಸಂಸ್ಥಾಪಕರಾದ ಶ್ರೀ ಶಿವಪ್ರಕಾಶ್ ಗುರೂಜಿ, ಮುಖ್ಯ ಅತಿಥಿಗಳು : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಜಿಲ್ಲಾ ಕಸಾಪ ಕಾರ್ಯದರ್ಶಿ ಹೊನ್ನಾಳಿ ಡಾ.ಜಯಪ್ಪ, ದತ್ತಿ ಉಪನ್ಯಾಸ: ಮಹಾರಾಜ ಕಾಲೇಜು ಆಂಗ್ಲ ಉಪನ್ಯಾಸಕಿ ನಿವೇದಿತ ಹೆಚ್., ಕನ್ನಡ ಸಹಾಯಕ ಪ್ರಾಧ್ಯಾಪಕ ಪರಮೇಶ್ ಉತ್ತನಹಳ್ಳಿ, ಉಪನ್ಯಾಸಕ ಮು.ನಾ.ರಮೇಶ್, ಸಮಾಜ ಸೇವಕ ಪ್ರಭುಸ್ವಾಮಿ. ಸ್ಥಳ : ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಸಂಜೆ 5ಕ್ಕೆ.

■ **ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಮೈಸೂರು ಸ್ಥಳೀಯ ಶಾಖೆ:** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ: ಕಾವಾ ಆಡಳಿತಾಧಿಕಾರಿ ನಿರ್ಮಲ ಮಠಪತಿ, ಗೌರವ ಅತಿಥಿಗಳು: ಡಾ.ಜೆ.ವಿ.ಆದಿತ್ಯ, ಅಧ್ಯಕ್ಷತೆ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಹೆಚ್.ಎಸ್.ಸುರೇಶ್‌ಬಾಬು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ರಂಗತಂಡ:** ನಾಡೋಜ ಬೆಳಗಲ್ಲು ವೀರಣ್ಣನವರ 98ನೇ ಹಾಗೂ ಬಿ.ಪುಟ್ಟಸ್ವಾಮಯ್ಯನವರ 130ನೇ ಸವಿನೆನಪಿನ ಪೌರಾಣಿಕ ರಂಗ ಸಂಭ್ರಮ–2026, ಸಂಜೆ 5.30 ರಿಂದ ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡದಿಂದ ರಂಗ ಗೀತೆಗಳು, ಸಮಾರೋಪ ನುಡಿ: ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಂಜೆ 6.45 ರಿಂದ ರಕ್ತರಾತ್ರಿ ನಾಟಕ ಪ್ರದರ್ಶನ, ರಚನೆ : ಕಂದಗಲ್ಲ ಹನುಮಂತರಾಯರು, ನಿರ್ದೇಶನ : ಟಿ. ನಾಗರಾಜ ಹಿರೇಕುಂಬಳಗುಂಟೆ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 5.30 ರಿಂದ.

■ **ಸಾತ್ವಿಕಿ ಫೌಂಡೇಶನ್:** ಉಚಿತ ನಾಟಕ ತರಬೇತಿ ಶಿಬಿರ, ರಚನೆ: ವೆಂಕಣಗೌಡ, ಸಂಗೀತ: ವಿಶ್ವನಾಥ್, ನಿರ್ದೇಶನ: ಅಂಕಿತ್‌ರಾಜ್, ಸ್ಥಳ: ಧ್ವನ್ಯಲೋಕ, ಬೋಗಾದಿ ರಸ್ತೆ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ–ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎಂ.ರಾಘವೇಂದ್ರ ಹಾಗೂ ಜಯಂತಿ ವಿ.ಭಟ್, ವ್ಯಾಖ್ಯಾನ–ಡಾ.ಹೆಚ್. ಎಂ.ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 –ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು ಮುಕ್ತವಾಣಿ. ಪ್ರಾಯೋಜಕರು: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುವೆಂಪು ಸಂಶೋಧನ ಮತ್ತು ವಿಸ್ತರಣಾ ಕೇಂದ್ರದದಲ್ಲಿನ ಅಧ್ಯಯನ ಅವಕಾಶಗಳನ್ನು ಕುರಿತು ಕೇಂದ್ರದ ಸಂಯೋಜಕರಾದ ಡಾ.ಎನ್.ಆರ್.ಚಂದ್ರೇಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ : ಎನ್.ಕೇಶವಮೂರ್ತಿ, 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಅಮೃತ ವೆಂಕಟೇಶ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಆರ್.ಲೋಕೇಶ್ವರಿ ಬಿ.ಜಿ.ಕವಿತಾ ಹಾಗೂ ಲಕ್ಷ್ಮೀನಾರಾಯಣ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಜಿ. ಪುಷ್ಪಲತಾ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಏಮಾನಿ ಶಂಕರ ಶಾಸ್ತ್ರಿ–ವೀಣಾವಾದನ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ–ಭಕ್ತ ಪುರಂದರದಾಸರು, ಪ್ರಸ್ತುತಿ–ಸಂತ ಶ್ರೀ ಭದ್ರಗಿರಿ ಅಚ್ಯುತ ದಾಸರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಾವಯವ ತರಕಾರಿ ಬೇಸಾಯ ಕುರಿತು ಸಂವಾದ, ಭಾಗವಹಿಸುತ್ತಾರೆ ನಾಗಮಂಗಲ ತಾಲೂಕು ಬಿಂಡಿಗನವಿಲೆ ಹೋಬಳಿ, ಸಾತೇನಹಳ್ಳಿಯ ಕುಮಾರಸ್ವಾಮಿ ಮತ್ತು ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಹೋಬಳಿ ಹಗಿನವಾಳು ಗ್ರಾಮದ ಜೆ. ಅಭಿನಂದನ್, ಪ್ರಸ್ತುತಿ : ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್, ಸಾಪ್ತಾಹಿಕ ಸಂಚಿಕೆ. ಪ್ರಸ್ತುತಿ–ದಿಗ್ವಿಜಯ್ .ಬಿ., 8.00 ಸಂಸತ್ ಸಮೀಕ್ಷಾ, 8.15 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಜಯಂತ್‌ಕುಮಾರ್‌ದಾಸ್–ಸಿತಾರ್ ವಾದನ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ಡಿ.ಸುಮತಿ ಮುರಾರಿ–ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣದ ಪ್ರಸಾರ.

ಶ್ರೀರಾಮ ನವಮಿ ಕಾರ್ಯಕ್ರಮಗಳು



■ **ಶ್ರೀ ರಾಮ ಮಂದಿರ, ಜಯನಗರ ಮೈಸೂರು:** 60 ನೇ ವರ್ಷದ ರಾಮೋತ್ಸವ, ಶ್ರೀರಾಮಚಂದ್ರಸ್ವಾಮಿಯವರ ಸೀತಾಕಲ್ಯಾಣ, ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹಗಳ ವಾರ್ಷಿಕೋತ್ಸವ, ಹನುಮಂತೋತ್ಸವ ಮತ್ತು ವಸಂತೋತ್ಸವ ಕಾರ್ಯಕ್ರಮ, ಬೆಳಗ್ಗೆ 9 ಗಂಟೆಗೆ ನಾಂದಿ, ಬೆಳಗ್ಗೆ 10ಕ್ಕೆ ಸುಹಾಸಿನಿಯವರಿಂದ ಬಳೆ ಪೂಜೆ, ಹೂವೀಳ್ಯ, ಸಂಜೆ 6 ರಿಂದ ವಿದ್ವಾನ್ ಕೇಶವಮೋಹನ್ ಅವರಿಂದ ಪಿಟೀಲು ವಾದನ ಕಾರ್ಯಕ್ರಮ, ಸಂಜೆ 8 ಗಂಟೆಗೆ ವರಪೂಜೆ, ಸ್ಥಳ: ಶ್ರೀರಾಮಮಂದಿರ ಜಯನಗರ

■ **ಶ್ರೀರಾಮ ಸೇವಾ ಮಂಡಳಿ :** 73ನೇ ವರ್ಷದ ಶ್ರೀರಾಮೋತ್ಸವ, ಅಖಂಡ ಭಜನೆ ಕಾರ್ಯಕ್ರಮ, ಬೆಳಗ್ಗೆ 10ರಿಂದ ವಿದ್ಯಾರಣ್ಯಪುರಂ ರಾಗಸಂವರ್ಧಿನಿ ಮಹಿಳಾ ಸಂಘ, ಬೆಳಗ್ಗೆ 11 ರಿಂದ ವಿದ್ಯಾರಣ್ಯಪುರಂ ಧಾತ್ರಿ ಭಜನಾ ಮಂಡಳಿ, ಮಧ್ಯಾಹ್ನ 12 ರಿಂದ ಚಾಮುಂಡಿಪುರಂ ಲಕ್ಷ್ಮೀಕಾಂತ ಭಜನಾ ಮಂಡಳಿ, ಮಧ್ಯಾಹ್ನ 2 ರಿಂದ ವಿದ್ಯಾರಣ್ಯಪುರಂ ಚೇತನ ಮಹಿಳಾ ಸಮಾಜ, ಮಧ್ಯಾಹ್ನ 3 ರಿಂದ ಸರಸ್ವತಿಪುರಂ ಚಿನ್ಮಯ ಭಜನಾ ಮಂಡಳಿ, ಸಂಜೆ 4 ರಿಂದ ಚಾಮರಾಜ ಮೊಹಲ್ಲಾ ಚಂದನ್ ಸಂಗೀತ ಶಾಲೆ, ಸಂಜೆ 5 ರಿಂದ ವಿದ್ಯಾರಣ್ಯಪುರಂ ಸ್ಕಂದ ಭಜನಾ ಮಂಡಳಿ, ಸಂಜೆ 6.30 ರಿಂದ ವಿದ್ವಾನ್ ಅನೀಷ್ ವಿ. ಭಟ್, ಮಂಗಳೂರು ಮತ್ತು ವೃಂದದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀ ಅವನಿಶಂಕರ ಮಠ 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ವಿದ್ಯಾರಣ್ಯಪುರಂ, ಮೈಸೂರು.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ಮೈಸೂರು:** ಶ್ರೀ ಪರಭಾವ ಸಂವತ್ಸರದ 136ನೇ ವರ್ಷದ ಶ್ರೀ ರಾಮೋತ್ಸವ, ಶ್ರೀ ಪರಭಾವ ಸಂವತ್ಸರದ ಶ್ರೀ ರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದುಷಿ ಎಸ್.ಶುಭಲಕ್ಷ್ಮಿ, ವಿದುಷಿ ಎಸ್.ಸ್ವರ್ಣಲತಾ (ಅಕ್ಕರೈ ಸಹೋದರಿಯರು) ಅವರಿಂದ ದ್ವಂದ್ವ ಶಾಸ್ತ್ರೀಯ ಸಂಗೀತ, ವಿದ್ವಾನ್ ಗೋಕುಲ್–ಪಿಟೀಲು, ವಿದ್ವಾನ್ ಅರ್ಜುನ್‌ಕುಮಾರ್–ಮೃದಂಗ, ವಿದ್ವಾನ್ ರಂಗನಾಥ್ ಚಕ್ರವರ್ತಿ, ಸ್ಥಳ: ಶಿವರಾಮಪೇಟೆ, ವಿನೋಬರಸ್ತೆ, ಮೈಸೂರು, ಸಂಜೆ 6.30ರಿಂದ.

ಭಗವಾನ್ ಮಹಾವೀರರ ಜೀವನ, ಬೋಧನೆಗಳು ಸಾರ್ವಕಾಲಿಕ

ಮಡಿಕೇರಿ, ಮಾ.30–ಭಗವಾನ್ ಮಹಾವೀರರ ತತ್ವ, ಚಿಂತನೆಯನ್ನು ಅಳವಡಿಸಿಕೊಂಡಲ್ಲಿ ಪ್ರಪಂಚದಲ್ಲಿ ಯಾವುದೇ ಯುದ್ಧ ನಡೆಯುವುದಿಲ್ಲ. ಆ ನಿಟ್ಟಿನಲ್ಲಿ ಭಗವಾನ್ ಮಹಾವೀರರ ಸಂದೇಶಗಳು ಸಾರ್ವಕಾಲಿಕವಾಗಿದೆ ಎಂದು ನಿವೃತ್ತ ಪ್ರಾಂಶುಪಾಲರಾದ ಡಾ. ವಾಣಿ ಪುಷ್ಪರಾಜ್ ಪ್ರತಿಪಾದಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಗಾಂಧಿ ಭವನದಲ್ಲಿ ಸೋಮವಾರ ನಡೆದ ಭಗವಾನ್ ಮಹಾವೀರರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಮೆರಿಕಾ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಿಂದ ವಿಶ್ವದಲ್ಲಿ ಒಂದು ರೀತಿ ಸಂದಿಗ್ಧ ವಾತಾವರಣ ನಿರ್ಮಾಣವಾಗಿದೆ. ಇದರಿಂದ ಆರ್ಥಿಕ ಚಟುವಟಿಕೆ ಹಾಗೂ ಅಭಿವೃದ್ಧಿ ಕುಂಠಿತವಾಗುತ್ತಿದೆ ಎಂದರು.



ಭಗವಾನ್ ಮಹಾವೀರರ ಜಯಂತಿ ಕಾರ್ಯಕ್ರಮವನ್ನುದ್ದೇಶಿಸಿ ಗಣ್ಯರು ಮಾತನಾಡಿದರು.

ಅಲ್ಪಸಂಖ್ಯಾತರ ವಿಭಾಗದ ಸದಸ್ಯ ಜಿ.ಎನ್. ಚಂದ್ರಪ್ರಸಾದ್ ಅವರು ಮಾತನಾಡಿ, ಸಮಾಜದಲ್ಲಿ ಅಹಿಂಸೆ, ಶಾಂತಿ ಇರಬೇಕು. ಮೋಸ ಮತ್ತು ವಂಚನೆ ಇರಬಾರದು. ಯಾರಿಗೂ ನೋವು ಉಂಟಾಗದಂತೆ ನಡೆದುಕೊಳ್ಳಬೇಕು. ಸತ್ಯ ಧರ್ಮ ದಲ್ಲಿ ನಂಬಿಕೆ ಇರಬೇಕು. ಆ ನಿಟ್ಟಿನಲ್ಲಿ ಭಗವಾನ್ ಮಹಾವೀರರ ಸಂದೇಶಗಳು ಇಂದಿಗೂ ಸಹ ಸಾರ್ವಕಾಲಿಕವಾಗಿವೆ ಎಂದು ತಿಳಿಸಿದರು.

ಜೈನ ಸಮಾಜದ ಜಿಲ್ಲಾಧ್ಯಕ್ಷ ಜೆ.ಎನ್. ಪುಷ್ಪರಾಜ್ ಮಾತನಾಡಿ ಭಗವಾನ್ ಮಹಾವೀರರ ಸಂದೇಶಗಳನ್ನು ಅಳವಡಿಸಿಕೊಂಡಲ್ಲಿ ಪ್ರಪಂಚದಲ್ಲಿ ಶಾಂತಿ ಸ್ಥಾಪಿಸಲು ಸಾಧ್ಯ, ಆ ನಿಟ್ಟಿನಲ್ಲಿ ಭಗವಾನ್ ಮಹಾವೀರರ ಚಿಂತನೆ ಮತ್ತು ಮಾರ್ಗದರ್ಶನಗಳು ಪ್ರಸ್ತುತ ದಿನದಲ್ಲಿ ಹಿಂದಿಗಿಂತ ಇಂದು ಅತ್ಯಗತ್ಯವಾಗಿದೆ ಎಂದು ಅವರು ನುಡಿದರು.

ತಹಸೀಲ್ದಾರ್ ಕಚೇರಿಯ ಶಿರಸ್ತೇದಾರ್ ದೇವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ, ವಿದ್ಯಾರ್ಥಿಗಳು ಇತರರು ಇದ್ದರು.

ಎಮ್ಮೆಮಾಡು ಗ್ರಾಮದಲ್ಲಿ ಅತಿರೇಕದ ವರ್ತನೆ

ಹಿಂದೂ ಸಂಘಟನೆಗಳ ಆಕ್ರೋಶ

ಮಡಿಕೇರಿ, ಮಾ.30–ಎಮ್ಮೆಮಾಡು ಗ್ರಾಮದಲ್ಲಿ ನಡೆದ ಮುಸ್ಲಿಂ ಸಮುದಾಯದ ಮದುವೆ ಸಮಾರಂಭವೊಂದರಲ್ಲಿ ತುಳುನಾಡಿನ ಪವಿತ್ರ ದೈವವನ್ನೇ ಹೋಲುವ ರೀತಿಯಲ್ಲಿ ಮದುಮಗನಿಗೆ ವೇಷ ಹಾಕಿ ಅತಿರೇಕದ ವರ್ತನೆ ತೋರಿರುವ ಘಟನೆ ಹಿಂದೂ ಸಂಘಟನೆಗಳ ಆಕ್ರೋಶಕ್ಕೆ ಕಾರಣವಾಗಿದೆ. ಮದುಮಗ ಮತ್ತು ಆತನ ಬೆಂಬಲಿಗರ ಈ ವಿಡಿಯೋಗಳು ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಆಕ್ರೋಶಕ್ಕೆ ಕಾರಣವಾಗಿವೆ.

ಮುಸ್ಲಿಂ ಸಮುದಾಯದಲ್ಲಿ ಮದುವೆ ದಿನ ರಾತ್ರಿ ಮದುಮಗ ತನ್ನ ಸ್ನೇಹಿತರೊಂದಿಗೆ ಸೇರಿ ತಮಾಷೆಗಾಗಿ ಒಂದಷ್ಟು ವಿನೋದದ ಕಾರ್ಯಕ್ರಮಗಳನ್ನು ಮಾಡುವುದು ಪದ್ಧತಿಯಾಗಿದೆ. ಆದರೆ ಎಮ್ಮೆಮಾಡಿನಲ್ಲಿ ನಡೆದ ಈ ವಿವಾಹದಲ್ಲಿ ಮದುಮಗನಿಗೆ ತುಳುನಾಡಿನ ದೈವದ ಕೋಲದ ಮಾದರಿಯಲ್ಲಿ ಮುಖ ಹಾಗೂ ಮೈಗೆ ಬಣ್ಣ ಬಳಿದು, ದೈವವನ್ನೇ ಅಣಕಿಸುವ ರೀತಿಯಲ್ಲಿ ವಿಕೃತವಾಗಿ ವರ್ತಿಸಲಾಗಿದೆ. ಈ ವೀಡಿಯೋ ವೈರಲ್ ಆಗುತ್ತಿದ್ದಂತೆ ಸಾರ್ವಜನಿಕ ವಲಯದಲ್ಲಿ ತೀವ್ರ ಖಂಡನೆ ವ್ಯಕ್ತವಾಗಿದೆ.

ತುಳುನಾಡಿನ ದೈವಾರಾಧನೆಯನ್ನು ಅಣಕಿಸಿದ ಮದುಮಗ ಮತ್ತು ತಂಡದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ



ಮದುಮಗನಿಗೆ ವೇಷ ಹಾಕಿರುವುದು

ವೀಡಿಯೋ ವೈರಲ್ ಆಗುತ್ತಿದ್ದು, ಸಾರ್ವಜನಿಕರು ಆಕ್ರೋಶಿತರಾಗಿ ಧಾರ್ಮಿಕ ಸಾಮರಸ್ಯಕ್ಕೆ ಧಕ್ಕೆ ತರುವ ಇಂತಹ ಕೃತ್ಯಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದ್ದಾರೆ. ಈ ಬಗ್ಗೆ ಎಚ್ಚೆತ್ತ ನಾಪೋಕ್ಲು ಪೊಲೀಸರು ಘಟನೆ ಕುರಿತು ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬ್ರೇಕ್ ವಿಫಲ: ನಿಲ್ದಾಣದ ಕಂಬಕ್ಕೆ ಬಸ್ ಡಿಕ್ಕಿ

ಮಡಿಕೇರಿ,ಮಾ.30–ಬ್ರೇಕ್ ವಿಫಲಗೊಂಡ ಪರಿಣಾಮ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಮುಂದಿನ ಕಂಬಕ್ಕೆ ಡಿಕ್ಕಿ ಹೊಡೆದ ಘಟನೆ ನಗರದಲ್ಲಿ ನಡೆದಿದೆ. ಮಡಿಕೇರಿಯಿಂದ ಸುಳ್ಯಕ್ಕೆ ತೆರಳಬೇಕಿದ್ದ ಬಸ್ ಕೆಎಸ್ಆರ್‌ಟಿಸಿ ಡಿಪೋದಿಂದ ನಿಲ್ದಾಣಕ್ಕೆ ಆಗಮಿಸಿದೆ. ಈ ವೇಳೆ ಬ್ರೇಕ್ ನಿಲ್ದಾಣದಲ್ಲೇ ವಿಫಲಗೊಂಡು ನಿಲ್ದಾಣದ ಕಂಬಕ್ಕೆ ಡಿಕ್ಕಿಯಾಗಿ ನಿಂತಿದೆ. ಈ ಕಂಬ ಇಲ್ಲವಾಗಿದ್ದಲ್ಲಿ ಪ್ರಯಾಣಿಕರಿಗೆ ಅಪಾಯ ಎದುರಾಗುವ ಎಲ್ಲಾ ಸಾಧ್ಯತೆ ಇತ್ತು ಎಂದು ಪ್ರತ್ಯಕ್ಷದರ್ಶಿಗಳು ಮಾಹಿತಿ ನೀಡಿದ್ದಾರೆ. ಬಸ್‌ಗಳ ಸಮರ್ಪಕ ನಿರ್ವಹಣೆ ಕೊರತೆ ಇಂತಹ ಘಟನೆಗೆ ಕಾರಣವಾಗುತ್ತಿದೆ ಎಂದು ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ನಾಲ್ನಾಡ್ ಕಪ್ : ಅಂತರ ಗ್ರಾಮ ಹಾಕಿ ಪಂದ್ಯಾವಳಿ

ನಾಪೋಕ್ಲು, ಮಾ.30–ಸಮೀಪದ ಬಲ್ಲಮಾವಟಿ ಗ್ರಾಮದ ನೇತಾಜಿ ಪ್ರೌಢಶಾಲೆಯ ಆಟದ ಮೈದಾನದಲ್ಲಿ ಆಯೋಜಿಸಲಾಗಿದ್ದ ನಾಲ್ನಾಡ್ ಅಂತರ ಗ್ರಾಮ ಹಾಕಿ ಪಂದ್ಯಾವಳಿಯ ಸೋಮವಾರದ ಪಂದ್ಯಗಳಲ್ಲಿ, ಯವಕಪಾಡಿ, ಬಲ್ಲಮಾವಟಿ ಯೆಲ್ಲೋ, ನಾಪೋಕ್ಲು–ಎ, ನೆಲಜಿ, ತಂಡಗಳು ಮುನ್ನಡೆ ಸಾಧಿಸಿದವು.

ಸೋಮವಾರ ಕೊಳಕೇರಿ ಮತ್ತು ಯವಕಪಾಡಿ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಯವಕಪಾಡಿ ತಂಡ 4–2 ಅಂತರದಿಂದ ಜಯ ಸಾಧಿಸಿತು. ಎರಡನೇ ಪಂದ್ಯ ಬಲಮಾವಟಿ ಯೆಲ್ಲೋ ಮತ್ತು ಮರಂದೋಡ ತಂಡಗಳ ನಡುವೆ ನಡೆಯಿತು ಬಲ್ಲಮಾವಟಿ ಯೆಲ್ಲೋ ತಂಡ 3–2 ಅಂತರದಿಂದ ಜಯ ಸಾಧಿಸಿತು.

ಕುಂಜಿಲ ತಂಡ ಸ್ಪರ್ಧೆಯಲ್ಲಿ ಪಾಲ್ಗೊಳ್ಳದ ಕಾರಣ ಬಲ್ಲಮಾವಟಿ ವೈಟ್ ತಂಡ ಮುಂದಿನ ಸುತ್ತಿಗೆ ಅರ್ಹತೆ ಗಳಿಸಿತು.



ಪೇರೂರು ಮತ್ತು ನಾಪೋಕ್ಲು ತಂಡಗಳ ನಡುವೆ ನಡೆದ ಪಂದ್ಯದಲ್ಲಿ ನಾಪೋಕ್ಲು ತಂಡ 2–1 ಅಂತರದಿಂದ ಗೆಲುವು ಸಾಧಿಸಿ ಮುಂದಿನ ಸುತ್ತು ಪ್ರವೇಶಿಸಿತು. ನೆಲಜಿ ತಂಡದ ಪರವಾಗಿ ಕೌಶಿಕ್ 2 ಹಾಗೂ ಡಿವಿನ್ 1 ಗೋಲು ಗಳಿಸಿದರು.

ರಾಜ್ಯ ಹಾಕಿ ತಂಡಕ್ಕೆ ವಿದ್ಯಾರ್ಥಿನಿಯರ ಆಯ್ಕೆ

ಮಡಿಕೇರಿ,ಮಾ.30–ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ ಸಬ್–ಜೂನಿಯರ್ ಹಾಕಿ ರಾಜ್ಯ ಮಟ್ಟದ ಆಯ್ಕೆ ಶಿಬಿರದಲ್ಲಿ ಕೊಡಗು ವಿದ್ಯಾಲಯದ 10ನೇ ತರಗತಿಯ ಮೂವರು ವಿದ್ಯಾರ್ಥಿನಿಯರು ರಾಜ್ಯ ತಂಡಕ್ಕೆ ಆಯ್ಕೆಯಾಗಿದ್ದಾರೆ. ನಗರ ನಿವಾಸಿ ಕನ್ನಂಡ ಕೆ.ಎಂ ಪೊನ್ನಪ್ಪ ಹಾಗೂ ನಳಿನಿ ದಂಪತಿ ಪುತ್ರಿ ವರ್ಣ ಬೋಜಮ್ಮ, ನಾಪೋಕ್ಲುವಿನ ಕಲಿಯಂಡ ಬೋಪಣ್ಣ ಹಾಗೂ ನೀತು ದಂಪತಿ ಪುತ್ರಿ ತೇಜಲ್ ಬೋಪಣ್ಣ ಮತ್ತು ಚೆಟ್ಟಳ್ಳಿಯ ಕೆಚ್ಚೆಟ್ಟಿರ ಮೊಣ್ಣಯ್ಯ ಹಾಗೂ ಮುತ್ತಮ್ಮ ದಂಪತಿ ಪುತ್ರಿ ಲಕ್ಷ್ಯ ಪೊನ್ನಕ್ಕ ಅವರುಗಳು ಬೆಂಗಳೂರಿನ ಶಾಂತಿನಗರದ ಹಾಕಿ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ಹಾಕಿ ಕ್ರೀಡಾ ಆಯ್ಕೆ ಶಿಬಿರದಲ್ಲಿ ಭಾಗವಹಿಸಿ ಆಯ್ಕೆಯಾಗಿದ್ದಾರೆ.



ಲಕ್ಷ್ಯ ವರ್ಣ ತೇಜಲ್

ಇಂದು ಮೇಲುಕೋಟೆಯಲ್ಲಿ ಮಹಾ ರಥೋತ್ಸವ

ವೈಭವದಿಂದ ನಡೆದ ವೈರಮುಡಿ ಬ್ರಹ್ಮೋತ್ಸವ ಗಜೇಂದ್ರ ಮೋಕ್ಷಂ ಉತ್ಸವ

ಮೇಲುಕೋಟೆ: ಚೆಲುವನಾರಾಯಣ ಸ್ವಾಮಿ ವೈರಮುಡಿ ಬ್ರಹ್ಮೋತ್ಸವದ ಪ್ರಯುಕ್ತ ಮಹಾ ರಥೋತ್ಸವ ಮಾ.31 ರಂದು ನಡೆಯಲಿದೆ. ಬೆಳಗ್ಗೆ 8 ಗಂಟೆಯ ವೇಳೆಗೆ ದೇವಾಲಯದಲ್ಲಿ ಯಾತ್ರಾದಾನ ನೆರವೇರಿದ ನಂತರ ರಥಮಂಟಪಕ್ಕೆ ಚೆಲುವ ನಾರಾಯಣನ ಉತ್ಸವ ನೆರವೇರಲಿದೆ. ರಥಾರೋಹಣದ ನಂತರ ಮಹಾರಥ ನಾಲ್ಕೂ ಬೀದಿಗಳಲ್ಲಿ ಸಂಚರಿಸಲಿದೆ.

ರಥಾರೂಢನಾದ ಚೆಲುವನಾರಾಯಣ ಸ್ವಾಮಿಯ ದರ್ಶನದಿಂದಲೇ ಎಲ್ಲಾ ಸಂಕಷ್ಟಗಳು ಪರಿಹಾರವಾಗುತ್ತದೆ ಎಂಬ ಪ್ರತೀತಿಯಿದ್ದು ಚೆಲುವನಾರಾಯಣಸ್ವಾಮಿ ಮನೆದೇವರ ಒಕ್ಕಲಿನವರು ತೆರೊಪ್ಪತ್ತು ಮಾಡಿ ರಥೋತ್ಸವದಲ್ಲಿ ಭಾಗಿಯಾಗುತ್ತಾರೆ. ಸುಮಾರು ಲಕ್ಷಕ್ಕೂ ಹೆಚ್ಚು ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ. ರಾತ್ರಿ ಹರಿಜನರ ಸೇವೆಯಾದ ಪುಷ್ಪಾಲಂಕೃತ ಬಂಗಾರದ ಪಲ್ಲಕ್ಕಿ ಉತ್ಸವ ವೈಭವದಿಂದ ನಡೆಯಲಿದೆ.

ವೈರಮುಡಿ ಬ್ರಹ್ಮೋತ್ಸವದ 6ನೇ ತಿರುನಾಳ್ ಅಂಗವಾಗಿ ಸೋಮವಾರ ಗಜೇಂದ್ರ ಮೋಕ್ಷ ಉತ್ಸವ ನಡೆಯಿತು. ಮಹಾವಿಷ್ಣು ರಾಕ್ಷಸ ಸ್ವರೂಪಿಯಾದ ಮೊಸಳೆಯಿಂದ ಗಜೇಂದ್ರನ್ನು ರಕ್ಷಿಸಿದ ಪ್ರತೀಕವಾಗಿ ನಡೆಯುವ ಗಜೇಂದ್ರ ಮೋಕ್ಷ ರಾತ್ರಿ ನೆರವೇರಿತು ಆನೆ ಮತ್ತು ಕುದುರೆ ವಾಹನೋತ್ಸವಗಳು ನಡೆದವು.

ತೆಪ್ಪೋತ್ಸವ ವೈಭವ: ಕರ್ನಾಟಕ ಮಾತ್ರವಲ್ಲದೆ ಭಾರತದ ದೇವಾಲಯಗಳಲ್ಲೇ ಅತ್ಯಾಕರ್ಷಕ ತೆಪ್ಪೋತ್ಸವ ನಡೆಯುವ ಕ್ಷೇತ್ರ ಮೇಲುಕೋಟೆ ಎಂಬ ಖ್ಯಾತಿಗೆ ಪಾತ್ರವಾಗಿದ್ದು ಬುಧವಾರ ಏ.1ರಂದು ರಾತ್ರಿ ವಜ್ರಖಚಿತ ರಾಜಮುಡಿ ಅಲಂಕಾರದೊಂದಿಗೆ ತೆಪ್ಪೋತ್ಸವ ನಡೆಯಲಿದೆ.



ಚೆಲುವನಾರಾಯಣ ಸ್ವಾಮಿಗೆ ಗಜೇಂದ್ರಮೋಕ್ಷ ಉತ್ಸವ ವೈಭವದಿಂದ ನೆರವೇರಿತು.

ಯೋಗನರಸಿಂಹಸ್ವಾಮಿ ಬೆಟ್ಟದ ತಪ್ಪಲು, ಸಾಲುಮಂಟಪದೊಂದಿಗೆ ಇರುವ ವಿಶಾಲವಾದ ಕಲ್ಯಾಣಿಯಲ್ಲಿ ನಡೆಯುವ ತೆಪ್ಪೋತ್ಸವ ತಿರುಮಲೆ, ಶ್ರೀರಂಗಂ ಕಂಚಿಗಿಂತ ನಯನ ಮನೋಹರವಾಗಿ ನಡೆಯಲಿರುವುದು ರಾಮಾನುಜಾಚಾರ್ಯರ ಕರ್ಮಭೂಮಿಯ ವಿಶೇಷವಾಗಿದ್ದು ತೆಪ್ಪೋತ್ಸವ ಕಣ್ತುಂಬಿಕೊಳ್ಳಲು ಭಕ್ತರು ಕಾತುರರಾಗಿದ್ದಾರೆ

ಮೇಲುಕೋಟೆ ಕಲ್ಯಾಣಿಯಲ್ಲಿ ಕಳೆದ ವರ್ಷ ನಡೆದ ತೆಪ್ಪೋತ್ಸವ ವೇಳೆ ಮಾಡಿದ್ದ ದೀಪಾಲಂಕಾರಕ್ಕಿಂತಲೂ ಭಿನ್ನವಾಗಿ ಆಕರ್ಷಕವಾಗಿ ದೀಪಾಲಂಕಾರ ಮಾಡಲಾಗುತ್ತಿದೆ. ತೆಪ್ಪೋತ್ಸವದ ಅಂಗವಾಗಿ ಇಡೀ ಕಲ್ಯಾಣಿ ಸಮುಚ್ಚಯಕ್ಕೆ ಝಗಮಗಿಸುವ ದೀಪಾಲಂಕಾರ ಮಾಡಲಾಗಿದೆ. ಭರತನಾಟ್ಯ, ಈ ವರ್ಷ ಲೇಸರ್ ಷೋ ಸಹ ಇದ್ದು ವೈವಿಧ್ಯಮಯ ಪಟಾಕಿಗಳನ್ನು ಸಿಡಿಸಲಾಗುತ್ತದೆ. ಶಿವಕಾಶಿಯಿಂದಲೇ ಸ್ಕೈಶಾಟ್ಸ್‌ಗಳನ್ನು ತರಿಸಲಾಗಿದೆ. ನಾದೋಪಾಸನ ಸೇವೆಯಡಿ ಮಂಗಳವಾದ್ಯ ಕೈಂಕರ್ಯ ಸಹ ನಡೆಯಲಿದೆ ಎಂದು ದೇವಾಲಯದ ಮೂಲಗಳು ತಿಳಿಸಿವೆ.

ಏ.2ರಂದು ಶಿವಲಿಂಗಯ್ಯ ಸಮಾಜ ಸೇವಾ ಪ್ರಶಸ್ತಿ ಪ್ರದಾನ

ಮಂಡ್ಯ: ಕರ್ನಾಟಕ ಸಂಘದಿಂದ 9ನೇ ವರ್ಷದ ಎಂ.ಶಿವಲಿಂಗಯ್ಯ ಸಮಾಜ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏ.2ರಂದು ಸಂಜೆ 5 ಗಂಟೆಗೆ ನಗರದ ಕೆ.ವಿ. ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಕಾರ್ಯದರ್ಶಿ ಪಿ.ಲೋಕೇಶ್ ಚಂದಗಾಲು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಶಸ್ತಿಗೆ ಆನಂದ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ಜೆ. ಪಾಪೇಗೌಡ ಅವರನ್ನು ಆಯ್ಕೆ ಮಾಡಿದ್ದು, 10 ಸಾವಿರ ರೂ. ನಗದು, ಪ್ರಶಸ್ತಿ ಫಲಕದೊಂದಿಗೆ ಅಭಿನಂದಿಸಲಾಗುವುದು ಎಂದರು. ಮಾಜಿ ಶಾಸಕ ಎಂ. ಶ್ರೀನಿವಾಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ವಿಶ್ರಾಂತ ಕುಲಪತಿ ಡಾ. ಎನ್.ಎಸ್.ರಾಮೇಗೌಡ ಪ್ರಶಸ್ತಿ ಪ್ರದಾನ ಮಾಡುವರು. ಶಿಕ್ಷಣ ಚಿಂತಕ ಡಾ. ಎಸ್. ಬಿ.ಶಂಕರಗೌಡ ಅಭಿನಂದನಾ ನುಡಿಗಳನ್ನು ನುಡಿಯುವರು. ಮುಖ್ಯ ಅತಿಥಿಗಳಾಗಿ ಆನಂದ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಗಿಣಿಸ್ವಾಮಿ, ಜೆಡಿಎಸ್ ಮಹಿಳಾ ರಾಜ್ಯಾಧ್ಯಕ್ಷೆ ರಶ್ಮಿ ರಾಮೇಗೌಡ, ದತ್ತಿದಾನಿ ಎಂ.ಕೆ. ಲಕ್ಷ್ಮಿ ಭಾಗವಹಿಸುವರು ಎಂದರು.

ಮದ್ದೂರಲ್ಲಿ ವರ್ಷದೊಳಗೆ ವಿದ್ಯುತ್, ಕುಡಿಯುವ ನೀರಿನ ಸಮಸ್ಯೆ ನಿವಾರಣೆ

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಶಾಸಕ ಉದಯ್ ಘೋಷಣೆ

ಮದ್ದೂರು: ಕ್ಷೇತ್ರದಲ್ಲಿ ಒಂದು ವರ್ಷದೊಳಗೆ ಶಾಶ್ವತವಾಗಿ ವಿದ್ಯುತ್ ಹಾಗೂ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.

ತಾಲೂಕಿನ ಕೆ.ಹೊನ್ನಲಗೆರೆ, ರಾಜೇಗೌಡನದೊಡ್ಡಿ ಗ್ರಾಮಗಳಲ್ಲಿ ಸೋಮವಾರ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು.

ಇನ್ನೊಂದು ವರ್ಷದಲ್ಲಿ ತಾಲೂಕಿನ ಕೆ.ಹೊನ್ನಲಗೆರೆ, ಕೆ.ಬೆಳ್ಳೂರು ಹಾಗೂ ಕೂಳಗೆರೆ ಭಾಗಗಳಲ್ಲಿ ತಲೆದೋರಿರುವ ವಿದ್ಯುತ್, ನೀರಾವರಿ ಸಮಸ್ಯೆಗೆ ಶಾಶ್ವತವಾಗಿ ಮುಕ್ತಿ ನೀಡಲಾಗುವುದು ಎಂದರು.

ಕೂಳಗೆರೆ ಗ್ರಾಮದಲ್ಲಿ 66 ಕೆವಿ ಸಬ್ ಸ್ಟೇಷನ್ ಹಾಗೂ ಸೋಮನಹಳ್ಳಿ ಬಳಿ 220 ಕೆವಿ ಸಬ್‌ಸ್ಟೇಷನ್ ನಿರ್ಮಾಣ ಮಾಡುತ್ತಿದ್ದು, ಇದರ ಜತೆಗೆ ಬನ್ನಹಳ್ಳಿ ಏತ ನೀರಾವರಿ ಯೋಜನೆಯೂ ಅಂತಿಮ ಹಂತಕ್ಕೆ ತಲುಪಿದ್ದು, ಎರಡು ಮೂರು ತಿಂಗಳಲ್ಲಿ ಚಾಲನೆ ನೀಡಲಾಗುವುದು ಇದರಿಂದ 18ಕೆರೆಗಳಿಗೆ ನೀರು ತುಂಬಿಸುವ ಮೂಲಕ ಅಂತರ್ಜಲ ವೃದ್ಧಿಗೆ, ಕುಡಿಯುವ ನೀರು ಹಾಗೂ ಕೃಷಿಗೂ ನೀರಿನ ಸಮಸ್ಯೆ ಉಂಟಾಗುವುದಿಲ್ಲ ಎಂದರು.



ಸೋಮವಾರ ಮದ್ದೂರು ತಾಲೂಕಿನಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಉದಯ್ ಭೂಮಿ ಪೂಜೆ ನೆರವೇರಿಸಿದರು.

ಬೇಸಿಗೆಯಲ್ಲಿ ವಿದ್ಯುತ್, ಕುಡಿಯುವ ನೀರು ಸಮಸ್ಯೆಯಾಗದಂತೆ ಈಗಾಗಲೇ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಸೂಚನೆ ನೀಡಲಾಗಿದೆ. ರೈತರಿಗೆ ಹಗಲು ಹೊತ್ತಿನಲ್ಲಿಯೇ ವಿದ್ಯುತ್ ನೀಡಬೇಕು ಹಾಗೂ ಕುಡಿಯುವ ನೀರಿನ ಯೋಜನೆಗೆ ಸಾಕಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಯಾವುದೇ ರೀತಿಯ ತೊಂದರೆಯಾಗುವುದಿಲ್ಲ ಎಂದು ಭರವಸೆ ನೀಡಿದರು.

ಅಭಿವೃದ್ಧಿಯಿಂದ ವಂಚಿತವಾಗಿರುವ ಗ್ರಾಮಗಳನ್ನು ಆದ್ಯತೆ ಮೇರೆಗೆ ಪಟ್ಟಿ ಮಾಡಿಕೊಂಡು ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸರ್ಕಾರದಿಂದ ಮತ್ತಷ್ಟು ವಿಶೇಷ ಅನುದಾನ ತಂದು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿ ಮಾದರಿ ಕ್ಷೇತ್ರವನ್ನಾಗಿ ಮಾಡಲಾಗುವುದು ಎಂದು ತಿಳಿಸಿದರು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಚಲುವರಾಜು, ಪುಟ್ಟಸ್ವಾಮಿ, ಅಪ್ಪಾಜಿಗೌಡ ಮತ್ತು ರಾಜು, ಸಿದ್ದರಾಮು, ಪ್ರಜ್ವಲ್, ಪ್ರದೀಪ್, ಶಿವರಾಮು, ಶಿವ ಮಾದು, ಕಾಡಯ್ಯ, ವೈರಮುಡಿ, ಕೆಂಪಣ್ಣ ಅಂಗಡಿ ಕೃಷ್ಣ ನಾಗೇಶ್, ಕುಮಾರ್, ಸಂತೋಷ್, ನಂಜುಂಡ, ಯತೀಶ್, ಹರೀಶ್ ಇನ್ನಿತರರಿದ್ದರು.

ಕಿಕ್ಕೇರಮ್ಮ ತೆಪ್ಪೋತ್ಸವದೊಂದಿಗೆ ಜಾತ್ರಾ ಸಡಗರ ಸಂಪನ್ನ

ಕಿಕ್ಕೇರಿ: ಲಕ್ಷ್ಮೀಪುರ–ಕಿಕ್ಕೇರಿ ಗ್ರಾಮಗಳ ಅದಿದೇವತೆ ಕಿಕ್ಕೇರಮ್ಮ ದೇವಿಯ ಜಾತ್ರಾ ಮಹೋತ್ಸವ ಪಟ್ಟಣದಲ್ಲಿರುವ ಸಿರಿಗೆರೆ (ಅಮಾನಿಕೆರೆ)ಯಲ್ಲಿ ತೆಪ್ಪೋತ್ಸವದ ಮೂಲಕ ಸಂಪನ್ನವಾಯಿತು.

ಯುಗಾದಿಯಂದು ಆರಂಭವಾದ ಜಾತ್ರಾ ಸಡಗರ ಹತ್ತು ದಿನಗಳ ಕಾಲ ವಿಜೃಂಭಣೆಯಿಂದ ಜರುಗಿತು. ಇಡೀ ಗ್ರಾಮ ವಿದ್ಯುತ್ ದೀಪಗಳ ಅಲಂಕಾರದಿಂದ ಕಂಗೊಳಿಸಿತು. ನಿತ್ಯ ವಿವಿಧ ಧಾರ್ಮಿಕ ಕೈಂಕರ್ಯಗಳು ನಡೆದವು. ಮುಂಜಾನೆ, ಮುಸ್ಸಂಜೆಯಲ್ಲಿ ದೇವಿಯ ಮೆರವಣಿಗೆ, ಭಕ್ತರಿಗೆ ದೇವಿ ದರ್ಶನ, ಹಣ್ಣು ತುಪ್ಪ ರಸಾಯನ ಪ್ರಸಾದ ಸೇವೆ ನಡೆಯಿತು. ಓಕುಳಿ ಹಬ್ಬ, ವಸಂತನ ಹಬ್ಬ, ಬಾಣಬಿರುಸು ಪ್ರದರ್ಶನ, ಕುರುಕ್ಷೇತ್ರ ನಾಟಕ, ಹೂವಿನ ಪಲ್ಲಕ್ಕಿ ಉತ್ಸವ ಜರುಗಿತು. ಅಂತಿಮವಾಗಿ ಗ್ರಾಮದೇವಿಯನ್ನು ತೆಪ್ಪದಲ್ಲಿ ಮಾಡಲಾದ ವಿಶೇಷ ಸೇವೆಗೆ ವಿವಿಧ ಗ್ರಾಮಗಳಿಂದ ಭಕ್ತರು ಆಗಮಿಸಿ ಕಣ್ತುಂಬಿಕೊಂಡರು. ಯಲ್ಲಕ್ಕಿಗೌಡರ ಕುಟುಂಬದವರು ತೆಪ್ಪೋತ್ಸವ ಉಸ್ತುವಾರಿ ವಹಿಸಿದ್ದರು.



ಮರಳೇಶ್ವರ, ಶಿವನಸಮುದ್ರದಲ್ಲಿ ಸೋಮೇಶ್ವರ ರಥೋತ್ಸವ ಸಂಪನ್ನ



ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ರಥೋತ್ಸವಕ್ಕೆ ಚಾಲನೆ ನೀಡಿದರು.

ಕೊಳ್ಳೇಗಾಲ, ಮಾ.30– ಕೊಳ್ಳೇಗಾಲ ಪಟ್ಟಣದಲ್ಲಿ ಮರಳೇಶ್ವರ ರಥೋತ್ಸವ ಹಾಗೂ ತಾಲೂಕಿನ ಶಿವನಸಮುದ್ರ ಸಮೂಹದ ದೇವಾಲಯದ ಶ್ರೀ ಮೀನಾಕ್ಷಿ ಸಮೇತ ಸೋಮೇಶ್ವರ ಬ್ರಹ್ಮರಥೋತ್ಸವವು ಅದ್ದೂರಿಯಾಗಿ ನಡೆಯಿತು.

ಪಟ್ಟಣದ ಮರಳೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಸಿದ್ಧಗೊಂಡಿದ್ದ ರಥದ ಮೇಲೆ ಮೀನಾಕ್ಷೀ ಸಮೇತ ಶ್ರೀ ಮರಳೇಶ್ವರಸ್ವಾಮಿಯ ಉತ್ಸವಮೂರ್ತಿಯನ್ನು ಪ್ರತಿಷ್ಠಾಪಿಸಿ ನಂತರ ಪೂಜೆ ಸಲ್ಲಿಸಿದ ಬಳಿಕ ರಥದ ಚಕ್ರಕ್ಕೆ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ಈಡುಗಾಯಿ ಹೊಡೆಯುವ ಮೂಲಕ ಚಾಲನೆ ನೀಡಿದರು.

ಇದಕ್ಕೂ ಮುನ್ನ ಮುಂಜಾನೆಯಿಂದ ರುದ್ರಾಭಿಷೇಕ, ಶಿವಯಾಗ ಪೂಜೆ, ಹೂವಿನ ಅಲಂಕಾರ ನಡೆಸಿ ಮಹಾ ಮಂಗಳಾರತಿ ಮಾಡಲಾಯಿತು.

ನಂತರ ಉತ್ಸವಮೂರ್ತಿಯನ್ನು ಪೂಜೆ ಸಲ್ಲಿಸಿ ದೇವಸ್ಥಾನದಲ್ಲಿ ಪ್ರದಕ್ಷಿಣೆ ನಡೆಸಿ ನಂತರ ಹೊರಬಂದು ಸಿದ್ಧವಾಗಿದ್ದ ರಥದ ಮೇಲೆ ಕೂರಿಸಿ ರಾಜಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಮಹಿಳೆಯರು, ಮಕ್ಕಳು, ಗಣ್ಯರು ಸಹಾ ತೇರನ್ನು ಎಳೆಯುವ ಮೂಲಕ ಸಂಭ್ರಮಿಸಿದರು

ತಾಲೂಕಿನ ಶಿವನಸಮುದ್ರದಲ್ಲಿ ಸೋಮೇಶ್ವರ ಬ್ರಹ್ಮರಥೋತ್ಸವದ ಹಿನ್ನೆಲೆ ಮುಂಜಾನೆಯಿಂದ ಶಿವಯಾಗ, ಬಲಿ ಪ್ರಧಾನ, ರಥ ಪ್ರತಿಷ್ಠೆ, ಯಾತ್ರಾ ದಾನೋತ್ಸವ, ಮಂಟಪೋತ್ಸವ ನಡೆಸಿ, ವಿಶೇಷ ಪೂಜಾ ಕೈಂಕರ್ಯಗಳು ನಡೆಸಲಾಯಿತು.

ಬಳಿಕ ಅಲಂಕೃತಗೊಂಡಿದ್ದ ರಥಗಳಲ್ಲಿ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ ಪೂಜೆ, ಮಂಗಳಾರತಿ ಬಳಿಕ ರಾಜ ಬೀದಿಗಳಲ್ಲಿ ತೇರಿನ ಮೆರವಣಿಗೆ ನಡೆಸಲಾಯಿತು. ಈ ವೇಳೆ ನೂರಾರು ಭಕ್ತರು ಪಾಲ್ಗೊಂಡಿದ್ದರು

ಗುಂಡ್ಲುಪೇಟೆ ತಾಲೂಕಲ್ಲಿ ಆನೆ, ಹುಲಿ ಹಾವಳಿ

- ರೈತರ ಟಮೋಟೊ ತಿಂದು ನಾಶಪಡಿಸಿದ ಆನೆ
- ಜಮೀನಿನಲ್ಲಿ ಹಸು ಕೊಂದು ಹಾಕಿದ ಹುಲಿ





ಆನೆಯೊಂದು ದಾಳಿ ನಡೆಸಿ ಶೆಡ್ ಧ್ವಂಸಗೊಳಿಸಿರುವುದು. ಮತ್ತೊಂದು ಚಿತ್ರದಲ್ಲಿ ಹಸುವನ್ನು ಹುಲಿ ಕೊಂದು ಹಾಕಿರುವುದು.

ಗುಂಡ್ಲುಪೇಟೆ, ಮಾ.30– ತಾಲೂಕಿನ ನಾನಾ ಗ್ರಾಮಗಳಲ್ಲಿ ವನ್ಯಜೀವಿಗಳು ದಾಳಿ ನಡೆಸಿ ರೈತರ ಜಮೀನುಗಳಲ್ಲಿ ಬೆಳೆದಿರುವ ಬೆಳೆಗಳನ್ನು ನಾಶಪಡಿಸುವ ಜತೆಗೆ ಸಾಕುಪ್ರಾಣಿಗಳನ್ನು ಕೊಂದುಹಾಕುತ್ತಿವೆ.

ಪ್ರತಿ ದಿನವೂ ಬಂಡೀಪುರ ಹುಲಿ ಯೋಜನೆಯ ಅರಣ್ಯದಿಂದ ಹೊರಬರುತ್ತಿರುವ ಹುಲಿ, ಆನೆ ಹಾಗೂ ಚಿರತೆಗಳು ಒಂದಲ್ಲಾ ಒಂದು ಕಡೆ ದಾಳಿ ಮಾಡುತ್ತಿವೆ.

ಓಂಕಾರ್ ವಲಯದ ಅರಣ್ಯದಿಂದ ಹೊರಬಂದ ಆನೆಯೊಂದು ಕಾಡಂಚಿನ ಗ್ರಾಮವಾದ ಮಂಚಹಳ್ಳಿಯಲ್ಲಿ ದಾಳಿ ನಡೆಸಿದೆ. ಗ್ರಾಮದ ಮಂಜುನಾಥ ಎಂಬುವರ ಜಮೀನಿನಲ್ಲಿ ಮಾರುಕಟ್ಟೆಗೆ ಕೊಂಡೊಯ್ಯಲು ಕ್ರೇಟ್‌ಗಳಲ್ಲಿ ತುಂಬಿಸಿಟ್ಟಿದ್ದ ಟೊಮೆಟೊವನ್ನು ತಿಂದು ತುಳಿದು ನಾಶಪಡಿಸುವ ಜತೆಗೆ ಶೆಡ್‌ನ ಶೀಟುಗಳನ್ನು ಕಿತ್ತೆಸೆದು ದಾಂಧಲೆ ನಡೆಸಿದೆ.

ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಓಂಕಾರ್ ವಲಯದ ಆರ್‌ಎಫ್‌ಒ ಹನುಮಂತಪ್ಪ ಪಾಟೀಲ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಕೂಡಲೇ ಆನೆಯನ್ನು ಕಾಡಿಗಟ್ಟಲು ಕ್ರಮಕೈಗೊಳ್ಳುವ ಹಾಗೂ ಬೆಳೆನಷ್ಟ ಪರಿಹಾರ ಕೊಡಿಸುವ ಭರವಸೆ ನೀಡಿದರು. ಇದಲ್ಲದೆ ತಾಲೂಕಿನ ಭೀಮನಬೀಡು ಗ್ರಾಮದ ಜಮೀನಿನಲ್ಲಿ ಮೇಯುತ್ತಿದ್ದ ಗೋಪಾಲಶೆಟ್ಟಿ ಎಂಬುವರಿಗೆ ಸೇರಿದ ಹಸುವಿನ ಮೇಲೆ ಹುಲಿ ದಾಳಿ ನಡೆಸಿ ಕೊಂದು ಹಾಕಿದೆ. ಈ ವೇಳೆ ಅಕ್ಕಪಕ್ಕದ ಜಮೀನುಗಳಲ್ಲಿದ್ದ ರೈತರು ಜೋರಾಗಿ ಕೂಗಿಕೊಳ್ಳುತ್ತಿದ್ದಂತೆ ಹುಲಿ ಓಡಿಹೋಗಿದೆ.

ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ತೆರಳಿದ ಬಫರ್ ವಲಯದ ಅರಣ್ಯಾಧಿಕಾರಿ ಶಿವಕುಮಾರ್ ಹಾಗೂ ಸಿಬ್ಬಂದಿ ಹೆಜ್ಜೆ ಗುರುತುಗಳನ್ನು ಹುಡುಕಾಡಿದರು. ಹುಲಿ ಸೆರೆಗೆ ಸ್ಥಳದಲ್ಲಿ ಕ್ಯಾಮೆರಾ ಹಾಗೂ ಬೋನು ಅಳವಡಿಸಲಾಗುವುದು ಹಾಗೂ ಜಾನುವಾರು ನಷ್ಟಕ್ಕೆ ಪರಿಹಾರ ಕೊಡುವ ಭರವಸೆ ನೀಡಿದರು.

ಇಂದಿರಾ ಕ್ಯಾಂಟೀನ್‌ಗೆ ನುಗ್ಗಿದ ಕಲುಷಿತ ನೀರು

ಚಾಮರಾಜನಗರ: ನಗರದ ಜಿಲ್ಲಾಡಳಿತ ಭವನದ ಪಕ್ಕದಲ್ಲಿರುವ ಇಂದಿರಾ ಕ್ಯಾಂಟೀನ್‌ಗೆ ಯುಜಿಡಿಯ ಕಲುಷಿತ ನೀರು ನುಗ್ಗಿದ ಪರಿಣಾಮ ಕ್ಯಾಂಟೀನ್‌ನಲ್ಲಿದ್ದ ಆಹಾರ ಪದಾರ್ಥಗಳು ಹಾಳಾಗಿದ್ದು, ಮೂರು ದಿನಗಳ ಕಾಲ ಕ್ಯಾಂಟೀನ್ ಬಂದ್ ಮಾಡಲಾಗಿದೆ. ಭಾನುವಾರ ತಡರಾತ್ರಿ ಜಿಲ್ಲಾ ಕೇಂದ್ರದಲ್ಲಿ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಸುರಿದ ಧಾರಾಕಾರ ಮಳೆಯಿಂದ ಯುಜಿಡಿ ಪೈಪ್‌ಗಳಿಂದ ಕಲುಷಿತ ನೀರು ಹೊರಬಂದು ಮಳೆ ನೀರಿನೊಂದಿಗೆ ಸೇರಿ ಅಪಾರ ಪ್ರಮಾಣದಲ್ಲಿ ಕ್ಯಾಂಟೀನ್ ಮುಂಭಾಗ ಸಂಗ್ರಹವಾಗಿದೆ.




ಕಲುಷಿತ ನೀರು ಕ್ಯಾಂಟೀನ್ ಮುಂಭಾಗ ಸುಮಾರು ಅರ್ಧ ಅಡಿ ಎತ್ತರದಲ್ಲಿ ಸಂಗ್ರಹವಾಗಿದ್ದು, ಕ್ಯಾಂಟೀನ್ ಒಳಗಡೆ ಇಟ್ಟಿದ್ದ ದಿನಸಿ ಹಾಗೂ ಆಹಾರ ಪದಾರ್ಥಗಳು ಸಂಪೂರ್ಣವಾಗಿ ಹಾಳಾಗಿದೆ.

ಬೆಳಗ್ಗೆ ಕ್ಯಾಂಟೀನ್‌ಗೆ ಬಂದ ಸಾರ್ವಜನಿಕರು ಕಲುಷಿತ ನೀರು ಕಂಡು ವಾಪಾಸ್ ತೆರಳಿದರು. ಕ್ಯಾಂಟೀನ್ ನೌಕರರು ಪರಿಶೀಲಿಸಿ, ಮೂರು ದಿನಗಳ ಕಾಲ ಕ್ಯಾಂಟೀನ್ ಬಂದ್ ಮಾಡಿ ಸ್ವಚ್ಛಗೊಳಿಸಲು ಮುಂದಾಗಿದ್ದಾರೆ. ಇದರಿಂದ ಸಾವಿರಾರು ರೂಪಾಯಿಗಳಷ್ಟು ದಿನಸಿ ಹಾಗೂ ಆಹಾರ ಪದಾರ್ಥ ನಷ್ಟವಾಗಿದೆ ಎಂದು ಹೇಳಲಾಗುತ್ತಿದೆ.

ಜಿಲ್ಲೆಯಲ್ಲಿ ಗೃಹ ಬಳಕೆಯ ಗ್ಯಾಸ್ ಸಿಲಿಂಡರ್‌ಗೆ ಕೊರತೆ ಇಲ್ಲ

ಚಾಮರಾಜನಗರ: ಜಿಲ್ಲೆಯಲ್ಲಿ ಗೃಹ ಬಳಕೆಯ ಗ್ಯಾಸ್ ಸಿಲಿಂಡರ್ ವಿತರಣೆಯಲ್ಲಿ ಯಾವುದೇ ಕೊರತೆ ಇಲ್ಲ. ಹಾಗಾಗಿ ಗ್ರಾಹಕರು ಸುಳ್ಳು ವದಂತಿಗಳಿಗೆ ಕಿವಿಗೊಡಬೇಡಿ ಎಂದು ನಗರದ ಮಹೇಶ್ ಗ್ಯಾಸ್ ಏಜೆನ್ಸಿ ಮಾಲೀಕ ಮಹೇಶ್‌ಕುದರ್ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ಯಾವುದೇ ತರದ ಅಡಚಣೆ, ವಿಳಂಬ ಆಗುತ್ತಿಲ್ಲ. ಯುದ್ಧದಿಂದ ಮೊದಲ ಎರಡು ದಿನ ಗೊಂದಲ ಶುರುವಾಯಿತು. ಅನಿಲ ಕಂಪನಿಗಳಿಂದ ಸಿಲಿಂಡರ್ ಪೂರೈಕೆ ಕಡಿಮೆ ಆಗಬಹುದು ಎಂಬ ತಪ್ಪು ಮಾಹಿತಿ ಗ್ರಾಹಕರಲ್ಲಿ ಬರಲು ಶುರುವಾಯಿತು. ಗ್ರಾಹಕರು ಹೆಚ್ಚಿನ ಬುಕ್ಕಿಂಗ್ ಶುರು ಮಾಡಿದರು. ಇದಕ್ಕಿಂತ ಮೊದಲು ಸಿಲಿಂಡರ್ ಬುಕ್ಕಿಂಗ್ 10 ದಿನಗಳ ಕಾಲಾವಕಾಶ ಇತ್ತು. ಈಗ ಅದನ್ನು 25 ದಿನಗಳಿಗೆ ವಿಸ್ತರಿಸಲಾಗಿದೆ. ನಗರ ದಲ್ಲಿ ಒಂದು ಸಿಲಿಂಡರ್ ಹೊಂದಿದ್ದರೆ 25 ದಿನ 2 ಸಿಲಿಂಡರ್ ಹೊಂದಿದ್ದರೆ 40 ದಿನ ಗ್ರಾಮಾಂತರ ಪ್ರದೇಶಗಳಿಗೆ 45 ದಿನ ಬುಕ್ಕಿಂಗ್‌ಗೆ ಕಾಲಾವಕಾಶ ನಿಗದಿ ಮಾಡಲಾಗಿದೆ.



ಸುದ್ದಿಗೋಷ್ಠಿಯಲ್ಲಿ ಮಹೇಶ್ ಕುದರ್ ಮಾತನಾಡಿದರು.

ಒಂದು, ಎರಡು ಸಿಲಿಂಡರ್ ಇಟ್ಟುಕೊಂಡಿರುವವರಿಗೆ ಸ್ವಲ್ಪ ವಿಳಂಬ ಆಗುತ್ತದೆ ಎಂದರು.

ಸ್ವಲ್ಪಮಟ್ಟಿಗೆ ಕಮರ್ಷಿಯಲ್ ಸಿಲಿಂಡರ್ ವಿಳಂಬ ಆಗುತ್ತಿದೆ. ಏಕೆಂದರೆ ಹೊರದೇಶದಲ್ಲಿ ಸಿಲಿಂಡರ್ ಬರುತ್ತಿದೆ. ಅದು ವಿಳಂಬವಾದರೆ ಗೃಹ ಬಳಕೆದಾರರಿಗೆ ತೊಂದರೆ ಆಗುತ್ತದೆ ಎಂಬ ಕಾರಣದಿಂದ ಕಮರ್ಷಿಯಲ್‌ಗೆ ಕೊಡುವುದನ್ನು ಸ್ವಲ್ಪ ಮಟ್ಟಿಗೆ ನಿಲ್ಲಿಸಲಾಗಿದೆ. ಮತ್ತೆ ಎರಡು ದಿನಗಳಿಂದ ಶುರು ಮಾಡಲಾಗಿದೆ. ಯಾವುದೇ ರೀತಿ ತೊಂದರೆಗಳಿರುವುದಿಲ್ಲ. ಜಿಲ್ಲೆಯಲ್ಲಿ 23 ಗ್ಯಾಸ್ ಸಿಲಿಂಡರ್ ವಿತರಕರು ಇದ್ದೇವೆ. 3.32.433 ಲಕ್ಷ ಗ್ರಾಹಕರು ಇದ್ದು ಎಲ್ಲರಿಗೂ ಬುಕ್ಕಿಂಗ್ ಆಗುತ್ತಿದ್ದು ಯಾವುದೇ ತರದ ತೊಂದರೆ ಇಲ್ಲ ಎಂದರು.

ಸೆಸ್ಕ್ ಎಂಡಿ ಮುನಿಗೋಪಾಲರಾಜು ಇಂದು ಸೇವೆಯಿಂದ ನಿವೃತ್ತಿ



ಮೈಸೂರು: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ (ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಂ. ಮುನಿಗೋಪಾಲರಾಜು 35 ವರ್ಷಗಳ ಸೇವೆ ನಂತರ ಇಂದು ನಿವೃತ್ತರಾಗುತ್ತಿದ್ದಾರೆ.

1991ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಕೆಇಬಿ)ಗೆ ಅಸಿಸ್ಟೆಂಟ್ ಇಂಜಿನಿಯರ್ (ಎಇ) ಆಗಿ ಮಂಗಳೂರಲ್ಲಿ ಸೇವೆ ಆರಂಭಿಸಿದ್ದರು. ನಂತರ ಮೈಸೂರು, ಹುಣಸೂರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಹಾಗೂ ಬೆಂಗಳೂರಲ್ಲಿ ಅಸಿಸ್ಟೆಂಟ್ ಎಗ್ಸಿಕ್ಯೂಟಿವ್ ಇಂಜಿನಿಯರ್, ಎಗ್ಸಿಕ್ಯೂಟಿವ್ ಇಂಜಿನಿಯರ್, ತಾಂತ್ರಿಕ ನಿರ್ದೇಶಕರು, ಅಂತಿಮವಾಗಿ ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗುತ್ತಿದ್ದಾರೆ.

ಸೇವಾವಧಿಯಲ್ಲಿ ಗ್ರಾಹಕರೊಂದಿಗೆ ಉತ್ತಮ ಒಡನಾಟ ಹೊಂದಿದ್ದ ಮುನಿಗೋಪಾಲರಾಜು, ಸಿಬ್ಬಂದಿ ವರ್ಗದಲ್ಲೂ ವಿಶೇಷ ಗೌರವ ಸಂಪಾದಿಸಿದ್ದರು. ಇವರ ಅವಧಿಯಲ್ಲಿ ಸ್ಥಳೀಯ ವಿದ್ಯುತ್ ವಲಯದಲ್ಲಿ ಗಮನಾರ್ಹ ಸುಧಾರಣೆ ತಂದಿದ್ದರು. ಭೂಗತ ಕೇಬಲ್ ಅಳವಡಿಕೆ ಯೋಜನೆ ಇವರ ಮೂಲಕ ಚಾಲನೆ ಪಡೆದಿದ್ದು, ಈಗ ಬಹುತೇಕ ಕಾಮಗಾರಿ ಮುಗಿದಿದೆ.

ಎಂಆರ್‌ಸಿ ಸದಸ್ಯರಾಗಿ ಗೀತಿಕಾ ಬಸಪ್ಪ ಸೇರಿ ಐವರ ಆಯ್ಕೆ



ಗೀತಿಕಾ ಬಸಪ್ಪ | ಡಾ.ಕೆ.ರವಿ | ನಾಣಯ್ಯ | ಸಲ್ಮಾನ್ | ಶಿವ ಸ್ವರೂಪ್

ಮೈಸೂರು,ಮಾ.30(ಪಿಎಂ)– ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ) ಸದಸ್ಯರಾಗಿ ಗೀತಿಕಾ ಬಸಪ್ಪ ಸೇರಿದಂತೆ ಐವರು ಆಯ್ಕೆಯಾಗಿದ್ದಾರೆ.

ಕ್ಲಬ್‌ನ ಖಾಲಿ ಇದ್ದ ಐದು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಒಟ್ಟು 9 ಮಂದಿ ಸ್ಪರ್ಧಿಸಿದ್ದರು. ಚುನಾವಣೆಯು ಸೋಮವಾರ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಕ್ಲಬ್ ಆವರಣದಲ್ಲಿ ನಡೆಯಿತು. ಗೀತಿಕಾ ಬಸಪ್ಪ (ಪಡೆದ ಮತಗಳು 157), ಡಾ.ಕೆ.ರವಿ (147), ಕಳೆಂಗಡ ಮಂದಣ್ಣ ನಾಣಯ್ಯ (133), ಮೊಹಮ್ಮದ್ ಸಲ್ಮಾನ್ (126) ಹಾಗೂ ಶಿವ ಸ್ವರೂಪ್ ಅರಸ್ (123) ಸದಸ್ಯರಾಗಿ ಆಯ್ಕೆಯಾದರು.

ಅಂತೆಯೇ ಕಣದಲ್ಲಿದ್ದ ಅಯ್ಯಪ್ಪ ಮಂಡೇಪಂಡ ಪೊನ್ನಪ್ಪ (110), ಡಾ.ಚೇತನ್ ರಾಜಣ್ಣ ಚಂದ್ರಕಾಂತ್ (87), ಜೇಡೆನ್ ಮಾರ್ಕ್ ಈಶ್ವರ್ (70) ಹಾಗೂ ಡಾ.ಕೆ.ಲಿಂಗರಾಜ್ (42) ಪರಾಭವಗೊಂಡರು. ಮತದಾನ ಪ್ರಕ್ರಿಯೆಯಲ್ಲಿ ಒಟ್ಟು 201 ಮತಪತ್ರಗಳು ಚಲಾವಣೆಗೊಂಡಿದ್ದು, ಈ ಪೈಕಿ 2 ಅಸಿಂಧುವಾದವು. ಒಟ್ಟು 199 ಮತಪತ್ರಗಳು ಕ್ರಮಬದ್ಧವಾಗಿದ್ದು, ಒಟ್ಟಾರೆ 995 ಮತಗಳು (199 ಮತದಾರರಿಂದ ತಲಾ ಐದು ಮತ ಚಲಾವಣೆ) ಪರಿಗಣಿತವಾದವು ಎಂದು ಮೈಸೂರು ರೇಸ್ ಕ್ಲಬ್‌ನ ಕಾರ್ಯದರ್ಶಿ ಮತ್ತು ಸಿಇಓ ಎನ್‌ಹೆಚ್ ಎಸ್ ಮಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಟ ಪ್ರಕಾಶ್ ರಾಜ್‌ಗೆ ಮಾತೃ ವಿಯೋಗ



ಹೈದರಾಬಾದ್: ಬಹುಭಾಷಾ ನಟ ಪ್ರಕಾಶ್ ರಾಜ್ ಅವರ ತಾಯಿ ಸುವರ್ಣಲತಾ ನಿಧನರಾಗಿದ್ದಾರೆ. 85 ವರ್ಷದ ಸುವರ್ಣಲತಾ ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದು ಇಂದು ಹೈದರಾಬಾದ್‌ನಲ್ಲಿ ಕೊನೆಯುಸಿರೆಳೆದಿದ್ದಾರೆ. ಗದಗ ಮೂಲದವರಾದ ತಾಯಿ ಸ್ವರ್ಣಲತಾ ಅವರು ತಮ್ಮ ತಾಯಿ ತೀರಿಕೊಂಡ ನಂತರ ಬೆಳಗಾವಿಯ ಅನಾಥಾಶ್ರಮದಲ್ಲಿ ಬೆಳೆದರು. ನರ್ಸಿಂಗ್ ಟ್ರೇನಿಂಗ್ ಮಾಡಿ ಬೆಂಗಳೂರಿಗೆ ಬಂದು ಜೀವನ ಕಟ್ಟಿಕೊಂಡರು. ಮಂಜುನಾಥ್ ರೈ ಎಂಬುವರ ಜೊತೆ ವಿವಾಹವಾಗಿದ್ದು ದಂಪತಿಗೆ ಮೂವರು ಮಕ್ಕಳು ಜನಿಸಿದರು. ಮೂವರ ಪೈಕಿ ಪ್ರಕಾಶ್ ರಾಜ್ ನಟನಾಗಿ ಗುರುತಿಸಿಕೊಂಡಿದ್ದಾರೆ.

ಸ್ವರ್ಣಲತಾ ಅವರು ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದವರಾಗಿದ್ದರೆ, ಪತಿ ಮಂಜುನಾಥ್ ರೈ ಹಿಂದೂ ಆಗಿದ್ದರು. ಈ ಭಿನ್ನ ಸಂಸ್ಕೃತಿಗಳ ನಡುವೆ ಪ್ರಕಾಶ್ ರಾಜ್ ಬೆಳೆದಿದ್ದರು. ಪ್ರಕಾಶ್ ರಾಜ್ ಕುಟುಂಬದ ಹಿರಿಯ ಮಗನಾಗಿದ್ದು, ಅವರ ಸಹೋದರ ಪ್ರಸಾದ್ ರಾಜ್ ಕೂಡ ಚಿತ್ರರಂಗದಲ್ಲಿ ಗುರುತಿಸಿಕೊಂಡಿದ್ದಾರೆ.

ಮೈಸೂರು ಮಿತ್ರ

47ನೇ ವಾರ್ಷಿಕೋತ್ಸವ ಕಥಾ ಸ್ಪರ್ಧೆ

ನಿಮ್ಮ, 'ಮೈಸೂರು ಮಿತ್ರ' ಪ್ರಾದೇಶಿಕ ದಿನ ಪತ್ರಿಕೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ 47ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ 16-04-2026 (ಗುರುವಾರ) ರಂದು ವರ್ಣರಂಜಿತ ಆಕರ್ಷಕ ವಿಶೇಷಾಂಕವನ್ನು ಹೊರತರಲಾಗುವುದು. ಇದರ ಅಂಗವಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಕಥಾ ಸ್ಪರ್ಧೆ ಏರ್ಪಡಿಸಲಾಗಿದೆ. 'ಮೈಸೂರು ಮಿತ್ರ' ಪ್ರಸರಣ ಹೊಂದಿರುವ ಐದು ಜಿಲ್ಲೆಗಳ (ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಮತ್ತು ಹಾಸನ) ಪ್ರತಿಭಾವಂತ ಕಥೆಗಾರರ ಪ್ರೋತ್ಸಾಹಿಸಿ, ಬೆಳಕಿಗೆ ತರುವುದೇ ಈ ಸ್ಪರ್ಧೆಯ ಮೂಲ ಉದ್ದೇಶ.

ಉತ್ತಮವಾದ ಐದು ಕಥೆಗಳಿಗೆ ನಗದು ಬಹುಮಾನ

- ಪ್ರಥಮ ಬಹುಮಾನ : ರೂ. 8,000
- ದ್ವಿತೀಯ ಬಹುಮಾನ : ರೂ. 6,000
- ತೃತೀಯ ಬಹುಮಾನ : ರೂ. 4,000
- ಪ್ರೋತ್ಸಾಹಕ ಬಹುಮಾನಗಳು (ಎರಡು) : ರೂ. 2,500

ಸ್ಪರ್ಧೆಯ ನಿಯಮಗಳು

- ಒಬ್ಬರು ಒಂದೇ ಕಥೆಯನ್ನು ಕಳುಹಿಸಬೇಕು.
- ಕಥೆಯನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ news@mysurumithra.com ಗೆ ಇ-ಮೇಲ್ ಮಾಡಬಹುದು. ಇಲ್ಲವೆ ಅಂಚೆ ಮೂಲಕವೂ ಕಳಿಸಬಹುದು. ಕಥೆ ಐದು ಪುಟಗಳನ್ನು (ಒಂದೇ ಮಗ್ಗಲು) ಮೀರದಂತಿರಬೇಕು. ಅನುವಾದ-ರೂಪಾಂತರಗಳನ್ನು ಪರಿಗಣಿಸುವುದಿಲ್ಲ.
- ಸ್ಪರ್ಧಿಗಳು ಕಥೆಯ ಶಿರೋನಾಮೆ, ತಮ್ಮ ಹೆಸರು-ವಿಳಾಸ, ಪಾಸ್‌ಪೋರ್ಟ್ ಸೈಜಿನ ಭಾವಚಿತ್ರ ಮತ್ತು ಕಿರು ಪರಿಚಯವನ್ನು ಪ್ರತ್ಯೇಕ ಹಾಳೆಯಲ್ಲಿ ಸ್ಫುಟವಾಗಿ ಬರೆದು ಕಥೆಯೊಡನೆ ಲಗತ್ತಿಸಬೇಕು.
- ಸ್ಪರ್ಧೆಗೆ ಕಳುಹಿಸಲಾಗುವ ಕಥೆ ಈಗಾಗಲೇ ಬೇರೆಲ್ಲೂ ಪ್ರಕಟವಾಗಿರಕೂಡದು.
- ತೀರ್ಪುಗಾರರ ಮಂಡಳಿಯ ತೀರ್ಮಾನವೇ ಅಂತಿಮವಾದುದು. ಪ್ರಥಮ ಬಹುಮಾನಿತ ಕಥೆಯನ್ನು ವಿಶೇಷಾಂಕದಲ್ಲಿಯೂ, ಇತರ ಬಹುಮಾನ ಪಡೆದ ಕಥೆಗಳನ್ನು ಯಥಾವಕಾಶ 'ವಾರದ ಮಿತ್ರ' ಸಾಪ್ತಾಹಿಕ ಪುರವಣಿಯಲ್ಲಿಯೂ ಪ್ರಕಟಿಸಲಾಗುವುದು.
- ಬಹುಮಾನಿತ ಕಥೆಗಳ ಸಂಪೂರ್ಣ ಸ್ವಾಮ್ಯ 'ಮೈಸೂರು ಮಿತ್ರ'ನಿಗೆ ಸೇರಿದ್ದು.
- ಅಂಚೆಯಲ್ಲಿ ಕಥೆಗಳು ಸೂಕ್ತ ಸಮಯಕ್ಕೆ ತಲುಪದಿದ್ದಲ್ಲಿ 'ಮೈಸೂರು ಮಿತ್ರ' ಜವಾಬ್ದಾರಿಯಲ್ಲ ಮತ್ತು ಕಥೆಗಳನ್ನು ಯಾವ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ. ಆದ್ದರಿಂದ ಸ್ಪರ್ಧಿಗಳು ಕಥೆಯ ಒಂದು ಪ್ರತಿಯನ್ನು ತಮ್ಮ ಬಳಿ ಇರಿಸಿಕೊಳ್ಳುವುದೊಳಿತು.
- ಈ ನಿಯಮಾವಳಿಯನ್ನು ಪಾಲಿಸದ ಕಥೆಗಳನ್ನು ತಿರಸ್ಕರಿಸಲಾಗುವುದು.
- ಯಾವುದೇ ರೀತಿ ಪ್ರಭಾವ ಬೀರುವುದನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.

ವಿ.ಸೂ.: 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ದಿನ ಪತ್ರಿಕೆಗಳ ಉದ್ಯೋಗಿಗಳು ಹಾಗೂ ಅವರ ಸಂಬಂಧಿಗಳು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.

ಕಥೆ ನಮ್ಮ ಕೈಸೇರಲು ಕೊನೆಯ ದಿನಾಂಕ 02-04-2026

ವಿಳಾಸ: ಸಂಪಾದಕರು, 'ಮೈಸೂರು ಮಿತ್ರ' ವಾರ್ಷಿಕ ವಿಶೇಷಾಂಕ ಇಂಡಸ್ಟ್ರಿಯಲ್ 'ಎ' ಲೇಔಟ್, ಬನ್ನಿಮಂಟಪ, ಮೈಸೂರು-570 015 ದೂರವಾಣಿ: 2496520, 2496521, 2496526, 2496527

ಸೂರ್ಯವಂಶಿ ಬ್ಯಾಟಿಂಗ್ 'ವೈಭವ'

ಸಿಎಸ್‌ಕೆ ವಿರುದ್ಧ ಗೆದ್ದು ಆರ್‌ಆರ್ ಶುಭಾರಂಭ

ಗುವಾಹಟಿ, ಮಾ.30– ಬೌಲರ್‌ಗಳ ಮಾರಕ ದಾಳಿ ಹಾಗೂ ವೈಭವ್ ಸೂರ್ಯವಂಶಿ ಅವರ ಸ್ಫೋಟಕ ಅರ್ಧಶತಕದ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ರಾಜಸ್ಥಾನ ರಾಯಲ್ಸ್ 8 ವಿಕೆಟ್‌ಗಳ ಭರ್ಜರಿ ಜಯಗಳಿಸುವ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಪಂದ್ಯದಲ್ಲಿ 15 ಎಸೆತಗಳಲ್ಲಿ ಭರ್ಜರಿ ಅರ್ಧಶತಕ ಸಿಡಿಸಿದ ವೈಭವ್ ಸೂರ್ಯವಂಶಿ ಮಾರ್ಚ್ 27ರಂದು ನಡೆದ 15ನೇ ಹುಟ್ಟುಹಬ್ಬವನ್ನು ಸ್ಮರಣೀಯವಾಗಿಸಿಕೊಂಡರು.

ಗುವಾಹಟಿಯ ಬಾರ್ಸಾಪರ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ 19.4 ಓವರ್‌ಗಳಲ್ಲಿ ಕೇವಲ 127 ರನ್‌ಗಳ ಸಾಧಾರಣ ಮೊತ್ತಕ್ಕೆ ಆಲೌಟ್ ಆಯಿತು. 128 ರನ್‌ಗಳ ಸುಲಭ ಗೆಲುವಿನ ಗುರಿ ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ 12.1 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ ಇನ್ನೂ 47 ಎಸೆತಗಳು ಬಾಕಿ ಉಳಿದಿರುವಂತೆ ಗುರಿ ತಲುಪಿ ಗೆಲುವಿನ ನಗೆ ಬೀರಿತು.

ಚೆನ್ನೈ ಸೂಪರ್ ಕಿಂಗ್ಸ್ ಬ್ಯಾಟಿಂಗ್ ವೇಳೆ ಪಿಚ್ ಬೌಲರ್‌ಗಳಿಗೆ ಸಹಕಾರಿಯಂತೆ ಕಂಡು ಬಂತು. ಋತುರಾಜ್ ಗಾಯಕ್ವಾಡ್ ತಂಡ ಪ್ರತಿ ರನ್‌ಗೂ ಪರದಾಡುತ್ತಿದ್ದಾಗ ರಾಜಸ್ಥಾನ ಸಹ ಇದೇ ಪರಿಸ್ಥಿತಿ ಎದುರಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಆಕ್ರಮಣಕಾರಿಯಾಗಿ ಬ್ಯಾಟಿಂಗ್ ಮಾಡಿದ ವೈಭವ್ ಸೂರ್ಯವಂಶಿ ಚೆನ್ನೈಗೆ ಯಾವುದೇ ಅವಕಾಶ ನೀಡಲಿಲ್ಲ. ಕಳೆದ ಐಪಿಎಲ್ ಸೀಸನ್‌ನಲ್ಲಿ ಶರವೇಗದ ಶತಕ ಬಾರಿಸಿದ್ದ ಬಾಲಕ ಈ ಬಾರಿ ಮೊದಲ ಪಂದ್ಯದಲ್ಲೇ ಮಿಂಚಿದರು.

ಆರ್‌ಆರ್ ಪರ ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಜೋಡಿ ಪವರ್ ಪ್ಲೇನ ಮೊದಲ 6 ಓವರ್‌ಗಳಲ್ಲಿ 74 ರನ್‌ಗಳನ್ನು ಕಲೆ ಹಾಕಿದರು. ಸೂರ್ಯವಂಶಿ ತಾನು ಎದುರಿಸಿದ ಮೊದಲ ಎಸೆತದಲ್ಲಿ ಬೌಂಡರಿ, ಎರಡನೇ ಎಸೆತದಲ್ಲಿ ಸಿಕ್ಸ್ ಸಿಡಿಸಿ ಅಬ್ಬರ ಆಟಕ್ಕೆ ಚಾಲನೆ ನೀಡಿ ಅವರು, 15 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದರು. ಆ ಮೂಲಕ ಐಪಿಎಲ್‌ನಲ್ಲಿ 3ನೇ ವೇಗದ ಅರ್ಧಶತಕ ಬಾರಿಸಿದ ಹೆಗ್ಗಳಿಕೆಗೆ ಪಾತ್ರವಾದರು. ಅಂತಿಮವಾಗಿ ಸೂರ್ಯವಂಶಿ 17 ಎಸೆತಗಳಲ್ಲಿ 4 ಬೌಂಡರಿ, 5 ಸಿಕ್ಸರ್ ಒಳಗೊಂಡ ಮಿಂಚಿನ 52 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಅನುಭವಿ ಯಶಸ್ವಿ ಜೈಸ್ವಾಲ್ (36 ಎಸೆತದಲ್ಲಿ 38 ರನ್) ಅವರು ಧ್ರುವ್ ಜ್ಯುರೆಲ್(9 ಎಸೆತದಲ್ಲಿ 18 ರನ್) ಮತ್ತು ರಿಯಾನ್ ಪರಾಗ್(11 ಎಸೆತದಲ್ಲಿ 14 ರನ್) ಅವರೊಂದಿಗೆ ಸಣ್ಣ ಸಣ್ಣ ಜೊತೆಯಾಟವಾಡಿ ತಂಡವನ್ನು ಗೆಲುವಿನ ದಡ ತಲುಪಿಸಿದರು. ಸಿಎಸ್‌ಕೆ ಪರ ಅನ್ಶುಲ್ ಕಾಂಬೋಜ್ 2 ವಿಕೆಟ್ ಪಡೆದರು.



ವೈಭವ್ ಸೂರ್ಯವಂಶಿ

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ ರಾಜಸ್ಥಾನ್ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದರು. ಅಲ್ಲದೇ ನಿಗದಿತವಾಗಿ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿ ಒಂದು ಹಂತದಲ್ಲಿ 94 ರನ್‌ಗಳಿಗೆ 9 ವಿಕೆಟ್ ಕಳೆದುಕೊಂಡಿದ್ದಾಗ ಸಿಎಸ್‌ಕೆ 100ರ ಗಡಿ ದಾಟುವುದೇ ಕಷ್ಟ ಎಂಬ ಪರಿಸ್ಥಿತಿ ನಿರ್ಮಾಣವಾಗಿತ್ತು ಆದರೆ ಆಲ್‌ರೌಂಡರ್ ಜೇಮಿ ಓವರ್ಟನ್ 36 ಎಸೆತಗಳಲ್ಲಿ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ 43 ರನ್ ಗಳಿಸಿದ್ದರಿಂದ ತಂಡ ಗೌರವಯುತ ಮೊತ್ತ ಕಲೆ ಹಾಕುವಂತಾಯಿತು. ಉಳಿದಂತೆ ಸರ್ಫರಾಜ್ ಖಾನ್ 17, ಕಾರ್ತಿಕ್ ಶರ್ಮಾ 18 ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು.

ರಾಜಸ್ಥಾನ್ ಪರ ಜೋಫ್ರಾ ಅರ್ಚರ್, ನಾಂಡ್ರೆ ಬರ್ಗರ್, ರವೀಂದ್ರ ಜಡೇಜಾ ತಲಾ 2, ಬ್ರಿಜೇಶ್ ಶರ್ಮಾ, ಸಂದೀಪ್ ಶರ್ಮಾ, ರವಿ ಬಿಷ್ಣೋಯ್ ತಲಾ ಒಂದೊಂದು ವಿಕೆಟ್ ಪಡೆದರು. ಚೆನ್ನೈ ತಂಡವನ್ನು ಆರಂಭದಲ್ಲೇ ಕಟ್ಟಿ ಹಾಕಿದ ನಾಂಡ್ರೆ ಬರ್ಗರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಎಂಎಂಸಿ-ಆರ್‌ಐನಿಂದ ಯಶಸ್ವಿ ರೋಬೋಟಿಕ್ ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆ

ಮೈಸೂರು,ಮಾ.30(ಪಿಎಂ)– ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು (ಎಂಎಂಸಿ-ಆರ್‌ಐ) ತನ್ನ ಮೊದಲ ರೋಬೋಟಿಕ್ ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸುವ ಮೂಲಕ ಮಹತ್ವದ ಮೈಲಿಗಲ್ಲು ಸಾಧಿಸಿದೆ.

ಇಂಡಿಯನ್ ಆರ್ತ್ರೋಪ್ಲಾಸ್ಟಿ ಅಸೋಸಿಯೇಷನ್ (ಎಂಓಹೆಚ್) ಹಾಗೂ ಕರ್ನಾಟಕ ಆರ್ತ್ರೋಪೆಡಿಕ್ ಅಸೋಸಿಯೇಷನ್ ಆಶ್ರಯದಲ್ಲಿ ಆಯೋಜಿಸಲಾದ ಎಂಎಂಸಿ-ಆರ್‌ಐನ ವಾರ್ಷಿಕ ಸಿಎಂಇ ಕಾರ್ಯಕ್ರಮದ ಭಾಗವಾಗಿ ಈ ಸಾಧನೆ ಸಾಧ್ಯವಾಗಿದೆ. ಮೈಸೂರಿನ ಪಿಕೆ ಟ್ರಾಮಾ ಕೇರ್ ಸೆಂಟರ್‌ನಲ್ಲಿ ರೋಬೋಟಿಕ್ ಟೋಟಲ್ ಮೊಣಕಾಲಿನ ಆರ್ತ್ರೋಪ್ಲಾಸ್ಟಿಯನ್ನು ಖ್ಯಾತ ಆರ್ತ್ರೋಪ್ಲಾಸ್ಟಿ ಶಸ್ತ್ರಚಿಕಿತ್ಸಕರಾದ ಡಾ.ನಾರಾಯಣ ಹುಲ್ಸೆ, ಡಾ.ಎಂ.ಕೆ.ದೀಪಕ್ ನಡೆಸಿದರು.

ಖಾಸಗಿ ಹೋಟೆಲ್‌ನಲ್ಲಿ ಸಿಎಂಇ ಮತ್ತು ಟೋಟಲ್ ಮೊಣಕಾಲಿನ ಆರ್ತ್ರೋಪ್ಲಾಸ್ಟಿ ಕುರಿತು ಪ್ರಾಯೋಗಿಕ ಕಾರ್ಯಾಗಾರ ಸೇರಿದಂತೆ ಶೈಕ್ಷಣಿಕ ಅಧಿವೇಶನಗಳನ್ನು ನಡೆಸಲಾಯಿತು. ಇದರಲ್ಲಿ ಎಂಎಂಸಿ-ಆರ್‌ಐ ಮತ್ತು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಮೈಸೂರು ಆರ್ಥೋಪೆಡಿಕ್ ಅಸೋಸಿಯೇಷನ್‌ನ ಸದಸ್ಯರು ಪಾಲ್ಗೊಂಡಿದ್ದರು.



ಪ್ರಾಯೋಗಿಕ ಕಾರ್ಯಾಗಾರವನ್ನು ಎಂಎಂಸಿ-ಆರ್‌ಐನ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ ಉದ್ಘಾಟಿಸಿದರು.

ಈ ಕಾರ್ಯಕ್ರಮವನ್ನು ಎಂಎಂಸಿ-ಆರ್‌ಐನ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ ಉದ್ಘಾಟಿಸಿದರು. ಡಾ.ಹೆಚ್.ಪಿ.ಶೋಭಾ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಕೆಓಎ ಅಧ್ಯಕ್ಷ ಡಾ.ಸಚ್ಚಿದಾನಂದ ರೈ, ಡಾ.ನಾರಾಯಣ ಹುಲ್ಸೆ ಡಾ.ಪಿ.ಕೆ. ರಾಜು, ಎಂಓಎ ಕಾರ್ಯದರ್ಶಿ ಡಾ.ಎಸ್. ಆರ್.ಆನಂದ್, ಡಾ.ಎನ್.ವಿ. ಪಾಟೀಲ್ ಮತ್ತು ಡಾ.ಕೆ.ಸಿ.ಪರಮೇಶ್ ಉಪಸ್ಥಿತರಿದ್ದರು. ನೇರ ಶಸ್ತ್ರಚಿಕಿತ್ಸೆಯ ಪ್ರದರ್ಶನವು ಕೀಲು ಬದಲಿ ಚಿಕಿತ್ಸೆಯಲ್ಲಿ ಸುಧಾರಿತ ರೋಬೋಟಿಕ್ ನೆರವಿನ ತಂತ್ರಗಳ ಬಗ್ಗೆ ಅಮೂಲ್ಯವಾದ ಒಳನೋಟಗಳನ್ನು ಒದಗಿಸಿತು ಎಂದು ಪ್ರಕಟಣೆ ತಿಳಿಸಿದೆ

ಮಹಿಳೆಯರನ್ನು ದೇವತೆಗೆ ಹೋಲಿಸಿದರೂ ಸಂಕಷ್ಟ ಮಾತ್ರ ತಪ್ಪಿಲ್ಲ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಉದ್ಯಮಿ ರಚನಾ ಮಹೇಶ್

ಮೈಸೂರು,ಮಾ.30(ಎಂಟಿವೈ)– ವೇದ-ಪುರಾಣಗಳಲ್ಲಿ ಮಹಿಳೆಯರನ್ನು ದೇವತೆಯರಿಗೆ ಹೋಲಿಸಿದರೂ ಇಂದಿಗೂ ಮಹಿಳೆಯರು ಎದುರಿಸುತ್ತಿರುವ ಸಂಕಷ್ಟ ತಪ್ಪಿಲ್ಲ ಎಂದು ಉದ್ಯಮಿ ರಚನಾ ಮಹೇಶ್ ವಿಷಾದಿಸಿದ್ದಾರೆ.

ಮೈಸೂರಿನ ಬನ್ನಿಮಂಟಪದಲ್ಲಿರುವ ಸಂತಫಿಲೋಮಿನಾ ಕಾಲೇಜಿನ ಒಳಾಂಗಣದಲ್ಲಿ ಓಡಿಪಿ ಸಂಸ್ಥೆಯ ಮಹಿಳೋದಯ ಮಹಿಳಾ ಒಕ್ಕೂಟ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಮಹಿಳೆಯರು ತಮಗೆ ಬೇಕಾದುದ್ದನ್ನು ಪಡೆದುಕೊಳ್ಳಲು ಹೋರಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮಹಿಳಾ ಸಶಕ್ತತೆ ಕಂಡು ಬರುತ್ತಿಲ್ಲ. ತನಗೆ ಬೇಕಾದುದನ್ನು ಪಡೆದುಕೊಂಡಾಗ ಮಾತ್ರ ನಿಜವಾದ ಮಹಿಳಾ ಸಬಲೀಕರಣ ಎನ್ನಬಹುದು. ಮಹಿಳೆಯರು ಆರ್ಥಿಕ ಸಮಸ್ಯೆಯನ್ನು ನಿಭಾಯಿಸಬೇಕು. ಯಾವುದೇ ಕಾರಣಕ್ಕೂ ಧೃತಿಗೆಡಬಾರದು. ಏನೇ ಸಮಸ್ಯೆ ಬಂದರೂ ದುಡುಕಿನ ನಿರ್ಧಾರ ತೆಗೆದುಕೊಳ್ಳಬಾರದು. ಎದುರಾಗುವ ಸಮಸ್ಯೆಗೆ ಪರಿಹಾರ ಹುಡುಕಿಕೊಳ್ಳುವ ಜಾಣ್ಮೆ ಇರಬೇಕು. ಸಮಾಜಕ್ಕೆ ಗಂಡು ಎಷ್ಟು ಮುಖ್ಯವೋ, ಹೆಣ್ಣು ಅಷ್ಟೇ ಮುಖ್ಯ. ಈ ಹಿನ್ನೆಲೆಯಲ್ಲಿ ಸಮಾನ ಅವಕಾಶ ಅಗತ್ಯವಾಗಿದೆ ಎಂದರು.



ಮೈಸೂರಿನ ಬನ್ನಿಮಂಟಪದಲ್ಲಿರುವ ಸಂತಫಿಲೋಮಿನಾ ಕಾಲೇಜಿನ ಒಳಾಂಗಣದಲ್ಲಿ ಓಡಿಪಿ ಸಂಸ್ಥೆಯ ಮಹಿಳೋದಯ ಮಹಿಳಾ ಒಕ್ಕೂಟದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಓಡಿಪಿ ಆಡಳಿತ ಮಂಡಳಿಯ ಸದಸ್ಯರಾದ ಕ್ರಿಸ್ಟಿನಾ ಕಾಂತರಾಜ್ ಮಾತನಾಡಿ, ಮಹಿಳೆ ಮತ್ತು ಹೆಣ್ಣು ಮಕ್ಕಳಿಗೆ ಮಾತ್ರ ಒಳ್ಳೆಯ ನಡತೆ ಬಗ್ಗೆ ಕಲಿಸಿಕೊಡದೆ, ಗಂಡು ಮಕ್ಕಳಿಗೂ ತಿಳುವಳಿಕೆ ನೀಡಬೇಕು. ಗಂಡು ಮಕ್ಕಳಿಗೂ ಗುಡ್, ಬ್ಯಾಡ್ ಟಚ್ ಬಗ್ಗೆ ತಿಳಿಸಿಕೊಡುವುದು ನಮ್ಮ ಕರ್ತವ್ಯ ಎಂದು ತಿಳಿಸಿದರು.

ಇದೇ ವೇಳೆ 13 ಜನ ಸಾಧಕ ಮಹಿಳೆಯರಿಗೆ ಪ್ರೇರಣಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರಿನ ಧರ್ಮಾಧ್ಯಕ್ಷರು ಹಾಗೂ ಓಡಿಪಿ ಸಂಸ್ಥೆಯ ಅಧ್ಯಕ್ಷರೂ ಆದ ವಂದನೀಯ ಡಾ.ಎಸ್. ಜೆ.ಫ್ರಾನ್ಸಿಸ್ ಸೆರಾವೊ ವಹಿಸಿದ್ದರು. ಸಹಾಯಕ ನಿರ್ದೇಶಕರಾದ ವಂ.ಸ್ವಾ. ಜಾನ್ ಫರ್ನಾಂಡೀಸ್, ರೆ.ಫಾ. ಟೆನ್ನಿ ಕುರಿಯನ್, ಆಡಳಿತ ಮಂಡಳಿ ಸದಸ್ಯ ಡಾನೂರ್ ಮುಬಾಷಿರ್, ಶ್ರೇಷ್ಠಗುರು ಫಾ.ಅಂತಪ್ಪ, ಸಿಸ್ಟರ್ ಪ್ರೀತಿ, ಮಹಿಳಾ ಒಕ್ಕೂಟದ ಅಧ್ಯಕ್ಷೆ ಸಾವಿತ್ರಿ, ಕಿರಿಯ ಪುಷ್ಪ ಸದಸ್ಯೆ ವಾಣಿ, ಸಂಘ ಮಿತ್ರ ಸಂಘಟನೆಯ ಮಹದೇವಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಸಂತಫಿಲೋಮಿನಾ ಕಾಲೇಜುವರೆಗೂ ಓಡಿಪಿ ಸಂಸ್ಥೆಯ ಕಾರ್ಯಕರ್ತರಿಂದ ಮಹಿಳಾ ದಿನಾಚರಣೆ ಅಂಗವಾಗಿ ದ್ವಿಚಕ್ರ ಹಾಗೂ ಆಟೋ ರಿಕ್ಷಾ ರ್‍ಯಾಲಿ ಆಯೋಜಿಸಲಾಗಿತ್ತು.

ಸದ್ಯ ಅಮೆರಿಕದೊಂದಿಗೆ ನೇರ ಮಾತುಕತೆ ಬಯಸುವುದಿಲ್ಲ

- ಮುಂಬೈನಲ್ಲಿನ ಇರಾನ್ ಕಾನ್ಸುಲೇಟ್ ಜನರಲ್ ಕಚೇರಿ ಸ್ಪಷ್ಟನೆ
- ಮಧ್ಯಸ್ಥಿಕೆ ವಹಿಸಲು ಬಯಸಿದ್ದ ಪಾಕಿಸ್ತಾನಕ್ಕೆ ತೀವ್ರ ಮುಖಭಂಗ

ಟೆಹ್ರಾನ್: ಪಾಕಿಸ್ತಾನ ನೇತೃತ್ವದ ಯಾವುದೇ ಸಂಧಾನ ಪ್ರಯತ್ನಗಳಲ್ಲಿ ಭಾಗವಹಿಸುವುದಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿದೆ.

ಪಾಕಿಸ್ತಾನವು ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸಲು, ನೇರ ಸಂಧಾನಕಾರ ಪಾತ್ರ ನಿರ್ವಹಿಸಲು ಸಿದ್ಧ ಎಂದು ಹೇಳಿಕೊಂಡ ನಂತರ, ಇರಾನ್ ಪಾಕಿಸ್ತಾನ ನೇತೃತ್ವದ ಅಂತಹ ಯಾವುದೇ ಸಂಧಾನ ಪ್ರಯತ್ನಗಳಲ್ಲಿ ಭಾಗವಹಿಸುವುದಿಲ್ಲ ಎಂದು ಪ್ರತಿಕ್ರಿಯಿಸಿದೆ. ಈ ಕುರಿತು ಮುಂಬೈನಲ್ಲಿರುವ ಇರಾನ್ ಕಾನ್ಸುಲೇಟ್ ಜನರಲ್ ಕಚೇರಿ ತನ್ನ ಅಧಿಕೃತ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಲಾಗಿದ್ದು, ನಾವು ಅಮೆರಿಕದೊಂದಿಗೆ ಯಾವುದೇ ನೇರ ಮಾತುಕತೆಯಲ್ಲಿ ತೊಡಗಿಸಿಕೊಳ್ಳುವುದಿಲ್ಲ. ಮಧ್ಯವರ್ತಿಗಳ ಮೂಲಕ ಅತಿಯಾದ ಮತ್ತು ಅಸಮಂಜಸ ಬೇಡಿಕೆಗಳನ್ನು ರವಾನಿಸಲಾಗಿದೆ. ಆದರೆ ಅಮೆರಿಕ ಮತ್ತು ಇರಾನ್ ನಡುವೆ ಮಧ್ಯಸ್ಥಿಕೆ ವಹಿಸುವ ಪಾಕಿಸ್ತಾನದ ಇಂಗಿತದ ಬಗ್ಗೆ ನಮಗೆ ಯಾವ ಆಸಕ್ತಿಯೂ ಇಲ್ಲ ಎಂದು ತಿಳಿಸಿದೆ.

ಅಮೆರಿಕದ ರಾಜತಾಂತ್ರಿಕ ನಿಲುವುಗಳು ಕ್ಷಣಕ್ಷಣಕ್ಕೂ ಬದಲಾಗುತ್ತವೆ. ಸಂಘರ್ಷ ಕೊನೆಗೊಳಿಸಲು ಮಧ್ಯಸ್ಥಿಕೆ ವಹಿಸಲು ಪಾಕಿಸ್ತಾನ ಮುಂದಾಗಿರುವುದು ಅದರ ಸ್ವಂತ ನಿರ್ಧಾರ. ನಾವು ಸದ್ಯಕ್ಕೆ ಯಾವುದೇ ಕಾರಣಕ್ಕೂ ಅಮೆರಿಕದೊಂದಿಗೆ ನೇರ ಮಾತುಕತೆಯಲ್ಲಿ ತೊಡಗಿಕೊಳ್ಳುವುದಿಲ್ಲ. ಹೀಗಾಗಿ ನಾವು ಯಾರ ಮಧ್ಯಸ್ಥಿಕೆಯನ್ನೂ ಬಯಸುವುದಿಲ್ಲ ಎಂದು ಹೇಳಿದೆ.

ಮಧ್ಯಸ್ಥಿಕೆ ವಿಚಾರವಾಗಿ ಭಾರತದಲ್ಲಿರುವ ಇರಾನ್ ರಾಯಭಾರ ಕಚೇರಿ ಪ್ರತಿಕ್ರಿಯೆ ನೀಡಿರುವುದು, ಪಾಕಿಸ್ತಾನದ ಮಧ್ಯಸ್ಥಿಕೆ ಪ್ರಯತ್ನಗಳಿಗೆ ಹಿನ್ನಡೆಯನ್ನುಂಟು ಮಾಡಿದೆ. ಇತ್ತ ಭಾರತದ ಹಾರ್ಮುಜ್ ರಾಜತಾಂತ್ರಿಕತೆಗೆ ಭಾರೀ ಯಶಸ್ಸು ಸಿಕ್ಕಿದ್ದು, ಭಾರತದ ಹಡಗುಗಳು ಯುದ್ಧಪೀಡಿತ ಜಲಸಂಧಿಯನ್ನು ದಾಟಿ ಸುರಕ್ಷಿತವಾಗಿ ಸ್ವದೇಶಕ್ಕೆ ಮರಳುತ್ತಿವೆ. ಪಾಕಿಸ್ತಾನವು ಅಮೆರಿಕ ಮತ್ತು ಇರಾನ್ ನಡುವೆ ಮಧ್ಯಸ್ಥಿಕೆ ವಹಿಸುವ ಸಾಧ್ಯತೆ ಕುರಿತು ಪ್ರತಿಕ್ರಿಯಿಸಿದ್ದ ಭಾರತದ ವಿದೇಶಾಂಗ ಸಚಿವ ಡಾ.ಎಸ್. ಜೈಶಂಕರ್, ಬ್ರೋಕರ್ ಕೆಲಸ ಮಾಡಲು ಭಾರತ ಪಾಕಿಸ್ತಾನವಲ್ಲ ಎಂದು ಹೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ಪಾಕಿಸ್ತಾನ ಮಧ್ಯಸ್ಥಿಕೆಗೆ ಮುಂದಾಗಿರುವುದು ಭಾರತಕ್ಕೆ ತೀವ್ರ ಹಿನ್ನಡೆ. ಪ್ರಧಾನಿ ಮೋದಿ ಅವರ ರಾಜತಾಂತ್ರಿಕ ವೈಫಲ್ಯಗಳಿಂದಾಗಿ ಅಸ್ಥಿರ ದೇಶ ಮಧ್ಯವರ್ತಿ ದೇಶವಾಗಲು ಮುಂದಾಗಿದೆ ಎಂದು ಟೀಕಿಸಿದ್ದರು.

ಹುಣಸೂರಲ್ಲಿ 12 ಕೋಟಿ ಮೌಲ್ಯದ ಸಿಂಥೆಟಿಕ್ಸ್ ಡ್ರಗ್ಸ್ ಪತ್ತೆ ಪ್ರಕರಣ

ಉಳಿದ ಆರೋಪಿಗಳ ಬಂಧನಕ್ಕೆ ಮುಂಬೈನಲ್ಲಿ ಹುಣಸೂರು ಪೊಲೀಸರ ಕಾರ್ಯಾಚರಣೆ

ಮೈಸೂರು, ಮಾ.30 (ಬಿಎಲ್‌ಯು)– 12 ಕೋಟಿ ಮೌಲ್ಯದ ಸಿಂಥೆಟಿಕ್ಸ್ ಡ್ರಗ್ಸ್ ಪತ್ತೆಯಾದ ಹುಣಸೂರಿನ ಮಾದಕ ವಸ್ತು ತಯಾರಿಕಾ, ಮಾರಾಟ, ಸಾಗಾಟ ಜಾಲವನ್ನು ಪತ್ತೆ ಮಾಡಲು ಹುಣಸೂರಿನ ಐವರು ಪೊಲೀಸರ ತಂಡ ಮುಂಬೈಗೆ ತೆರಳಿದೆ.

ಈ ಡ್ರಗ್ಸ್ ಜಾಲದಲ್ಲಿ ಮೈಸೂರು ಹಾಗೂ ಹುಣಸೂರಿನ ಆರೋಪಿ ಈಗಾಗಲೇ ಬಂಧನವಾಗಿದ್ದರೆ, ಉಳಿದ ಮೂವರು ದಾಳಿ ವೇಳೆ ತಪ್ಪಿಸಿಕೊಂಡಿದ್ದಾರೆ.

ಪರಾರಿಯಾಗಿರುವ ಮೂವರಲ್ಲಿ ಒಬ್ಬ ಮಹಾರಾಷ್ಟ್ರದವನಾಗಿದ್ದು, ಉಳಿದ ಇಬ್ಬರು ಕರ್ನಾಟಕದವರಾಗಿದ್ದಾರೆ. ಇಡೀ ಡ್ರಗ್ಸ್ ಪ್ರಕರಣಕ್ಕೆ ಮುಂಬೈ ಲಿಂಕ್ ಇರುವ ಹಿನ್ನೆಲೆಯಲ್ಲಿ ಮತ್ತಷ್ಟು ಆರೋಪಿಗಳು ಇದರಲ್ಲಿ ಭಾಗಿಯಾಗಿರುವ ಸುಳಿವು ದೊರೆತಿದೆ ಮುಂಬೈ, ಮೈಸೂರು, ಹುಣಸೂರು ಹಾಗೂ ಕರ್ನಾಟಕದ ಇತರೆ ಆರೋಪಿಗಳು ಸೇರಿಕೊಂಡು ಡ್ರಗ್ಸ್, ತಯಾರಿಸಿ, ಮಾರಾಟ ಮಾಡುತ್ತಿರುವುದು ಪೊಲೀಸರ ತನಿಖೆಯಿಂದ ಬಯಲಾಗಿದೆ. ಈ ಹಿನ್ನೆಲೆಯಲ್ಲಿ ಡ್ರಗ್ಸ್ ಜಾಲವನ್ನು ಮಟ್ಟ ಹಾಕಲು ಪಣ ತೊಟ್ಟಿರುವ ಪೊಲೀಸರು ಇದರಲ್ಲಿ ಭಾಗಿಯಾಗಿರುವ ಎಲ್ಲರಿಗೂ ಕೋಳ ತೊಡಿಸಲು ವ್ಯವಸ್ಥಿತ ಕಾರ್ಯತಂತ್ರ ರೂಪಿಸಿದ್ದಾರೆ. ಮುಂಬೈನಲ್ಲಿ ಇತರೆ ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಸಿದ್ದಾರೆ. ಅಲ್ಲಿನ ಆರೋಪಿಗಳ ಪತ್ತೆಗೆ ಹುಣಸೂರು ಪೊಲೀಸರು ಮುಂಬೈ ಪೊಲೀಸರ ನೆರವು ಕೇಳಿದ್ದಾರೆ. ಡ್ರಗ್ಸ್ ಮಾರಾಟ ಹಾಗೂ ಸಾಗಟಕ್ಕೆ ಕಡಿವಾಣ ಹಾಕುವುದರ ಜೊತೆಗೆ ಡ್ರಗ್ಸ್ ತಯಾರಿಕೆಯ ಮೂಲವನ್ನೇ ನಾಶ ಮಾಡಲು ಪೊಲೀಸರು ಕಾರ್ಯೋನ್ಮುಖರಾಗಿದ್ದಾರೆ.

6 ಲಕ್ಷ ಲಂಚ ಸ್ವೀಕಾರ ವೇಳೆ ಲೋಕಾಯುಕ್ತ ಬಲೆಗೆ ಬಿದ್ದ ವಾಣಿಜ್ಯ ತೆರಿಗೆ ಉಪ ಆಯುಕ್ತ!

ಹುಬ್ಬಳ್ಳಿ: ಆರು ಲಕ್ಷ ಲಂಚ ಸ್ವೀಕರಿಸುತ್ತಿದ್ದಾಗ ವಾಣಿಜ್ಯ ತೆರಿಗೆ ಉಪ ಆಯುಕ್ತ ಭರತ್ ಕುಮಾರ್ ಹೆಗ್ಡೆ ರೆಡ್ ಹ್ಯಾಂಡ್ ಆಗಿ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ ಅಂಕೋಲಾ ಮೂಲದ ಉದ್ಯಮಿ ವಿಶ್ವಜಿತ್ ನಾಯಕ್ ಅವರಿಂದ ಹಣ ಪಡೆಯುತ್ತಿದ್ದಾಗ 48 ವರ್ಷದ ಹೆಗ್ಡೆ ಸಿಕ್ಕಿಬಿದ್ದಿದ್ದಾರೆ ಎಂದು ಬೆಂಗಳೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಶಿವ ಪ್ರಕಾಶ್ ದೇವರಾಜ್ ತಿಳಿಸಿದ್ದಾರೆ.

ವಿಶ್ವಜಿತ್ ನಾಯಕ್ 2019ರಲ್ಲಿ ಎಂಟು ಟಿಪ್ಪರ್ ಟ್ರಕ್‌ಗಳನ್ನು ಖರೀದಿಸಿದ್ದರು. ಅಲ್ಲದೆ ಸುಮಾರು 60 ಲಕ್ಷ ರೂ.ಗಳ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗೆ ಅರ್ಹರಾಗಿದ್ದರು. ಅದರಲ್ಲಿ ಅವರು 34 ಲಕ್ಷ ರೂ.ಗಳನ್ನು ಕ್ಲೇಮ್ ಮಾಡಿದ್ದರು. ವಾಣಿಜ್ಯ ತೆರಿಗೆ ಇಲಾಖೆಯು ಅಕ್ರಮವಾಗಿ ಐಟಿಸಿ ಹಕ್ಕು ಸಾಧಿಸಲಾಗಿದೆ ಎಂದು ಆರೋಪಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿತ್ತು. ಅಲ್ಲದೆ ನಾಯಕ್ ಅವರನ್ನು ನಾಲ್ಕು ಬಾರಿ ವಿಚಾರಣೆಗೂ ಕರೆಸಿತ್ತು.

ಅಂತಿಮವಾಗಿ ಪ್ರಕರಣವನ್ನು ಮುಕ್ತಾಯಗೊಳಿಸಲು 10 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಕೊನೆಗೆ 6 ಲಕ್ಷ ರೂಪಾಯಿಗೆ ಒಪ್ಪಿಕೊಂಡು ಲಂಚ ಪಡೆಯುವಾಗ ಲೋಕಾಯುಕ್ತರು ವಶಕ್ಕೆ ಪಡೆದಿದ್ದಾರೆ.

ಶೀಘ್ರ ಒಪ್ಪಂದಕ್ಕೆ ಬರದಿದ್ದರೆ ಇರಾನ್ ವಿದ್ಯುತ್ ಸ್ಥಾವರ ಧ್ವಂಸ

ಡೊನಾಲ್ಡ್ ಟ್ರಂಪ್ ಅಂತಿಮ ಗಡುವು

ವಾಷಿಂಗ್ಟನ್: ಪೂರ್ವ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷ ತಿಂಗಳಾದರೂ ಕಡಿಮೆಯಾಗುವ ಯಾವುದೇ ಮುನ್ಸೂಚನೆ ದೊರೆಯುತ್ತಿಲ್ಲ.. ಇದರ ನಡುವೆಯೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಗೆ ಒಪ್ಪಂದಕ್ಕೆ ಬರಲು ಅಂತಿಮ ಎಚ್ಚರಿಕೆ ನೀಡಿದ್ದಾರೆ.

ಟೆಹ್ರಾನ್ ಮತ್ತು ವಾಷಿಂಗ್ಟನ್ ನಡುವೆ ಶೀಘ್ರದಲ್ಲೇ ಒಪ್ಪಂದ ಮಾಡಿಕೊಳ್ಳದಿದ್ದರೆ ಇರಾನ್‌ನ ವಿದ್ಯುತ್ ಉತ್ಪಾದನಾ ಸ್ಥಾವರಗಳು ಮತ್ತು ಖಾರ್ಗ್ ದ್ವೀಪವನ್ನು ಸ್ಫೋಟಿಸಿ ಸಂಪೂರ್ಣವಾಗಿ ನಾಶಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಬೆದರಿಕೆ ಹಾಕಿದ್ದಾರೆ.

ಟ್ರಂಪ್ ತಮ್ಮ ಸಾಮಾಜಿಕ ಮಾಧ್ಯಮ ವೇದಿಕೆ ಟ್ರೂತ್ ಸೋಶಿಯಲ್ ಮೂಲಕ ಇರಾನ್‌ಗೆ ಈ ಎಚ್ಚರಿಕೆ ನೀಡಿದ್ದು, ಇರಾನ್ ಹಾರ್ಮುಜ್ ಜಲಸಂಧಿಯನ್ನು ತಕ್ಷಣ ತೆರೆಯದಿದ್ದರೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಇರಾನ್‌ನಲ್ಲಿ ನಮ್ಮ ಮಿಲಿಟರಿ ಕಾರ್ಯಾಚರಣೆಗಳನ್ನು ಕೊನೆಗೊಳಿಸಲು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ಹೊಸ ಮತ್ತು ಹೆಚ್ಚು ಸಮಂಜಸವಾದ ಆಡಳಿತದೊಂದಿಗೆ ಗಂಭೀರ ಚರ್ಚೆಯಲ್ಲಿದೆ. ಉತ್ತಮ ಪ್ರಗತಿ ಸಾಧಿಸಲಾಗಿದೆ. ಆದರೆ, ಯಾವುದೇ ಕಾರಣಕ್ಕಾಗಿ ಶೀಘ್ರದಲ್ಲೇ ಒಪ್ಪಂದವನ್ನು ತಲುಪದಿದ್ದರೆ, ಅದು ಬಹುಶಃ ಆಗಬಹುದು.

ಹಾರ್ಮುಜ್ ಜಲಸಂಧಿಯನ್ನು ತಕ್ಷಣವೇ ವ್ಯವಹಾರಕ್ಕೆ ಮುಕ್ತಗೊಳಿಸದಿದ್ದರೆ ನಾವು ಇರಾನ್‌ನಲ್ಲಿ ನಮ್ಮ ಪ್ರೀತಿಯ ವಾಸ್ತವ್ಯವನ್ನು ಅವರ ಎಲ್ಲಾ ವಿದ್ಯುತ್ ಉತ್ಪಾದನಾ ಸ್ಥಾವರಗಳು, ತೈಲ ಬಾವಿಗಳು ಮತ್ತು ಖಾರ್ಗ್ ದ್ವೀಪವನ್ನು (ಮತ್ತು ಬಹುಶಃ ಎಲ್ಲಾ ಉಪ್ಪು ನೀರಿನ ನಿರೋಧಕ ಸ್ಥಾವರಗಳು!) ಸ್ಫೋಟಿಸಿ ಸಂಪೂರ್ಣವಾಗಿ ನಾಶಮಾಡುವ ಮೂಲಕ ಮುಕ್ತಾಯ ಗೊಳಿಸುತ್ತೇವೆ. ಇವುಗಳನ್ನು ನಾವು ಇನ್ನೂ ಉದ್ದೇಶಪೂರ್ವಕವಾಗಿ ಮುಟ್ಟಿಲ್ಲ ಎಂದು ಟ್ರಂಪ್ ಬರೆದುಕೊಂಡಿದ್ದಾರೆ.

ಅಂತೆಯೇ, ನಮ್ಮ ಅನೇಕ ಸೈನಿಕರು ಮತ್ತು ಇತರರನ್ನು, ಹಳೆಯ ಆಡಳಿತದ 47 ವರ್ಷಗಳ ಭಯೋತ್ಪಾದನಾ ಆಳ್ವಿಕೆಯಲ್ಲಿ ಇರಾನ್ ಕೊಂದಿದ್ದಕ್ಕಾಗಿ ಪ್ರತೀಕಾರವಾಗಿ ಇದು ನಡೆಯಲಿದೆ ಎಂದು ಅವರು ಹೇಳಿದರು. ಈ ವಿಷಯದ ಬಗ್ಗೆ ನಿಮ್ಮ ಗಮನಕ್ಕೆ ಧನ್ಯವಾದಗಳು ಎಂದು ಟ್ರಂಪ್ ಪೋಸ್ಟ್ ಮಾಡಿದ್ದಾರೆ.

ಸೇನಾ ಸಂಘರ್ಷ ಮುಂದುವರಿಕೆ: ಏತನ್ಮಧ್ಯೆ ಅಮೆರಿಕ ಮತ್ತು ಇಸ್ರೇಲ್ ಸೋಮವಾರ ಇರಾನ್ ಮೇಲೆ ತಮ್ಮ ದಾಳಿಯನ್ನು ಮುಂದುವರೆಸಿದವು.

ಇದಕ್ಕೆ ಪ್ರತಿಕ್ರಿಯೆಯಾಗಿ, ಗಲ್ಫ್ ಅರಬ್ ರಾಷ್ಟ್ರಗಳ ವಿರುದ್ಧದ ಅಭಿಯಾನದ ಭಾಗವಾಗಿ ಇರಾನ್ ಕುವೈತ್‌ನಲ್ಲಿರುವ ಪ್ರಮುಖ ನೀರು ಮತ್ತು ವಿದ್ಯುತ್ ಸ್ಥಾವರವನ್ನು ಹೊಡೆದುರುಳಿಸಿತು ಮತ್ತು ಉತ್ತರ ಇಸ್ರೇಲ್‌ನಲ್ಲಿರುವ ತೈಲ ಸಂಸ್ಕರಣಾಗಾರವನ್ನು ಸಹ ಹೊಡೆದುರುಳಿಸಿತು.

ಗೌರವದ ಸಂಕೇತವಾಗಿ ಸೋಮವಾರದಿಂದ ಹಾರ್ಮುಜ್ ಜಲಸಂಧಿಯ ಮೂಲಕ 20 ತೈಲ ಟ್ಯಾಂಕರ್‌ಗಳನ್ನು ಅನುಮತಿಸಲು ಇರಾನ್ ಒಪ್ಪಿಕೊಂಡಿದೆ ಎಂದು ಅಧ್ಯಕ್ಷ ಟ್ರಂಪ್ ಹೇಳಿದರು.

ಮೈಸೂರು ಮಿತ್ರ

ಮಂಗಳವಾರ 31 ಮಾರ್ಚ್ 2026

ವಿಜೃಂಭಣೆಯ ಶ್ರೀಅಗಸ್ತ್ಯೇಶ್ವರಸ್ವಾಮಿ ರಥೋತ್ಸವ

ತಿ.ನರಸೀಪುರ, ಮಾ.30– ತ್ರಿವೇಣಿ ಸಂಗಮ ಖ್ಯಾತಿಯ ಹಳೇ ತಿರುಮಕೂಡಲಿನ ಶ್ರೀಪೂರ್ಣ ಮಂಗಳ ಕಾಮಾಕ್ಷಾಂಭ ಸಮೇತ ಶ್ರೀಅಗಸ್ತ್ಯೇಶ್ವರಸ್ವಾಮಿ ಮಹಾ ರಥೋತ್ಸವ ನೂರಾರು ಭಕ್ತರ ಹರ್ಷೋದ್ಗಾರದ ನಡುವೆ ಸೋಮವಾರ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವ ಅಂಗವಾಗಿ ಮುಂಜಾನೆಯಿಂದಲೇ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆದವು. ಶ್ರೀಅಗಸ್ತ್ಯೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಅಲಂಕೃತಗೊಂಡಿದ್ದ ರಥದಲ್ಲಿ ಉತ್ಸವಮೂರ್ತಿ ಪ್ರತಿಷ್ಠಾಪಿಸಲಾಯಿತು. ಬಳಿಕ ಮಧ್ಯಾಹ್ನ 12.30ಕ್ಕೆ ಗ್ರಾಮಲೆಕ್ಕಿಗ ವಿಕಾಸ್ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಈ ವೇಳೆ ವಿವಿಧೆಡೆಗಳಿಂದ ಆಗಮಿಸಿದ್ದ ಭಕ್ತರು ಭಕ್ತಿ ಭಾವದಿಂದ ರಥ ಎಳೆದರು. ದೇವಾಲಯದಿಂದ ಆರಂಭಗೊಂಡ ರಥೋತ್ಸವ ತಿರುಮಕೂಡಲಿನ ಮುಖ್ಯ ಬೀದಿಯಲ್ಲಿ ಸಂಚರಿಸಿ ಯಾವುದೇ ಅಡೆತಡೆ ಇಲ್ಲದೇ ಸ್ವಸ್ಥಾನ ಸೇರಿತು. ಮುಖ್ಯರಥದೊಂದಿಗೆ ಚಂದ್ರಮೌಳೇಶ್ವರ, ಪಾರ್ವತಮ್ಮ, ವಿಘ್ನೇಶ್ವರ ಹಾಗೂ ಸುಬ್ರಹ್ಮಣ್ಯಸ್ವಾಮಿಯ ಎರಡು ಚಿಕ್ಕ ರಥಗಳು ಸಂಚರಿಸಿದವು. ಇದೇ ವೇಳೆ ಭಕ್ತರು ರಥಕ್ಕೆ ಪೂಜೆ ಸಲ್ಲಿಸುವ ಜೊತೆಗೆ ಹಣ್ಣು–ಜವನ ಎಸೆದು ಭಕ್ತಿ ಭಾವ ಮೆರೆದರು. ಭಕ್ತರಿಗೆ ಪ್ರಸಾದ ಸೇರಿದಂತೆ ನೀರು, ಕೋಸಂಬರಿ, ಮಜ್ಜಿಗೆ, ಪಾನಕ ವಿತರಿಸಲಾಯಿತು. ಮಾಜಿ ಸಚಿವ ಎಸ್.ಎ.ರಾಮ ದಾಸ್ ರಥೋತ್ಸವದಲ್ಲಿ ಭಾಗವಹಿಸಿ ದೇವರ ದರ್ಶನ ಪಡೆದರು.

ಗುರುವಾರ ಉತ್ಸವಕ್ಕೆ ತೆರೆ: ರಥೋತ್ಸವ ಅಂಗವಾಗಿ ಮಾ.23 ರಿಂದಲೇ ದೇವಾಲಯದಲ್ಲಿ ಅಂಕುರಾರ್ಪಣೆ, ಯಾಗಶಾಲಾ ಪ್ರವೇಶದೊಂದಿಗೆ ಧಾರ್ಮಿಕ ಪೂಜಾ ಕಾರ್ಯಗಳನ್ನು ವಿಧ್ಯುಕ್ತವಾಗಿ ಆರಂಭಿಸಲಾಯಿತು. ಮಾ.24ರಂದು ಧ್ವಜಾರೋಹಣ, ಪೂರ್ವಕ ಭೇರಿತಾಡನ, ಮಾ.25 ರಂದು ಚಂದ್ರಮಂಡಲಾರೋಹಣ, ಮಾ.26ರಂದು ಅನಂತ ಪೀಠಾರೋಹಣ, ಮಾ.27 ರಂದು ಪುಷ್ಪಮಂಟಪಾರೋಹಣ, ಮಾ.28ರಂದು ವೃಷಭಾರೋಹಣ ಹಾಗೂ ಮಾ.29 ರಂದು ವಸಂತೋತ್ಸವ ಪೂರ್ವಕ ಗಜಾರೋಹಣ ಜರುಗಿದವು. ಸೋಮವಾರ ಮಹಾ ರಥೋತ್ಸವದ ಬಳಿಕ ಹಂಸಾರೋಹಣ, ರಾತ್ರಿ ತೇರಡಿ ಮಂಟಪೋತ್ಸವ ಸಂಗೀತ, ಮಾ.31ರಂದು ಶಯನೋತ್ಸವ, ಮೃಗ ಯಾತ್ರಾ ಪೂರ್ವಕ ಆಶ್ವಾರೋಹಣ, ಏ.1ರಂದು ದೇವಿ ಪ್ರಣಯ ಕಲಹ ಪೂರ್ವಕ ಅವಕೃತೋತ್ಸವ ಸಂಧಾನ ಮಿನೋತ್ತರ ತೀರ್ಥಸ್ಥಾನ ನರಾಂ



ಶ್ರೀಅಗಸ್ತ್ಯೇಶ್ವರಸ್ವಾಮಿ ಮಹಾರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಧೋಳಿಕ ಪೂರ್ವಕ ಉಡುಷೋತ್ಸವ, ತೆಪ್ಪೋತ್ಸವ, ಧ್ವಜಾರೋಹಣ ಹಾಗೂ ಏ.2ರಂದು ಮಹಾಭಿಷೇಕ, ಪೂರ್ವಕ ನಂದಾರೋಹಣ ಕೈಲಾಸ ವಾಹನದೊಂದಿಗೆ ಜಾತ್ರೋತ್ಸವದ ಧಾರ್ಮಿಕ ಉತ್ಸವಗಳಿಗೆ ತೆರೆ ಬೀಳಲಿದೆ.

ದೇವಸ್ಥಾನದ ಪಾರುಪತ್ತೇದಾರ್ ಚೇತನ್, ಗುಂಜಾನರಸಿಂಹ ಸ್ವಾಮಿ ದೇವಸ್ಥಾನದ ಪಾರುಪತ್ತೇದಾರ್ ದೀಪು, ಆಗಮಿಕರಾದ ಗಣೇಶ್ ದೀಕ್ಷಿತ್, ಒಕ್ಕಲಿಗ ಮುಖಂಡ ಪಿ.ಸ್ವಾಮಿನಾಥನ್, ನೀಲಕಂಠ, ಸಂದೇಶ್, ಈಶ್ವರ್ ಗೌಡ, ಕಸಬಾ ಪಿಎಸಿಎಸ್ ಉಪಾಧ್ಯಕ್ಷ ಟಿ.ಸಿ.ಫಣೀಶ್ ಕುಮಾರ್, ಕೃಷಿಕ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಶಿವಮಲ್ಲಪ್ಪ, ಪುರಸಭೆ ಮಾಜಿ ಸದಸ್ಯ ಆರ್.ಚೇತನ್, ವೆಂಕಟೇಶ್, ಮಹದೇವಶೆಟ್ಟಿ, ಒಕ್ಕಲಿಗ ಜನಾಂಗದ ಯಜಮಾನ ಚಂದ್ರೇಗೌಡ, ನಾಯಕ ಜನಾಂಗದ ಯಜಮಾನ ನಟರಾಜು, ಮಂಜುನಾಥ್, ಮುಕುಂದ, ಮಣಿಕಂಠ, ಸುನೀಲ್ ಇತರರಿದ್ದರು.

ನಂ.ಗೂಡಲ್ಲಿ ಗರಳಪುರಿ ಉತ್ಸವಕ್ಕೆ ವರ್ಣರಂಜಿತ ತೆರೆ

● ಸಮಾರೋಪಕ್ಕೆ ಚಿತ್ರತಾರೆಯರ ಮೆರಗು ● ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ

ನಂಜನಗೂಡು, ಮಾ.30– ಶ್ರೀಕಂಠೇಶ್ವರಸ್ವಾಮಿಯವರ ದೊಡ್ಡ ಜಾತ್ರಾ ಮಹೋತ್ಸವದ ಅಂಗವಾಗಿ ಕಳೆದ 9 ದಿನಗಳಿಂದ ನಡೆದ ಗರಳಪುರಿ ಉತ್ಸವಕ್ಕೆ ಭಾನುವಾರ ರಾತ್ರಿ ಚಲನಚಿತ್ರ ನಟರ ತಾರಾ ಮೆರಗಿನೊಂದಿಗೆ ವರ್ಣ ರಂಜಿತ ತೆರೆ ಬಿತ್ತು. ಚಿತ್ರ ನಟ ವಿನಯ್ ರಾಜಕುಮಾರ್, ನಟಿ ಸಪ್ತಮಿ ಗೌಡ, ಅಮೃತ ಅಯ್ಯಂಗಾರ್ ಸಮಾರೋಪ ಸಮಾರಂಭದಲ್ಲಿ ಭಾಗಿಯಾಗಿದ್ದರು.

ವಿನಯ್ ರಾಜಕುಮಾರ್ ಮಾತನಾಡಿ, ನಮ್ಮ ತಾತ ಡಾ.ರಾಜ್ ಕುಮಾರ್ ಮತ್ತು ಅಜ್ಜಿ ಪಾರ್ವತಮ್ಮ ರಾಜಕುಮಾರ್ ಅವರ ಮದುವೆ ನಂಜನಗೂಡಿನಲ್ಲೇ ನಡೆದಿತ್ತು. ನನ್ನ ಚಿಕ್ಕಪ್ಪ ಪುನೀತ್ ರಾಜಕುಮಾರ್ ಅವರ ದೊಡ್ಮನೆ ಹುಡುಗ ಚಿತ್ರವು ಇಲ್ಲೇ ಚಿತ್ರೀಕರಣವಾಗಿತ್ತು. ನಂಜನಗೂಡಿನ ಶ್ರೀಕಂಠೇಶ್ವರ ನಮ್ಮ ಆರಾಧ್ಯ ದೈವ. ಆದ್ದರಿಂದ ನಂಜನಗೂಡಿಗೂ ರಾಜಕುಮಾರ್ ಕುಟುಂಬಕ್ಕೂ ಅವಿನಾಭಾವ ಸಂಬಂಧವಿದೆ. ಶಾಸಕ ದರ್ಶನ್ ಧ್ರುವನಾರಾಯಣ್ ಶ್ರೀಕಂಠೇಶ್ವರಸ್ವಾಮಿಯವರ ದೊಡ್ಡ ಜಾತ್ರಾ ಮಹೋತ್ಸವದ ಅಂಗವಾಗಿ ಐತಿಹಾಸಿಕ ಗರಳಪುರಿ ಉತ್ಸವ ನಡೆಸಿ ಜನರನ್ನು ಸಾಂಸ್ಕೃತಿಕವಾಗಿ ಒಗ್ಗೂಡಿಸುವ ಪ್ರಯತ್ನ ನಡೆಸಿರುವುದು ಶ್ಲಾಘನೀಯ ಎಂದರು.

ನಟಿ ಸಪ್ತಮಿಗೌಡ ಮಾತನಾಡಿ, ಶ್ರೀಕಂಠೇಶ್ವರ ನಮ್ಮ ಮನೆ ದೇವರು. ನಮ್ಮ ಕುಟುಂಬದಲ್ಲಿ ಮೊದಲನೇ ಮುಡಿ ಸೇವೆಯನ್ನು ನಂಜುಂಡೇಶ್ವರನಿಗೆ ಸಲ್ಲಿಸಲಾಗುತ್ತದೆ. ನಾನು ಬಾಲ್ಯಾವಸ್ಥೆಯಲ್ಲಿದ್ದಾಗ ನನ್ನ ಕುಟುಂಬದವರ ಜೊತೆಗೆ ತುಲಾಭಾರ ಸೇವೆ ನೆರವೇರಿಸಿದ್ದ ಬಗ್ಗೆ ತಮ್ಮ ಅನುಭವ ಹಂಚಿಕೊಂಡರು.

ಶಾಸಕರಾದ ಗಣೇಶ್ ಪ್ರಸಾದ್, ರವಿಶಂಕರ್, ಹರೀಶ್ ಗೌಡ, ನಟಿ ಅಮೃತ ಅಯ್ಯಂಗಾರ್ ಮಾತನಾಡಿದರು. ಚಲನಚಿತ್ರ ಹಿನ್ನೆಲೆ ಗಾಯಕ ವಾಸುಕಿ ವೈಭವ್ ರಸಮಂಜರಿ ಕಾರ್ಯಕ್ರಮದ ಮೂಲಕ ಜನರನ್ನು ರಂಜಿಸಿದರು. ಸ್ಥಳೀಯ ಕಲಾವಿದರು ನಡೆಸಿಕೊಟ್ಟ ಭರತನಾಟ್ಯ, ಜಾನಪದ ನೃತ್ಯ, ಜಾನಪದ ಹಾಡು, ರಂಗಗೀತೆ ಗಾಯನ ನೆರೆದಿದ್ದ ಪ್ರೇಕ್ಷಕರಿಗೆ ಮುದ ನೀಡಿತು.

ಸಮಾರಂಭದಲ್ಲಿ ಕನ್ನಡ ಭಾವಗೀತೆ ಸ್ಪರ್ಧೆ, ಚದುರಂಗ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಜಾನಪದ ಸ್ಪರ್ಧೆ, ವಚನ ಕಂಠಪಾಠ ಸ್ಪರ್ಧೆ, ಕೇಶ ವಿನ್ಯಾಸ ಸ್ಪರ್ಧೆ, ವೇಷಭೂಷಣ ಸ್ಪರ್ಧೆ, ರಂಗೋಲಿ ಸ್ಪರ್ಧೆ, ರಿಲ್ಸ್ ಮೇಕಿಂಗ್ ಸ್ಪರ್ಧೆ, ಹಾಲು ಕರೆಯುವ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಕೆ.ಜಿ.ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠ ನಾಯಕ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್‌ಕುಮಾರ್, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಮುಖಂಡರಾದ ಜಯರಾಮ್, ಹರೀಶ್, ಎನ್.ಎಂ.ಮಂಜುನಾಥ್, ಶಶಿರೇಖಾ, ಗಾಯತ್ರಿ, ರಾಜೇಶ್, ಎನ್.ಎಸ್. ಮಾದಪ್ಪ, ಅಬ್ದುಲ್ ಖಾದರ್, ಗೋವಿಂದರಾಜು, ನಾಗರಾಜು, ಶಿವಣ್ಣ, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಚಂದನ್‌ಗೌಡ, ತಾಲೂಕು ಅಧ್ಯಕ್ಷ ವಿಜಯಕುಮಾರ್ ಹಲವರಿದ್ದರು.


ಗರಳಪುರಿ ಉತ್ಸವ ಸಮಾರೋಪ ಸಮಾರಂಭವನ್ನು ನಟ ವಿನಯ್ ರಾಜ್‌ಕುಮಾರ್ ಉದ್ಘಾಟಿಸಿದರು.

> "ಐತಿಹಾಸಿಕ ನಂಜನಗೂಡಿನ ಹೆಸರನ್ನು ಶಾಶ್ವತಗೊಳಿಸುವ ಸಲುವಾಗಿ ಮತ್ತು ಜನರನ್ನು ಸಾಂಸ್ಕೃತಿಕವಾಗಿ ಒಂದುಗೂಡಿಸುವ ಸಲುವಾಗಿ ಗರಳಪುರಿ ಉತ್ಸವವನ್ನು ನಡೆಸಲಾಗಿದೆ. ಆ ಮೂಲಕ ಸ್ಥಳೀಯ ಕಲಾವಿದರಿಗೆ ವೇದಿಕೆ ಕಲ್ಪಿಸಿ ಅವರ ಕಲೆಗೆ ಪ್ರೋತ್ಸಾಹ ನೀಡಲಾಗಿದೆ. ಮುಂದೆ ಪ್ರತಿ ವರ್ಷ ಅದ್ದೂರಿಯಾಗಿ ಇಂತಹ ಕಾರ್ಯಕ್ರಮ ನಡೆಸಲಾಗುವುದು.
> –ದರ್ಶನ್ ಧ್ರುವನಾರಾಯಣ್, ಶಾಸಕ.


ಬೈಕ್‌ಗೆ ರಾಗಿ ಕೊಯ್ಲು ಯಂತ್ರ ಡಿಕ್ಕಿ

ಸ್ಥಳದಲ್ಲೇ ಬೈಕ್ ಸವಾರ ಸಾವು

ಹುಣಸೂರು, ಮಾ.30– ಬೈಕ್‌ಗೆ ರಾಗಿ ಕೊಯ್ಲು ಯಂತ್ರ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಕಡೇಮನುಗನಹಳ್ಳಿ ಬಳಿ ಭಾನುವಾರ ಸಂಜೆ ನಡೆದಿದೆ.



ತಾಲೂಕಿನ ಹನಗೋಡು ಹೋಬಳಿ ಅಯ್ಯನಕೆರೆ ಹಾಡಿ ನಿವಾಸಿ ದಿ.ಶಿವಾಜಿ ಅವರ ಪುತ್ರ ಗಿರೀಶ್(25) ಸಾವನ್ನಪ್ಪಿದವರು. ಈತ ಭಾನುವಾರ ಸಂಜೆ ತನ್ನ ಬೈಕ್(ಕೆ.ಎ–12, ಕ್ಯೂ–1131)ನಲ್ಲಿ ಹುಣಸೂರಿನಿಂದ ಅಯ್ಯನಹಾಡಿಗೆ ತೆರಳುತ್ತಿದ್ದ ಎನ್ನಲಾಗಿದೆ. ಈ ವೇಳೆ ಕಡೇಮನುಗನಹಳ್ಳಿ ಬಳಿ ಹುಣಸೂರು ಕಡೆಗೆ ಆಗಮಿಸುತ್ತಿದ್ದ ರಾಗಿ ಕೊಯ್ಲು ಯಂತ್ರ ಬೈಕ್‌ಗೆ ಡಿಕ್ಕಿ ಹೊಡೆ ದಿದೆ. ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ ಗಿರೀಶ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.



ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ಗ್ರಾಮಾಂತರ ಠಾಣೆ ಎಸ್‌ಐ ರಾಧ ಹಾಗೂ ಸಿಬ್ಬಂದಿ, ಪರಿಶೀಲನೆ ನಡೆಸಿ ವಾಹನಗಳನ್ನು ವಶಕ್ಕೆ ಪಡೆದು, ಶವವನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರಿಗೆ ಒಪ್ಪಿಸಿದರು. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿವಪುರದಲ್ಲಿ ಶ್ರೀನಂದಿ ಬಸವೇಶ್ವರ ಕೊಂಡ ಮಹೋತ್ಸವ

ಸರಗೂರು, ಮಾ.30– ತಾಲೂಕಿನ ಶಿವಪುರದಲ್ಲಿ ಶ್ರೀನಂದಿ ಬಸವೇಶ್ವರ ಕೊಂಡ ಮಹೋತ್ಸವ ಸೋಮವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು.

ಕೊಂಡೋತ್ಸವ ಅಂಗವಾಗಿ ದೇವಾಲಯ ಹಾಗೂ ಗ್ರಾಮವನ್ನು ತಳಿರು ತೋರಣ, ರಂಗೋಲಿ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಭಾನುವಾರ ರಾತ್ರಿಯಿಂದಲೇ ದೇವಾಲಯದಲ್ಲಿ ನಂದಿ ಬಸವೇಶ್ವರ ದೇವರಿಗೆ ಹೋವ ಸೇರಿದಂತೆ ವಿವಿಧ ಪೂಜೆ ಸಲ್ಲಿಸಲಾಯಿತು. ಸೋಮವಾರ ಬೆಳಗ್ಗೆ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ನುಗುನದಿಗೆ ತೆರಳಿ ಗಂಗೆ ಪೂಜೆ ನಡೆಸಿ ಪೂರ್ಣಕುಂಭ ಕಳಸದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಉತ್ಸವ ಮೂರ್ತಿಯನ್ನು ಮಂಗಳವಾದ್ಯ, ನಂದಿಕಂಬ, ಸತ್ತಿಗೆ, ಬ್ಯಾಂಡ್ ಸೆಟ್, ಚಂಡೆ, ವೀರಗಾಸೆ ಕುಣಿತ ಸೇರಿದಂತೆ ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಉತ್ಸವ ಮೂರ್ತಿ ದೇವಾಲಯ ತಲುಪಿದ ನಂತರ ವಿಶೇಷ ಪೂಜೆ ನಡೆಸಿ, ಮಹಾಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು. ನಂತರ ಅನ್ನ ಸಂತರ್ಪಣೆ ನಡೆಸಲಾಯಿತು. ಶಿವಾರ್ಚಕ ಮಹದೇವಪ್ಪ ಪೂಜಾ ಕೈಂಕರ್ಯ ನೆರವೇರಿಸಿದರು.

ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಈ ವೇಳೆ ಗುಡಿಗೌಡ ಕೆ.ಪಿ.ಮಹದೇವಪ್ಪ, ಯಜಮಾನರಾದ ನಾಗಮಲ್ಲಪ್ಪ ಸೋಮಪ್ಪ ಮುರುಗಬೋವಿ, ಮಾದಪ್ಪಬೋವಿ, ಮುಖಂಡರಾದ ಪ್ರಕಾಶ್, ಚಂದ್ರಕುಮಾರ್, ಶಿವಪ್ಪ, ಬಸವಣ್ಣ, ಕೆಂಡಗಣ್ಣಪ್ಪ, ಎಸ್.ಎನ್.ನಾಗಪ್ಪ, ಎಸ್.ಪಿ.ನಾಗ ರಾಜು, ಶಾಂತಮಲ್ಲಪ್ಪ, ಕುಮಾರ್ ಸೇರಿದಂತೆ ಇತರರಿದ್ದರು.


ಶ್ರೀನಂದಿ ಬಸವೇಶ್ವರ ಕೊಂಡ ಮಹೋತ್ಸವ ನಡೆಯಿತು.

ಗೂಡ್ಸ್ ಆಟೋ ಡಿಕ್ಕಿ: ಬಾಲಕ ಸಾವು

ಹುಣಸೂರು, ಮಾ.30– ಗೂಡ್ಸ್ ಆಟೋ ಡಿಕ್ಕಿ ಹೊಡೆದ ಪರಿಣಾಮ ಬಾಲಕ ಸಾವನ್ನಪ್ಪಿರುವ ಘಟನೆ ಇಲ್ಲಿನ ಶಬ್ಬೀರ್ ನಗರದಲ್ಲಿ ಸೋಮವಾರ ಬೆಳಗ್ಗೆ ನಡೆದಿದೆ. ಶಬ್ಬೀರ್ ನಗರದ ನಿವಾಸಿ ಫಜಲ್ ಅಹಮದ್ ಮತ್ತು ಅಸ್ಮಿಯಾ ಭಾನು ದಂಪತಿ ಪುತ್ರ ಮೊಹಮ್ಮದ್ ರಿಯಾನ್ (7) ಸಾವನ್ನಪ್ಪಿದ ಬಾಲಕ. ಇಂದು ಬೆಳಗ್ಗೆ ಕಟ್ಟೆಮಳಲವಾಡಿಯಿಂದ ಹುಣಸೂರಿಗೆ ಬರುತ್ತಿದ್ದ ಗೂಡ್ಸ್ ಆಟೋ (ಕೆಎ–11, ಬಿ–5831) ಶಬ್ಬೀರ್ ನಗರದ ರಸ್ತೆ ಬದಿಯಲ್ಲಿದ್ದ ಮನೆಯಿಂದ ಹೊರ ಬಂದ ಬಾಲಕನಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಬಾಲಕನನ್ನು ಪೋಷಕರು ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರೂ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ.


ರಿಯಾನ್

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ನಗರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಗೂಡ್ಸ್ ಆಟೋವನ್ನು ವಶಪಡಿಸಿಕೊಂಡು ಚಾಲಕ ಚಿಕ್ಕಹುಣಸೂರಿನ ನವೀನ್ ಎಂಬಾತನನ್ನು ವಶಕ್ಕೆ ಪಡೆದರು.

ಬಳಿಕ ಶವವನ್ನು ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಹುಣಸೂರು ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ನಗರ ಠಾಣೆ ಇನ್ಸ್‌ಪೆಕ್ಟರ್ ತಾಜುದ್ದೀನ್ ತಿಳಿಸಿದ್ದಾರೆ.

ಮೂರನೇ ಪುಟದಿಂದ

ಜಾತಿಯೊಂದಿಗೆ ಜನಗಣತಿ

ಗಣತಿದಾರರು ಮನೆಗೆ ಭೇಟಿ ನೀಡಿದಾಗ ದೃಢೀಕರಿಸಲು ಮತ್ತು ಸ್ವಯಂ ಗಣತಿ ದತ್ತಾಂಶದ ಅಂತಿಮ ಸಲ್ಲಿಕೆಗೆ ಐಡಿಯನ್ನು ಗಣತಿದಾರರೊಂದಿಗೆ ಹಂಚಿಕೊಳ್ಳಬೇಕಾಗುತ್ತದೆ. ನಾಗರಿಕರು ತಮ್ಮ ಮಾಹಿತಿ ದಾಖಲಿಸಲು ಅವಕಾಶ ಇದ್ದು, ಇದರಿಂದ ಗಣತಿ ಕಾರ್ಯದಲ್ಲಿ ಪಾರದರ್ಶಕತೆ, ವೇಗ ಮತ್ತು ನಿಖರತೆ ಹೆಚ್ಚಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2027ರ ಜನಗಣತಿ ಮಾಹಿತಿ ಆಧಾರದ ಮೇಲೆ ಸರ್ಕಾರದ ಜನಪರ ಕಲ್ಯಾಣ ಕಾರ್ಯಕ್ರಮಗಳು, ಅಭಿವೃದ್ಧಿ, ಮೂಲ ಸೌಕಲರ್ಯ, ಅತ್ಯಂತ ಹಿಂದುಳಿದ ವರ್ಗದ ಸಮುದಾಯಗಳಿಗೆ ವಿಶೇಷ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲು ಈ ಗಣತಿ ಮಹತ್ವದ ಪಾತ್ರ ವಹಿಸಲಿದೆ.

ಈ ಕಾರಣಕ್ಕಾಗಿ ರಾಜ್ಯದ ಜನಗಣತಿ ಕಾರ್ಯಕ್ಕೆ ಬರುವ ಅಧಿಕಾರಿಗಳೊಂದಿಗೆ ಸಹಕರಿಸಿ ಅಗತ್ಯ ಮಾಹಿತಿಗಳನ್ನು ನೀಡಬೇಕು. ಇದನ್ನು ಅತ್ಯಂತ ಗೌಪ್ಯವಾಗಿ ಇರಿಸಲಾಗುವುದು ಎಂದು ಈಗಾಗಲೇ ಕೇಂದ್ರ ಗೃಹ ಸಚಿವಾಲಯ ದೇಶದ ಜನತೆಗೆ ಭರವಸೆ ನೀಡಿದೆ.

ಈ ಜನಗಣತಿ ಅಂಕಿ–ಅಂಶಗಳು ಲೋಕಸಭಾ ಹಾಗೂ ರಾಜ್ಯ ವಿಧಾನಸಭೆಗಳ ಕ್ಷೇತ್ರಗಳ ವಿಂಗಡಣಾ ಕಾರ್ಯಕ್ಕೂ ಸಹಕಾರಿಯಾಗಲಿದೆ. ಕೇಂದ್ರ ಸರ್ಕಾರ ಹೊಸದಾಗಿ ಜನಗಣತಿ ಹಾಗೂ ಜಾತಿಗಣತಿ ನಡೆಸುವುದಾಗಿ ಪ್ರಕಟ ಮಾಡಿದ ನಂತರವೂ ಮುಖ್ಯಮಂತ್ರಿ ಸಿದ್ದರಾಮಯ್ಯ ಕರ್ನಾಟಕದಲ್ಲಿ ಜಾತಿಗಣತಿ ನಡೆಸಿದರು.

ಸುಮಾರು 437 ಕೋಟಿ ರೂ.ಗಳಿಗೂ ಹೆಚ್ಚು ವೆಚ್ಚ ಮಾಡಿ ನಡೆಸಿದ ಜಾತಿಗಣತಿ ಇದುವರೆಗೂ ಫಲಿತಾಂಶ ನೀಡಿಲ್ಲ. ಕೇಂದ್ರ ಪ್ರಕಟಿಸಿದಂತೆ ಬರುವ ಬುಧವಾರ ದಿಂದ ಜನಗಣತಿ ಕಾರ್ಯ ಆರಂಭವಾಗಲಿದೆ.

ಅಂಗಡಿಗಳಿಗೆ ವಾಣಿಜ್ಯ ಸಿಲಿಂಡರ್ ಪೂರೈಕೆ

ಮೈಸೂರಿನಲ್ಲಿ ಸಾವಿರಾರು ಹೋಟೆಲ್, ಬೇಕರಿ, ಸ್ವೀಟ್ ಅಂಗಡಿಗಳಿದ್ದು, ಪ್ರತಿ ದಿನ ಕನಿಷ್ಠ 4 ಸಾವಿರ ವಾಣಿಜ್ಯ ಸಿಲಿಂಡರ್‌ಗಳ ಅವಶ್ಯವಿದೆ. ಒಂದು ಹೋಟೆಲ್‌ಗೆ ಪ್ರತಿದಿನ 5 ರಿಂದ 8 ಸಿಲಿಂಡರ್ ಬೇಕಿದೆ. ಆದರೆ ತೈಲ ಕಂಪನಿಗಳು ಅನುಮೋದಿಸಲ್ಪಟ್ಟವರಿಗೆ ಮಾತ್ರ ಈಗ ದಿನಕ್ಕೆ 2 ರಿಂದ 5 ಸಿಲಿಂಡರ್ ದೊರೆಯುತ್ತಿದೆ.

ಸಿಲಿಂಡರ್‌ಗಳಿಲ್ಲದೆ ಬಹುಪಾಲು ಹೋಟೆಲ್‌ಗಳು ಬಂದ್ ಆಗಿದ್ದವು. ಆದರೆ ಇಂದಿನಿಂದ ಸಿಲಿಂಡರ್ ದೊರೆಯುತ್ತಿರುವ ಕಾರಣ ನಾಳೆಯಿಂದ ಹೋಟೆಲ್‌ಗಳು ಪುನಾರಾರಂಭಗೊಳ್ಳಲಿವೆ. ಮೈಸೂರಿನಲ್ಲಿ ಎಲ್ಲಾ ತೈಲ ಕಂಪನಿಗಳ ಸುಮಾರು 25 ಡೀಲರ್‌ಗಳಿದ್ದು, ಎಲ್ಲಾ ಕಡೆ ಇನ್ನು ಮುಂದೆ ವಾಣಿಜ್ಯ ಸಿಲಿಂಡರ್‌ಗಳ ಸರಬರಾಜು ಅಧಿಕೃತವಾಗಲಿದೆ.

ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟಕ್ಕೆ ಬ್ರೇಕ್

ವಾಣಿಜ್ಯ ಸಿಲಿಂಡರ್ ಸರಬರಾಜಿನಲ್ಲಿ ಸರ್ಕಾರ ಪಾರದರ್ಶಕತೆ ತಂದಿದೆ. ಪಕ್ಕಾ ದಾಖಲಾತಿ ಹೊಂದಿರುವವರಿಗೆ ಅಧಿಕೃತ ಡೀಲರ್‌ಗಳ ಮೂಲಕ ಮಾತ್ರ ಸಿಲಿಂಡರ್ ಪೂರೈಸುವ ಪ್ರಕ್ರಿಯೆ ಆರಂಭಿಸಲಾಗಿದೆ. ಇದರಿಂದ ಲೋಡ್‌ಗಟ್ಟಲೆ ಸಿಲಿಂಡರ್ ತಂದು ಕಾಳಸಂತೆಯಲ್ಲಿ ಮಾರಾಟ ಮಾಡುವುದು ಈಗ ಸಂಪೂರ್ಣ ಸ್ಥಗಿತವಾಗಲಿದೆ. ಈ ಮೊದಲು ಗ್ಯಾಸ್ ಡೀಲರ್‌ಗಳಿಗೆ ಲೋಡ್‌ಗಟ್ಟಲೆ ಸಿಲಿಂಡರ್ ಬರುತ್ತಿತ್ತು. ಅವರು ಸಬ್ ಡೀಲರ್ ಹಾಗೂ ಏಜೆಂಟ್‌ಗೆ ಕೂಡ ಸಿಲಿಂಡರ್ ನೀಡುತ್ತಿದ್ದರು. ಇವರು ಹೋಟೆಲ್ ಸೇರಿದಂತೆ ಇತರರಿಗೆ ಸಿಲಿಂಡರ್ ಮಾರಾಟ ಮಾಡಿ ಲಾಭ ಮಾಡುತ್ತಿದ್ದರು. ಆದರೆ, ಇನ್ನು ಮುಂದೆ ಈ ಎಲ್ಲಾ ಕಳ್ಳ ವ್ಯವಹಾರ ನಡೆಯುವುದಿಲ್ಲ. ವಾಣಿಜ್ಯ ಸಿಲಿಂಡರ್ ಪಡೆಯುವವರು ಅಧಿಕೃತ ಡೀಲರ್‌ಗಳಲ್ಲಿ ಗ್ರಾಹಕರಾಗಿರಬೇಕು. ಇಂತಹ ಗ್ರಾಹಕರ ಮಾಹಿತಿ ಹಾಗೂ ದಾಖಲಾತಿಗಳನ್ನು ತೈಲ ಕಂಪನಿಗಳಿಗೆ ಕಳುಹಿಸಿ, ಅವರಿಂದ ಅನುಮೋದನೆ ಪಡೆಯಬೇಕು. ಇಂತಹವರಿಗೆ ಮಾತ್ರ ಇನ್ನು ಮುಂದೆ ವಾಣಿಜ್ಯ ಸಿಲಿಂಡರ್ ದೊರೆಯಲಿದೆ.



ನಾಳೆಯಿಂದ ವಿದ್ಯುತ್ ದರ ಏರಿಕೆ?

ಸಾಧ್ಯತೆ ಇದೆ ಎನ್ನಲಾಗಿದೆ. ಗೃಹಜ್ಯೋತಿ ಯೋಜನೆ ಪರಿಣಾಮ ಆದಾಯದಲ್ಲಿ ಖೋತಾ ಆಗಿರುವುದನ್ನು ಸರಿದೂಗಿಸಿಕೊಳ್ಳಲು ಎಸ್ಕಾಂಗಳು ಆಯೋಗದ ಮೊರೆ ಹೋಗಿದ್ದವು. ಬೆಸ್ಕಾಂ ಮತ್ತು ಕೆಪಿಟಿಸಿಎಲ್ ಸಲ್ಲಿಸಿರುವ ವಾರ್ಷಿಕ ಕಾರ್ಯಕ್ಷಮತೆ ವರದಿ ಆಧಾರದ ಮೇಲೆ ಆಯೋಗವು ಇತ್ತೀಚೆಗೆ ಅಹವಾಲು ಆಲಿಸಿತ್ತು. ಈ ವೇಳೆ ಐದು ಎಸ್ಕಾಂಗಳ 2024–25ನೇ ಸಾಲಿನ ಆದಾಯದಲ್ಲಿ ಸುಮಾರು 4,900 ಕೋಟಿ ಖೋತಾ ಆಗಿರುವುದಾಗಿ ವರದಿಯಲ್ಲಿ ಪ್ರಸ್ತಾಪಿಸಲಾಗಿತ್ತು. ದರ ಪರಿಷ್ಕರಣೆ ಮಾಡದಿದ್ದರೆ ಕಂಪನಿಗಳ ನಿರ್ವಹಣೆ ಕಷ್ಟವಾಗಲಿದೆ. ಮತ್ತಷ್ಟು ಆರ್ಥಿಕ ಸಂಕಷ್ಟ ಎದುರಿಸಬೇಕಾಗುತ್ತದೆ ಎಂದು ವಿವರಿಸಲಾಗಿತ್ತು.

ಶ್ರೀಕಂಠೇಶ್ವರಸ್ವಾಮಿ ಗೌತಮ ಪಂಚ ಮಹಾರಥೋತ್ಸವ



ನಂತರ ಉತ್ಸವ ಮೂರ್ತಿಗೆ ನವರತ್ನ ಕಂಠಿಹಾರ, ವಜ್ರಗಳನ್ನು ಹಾಕಿ ವಿಶೇಷ ಹೂಗಳಿಂದ ಅಲಂಕಾರವನ್ನು ನೆರವೇರಿಸಲಾಯಿತು. ಉದಯಾತ್ಪೂರ್ವ 5.50 ರಿಂದ 6.30 ಗಂಟೆಯೊಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ದೇವಾಲಯದ ಆಗಮಿಕ ಹಾಗೂ ದೇವಸ್ಥಾನದ ಪ್ರಧಾನ ಅರ್ಚಕ ಜೆ.ನಾಗಚಂದ್ರ ದೀಕ್ಷಿತ್ ಹಾಗೂ ದೇಗುಲದ ಅರ್ಚಕ ವೃಂದವರು ಧಾರ್ಮಿಕ ವಿಧಿ–ವಿಧಾನಗಳನ್ನು ಪೂರೈಸಿದ ನಂತರ ಶ್ರೀಕಂಠೇಶ್ವರ ಉತ್ಸವಮೂರ್ತಿಯಲ್ಲಿ ರಥದಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು.

ರಥೋತ್ಸವಕ್ಕೆ ಚಾಲನೆ: ಅರ್ಚಕ ನಾಗೇಂದ್ರ ದೀಕ್ಷಿತ್ ನೇತೃತ್ವದಲ್ಲಿ 95 ಅಡಿ ಎತ್ತರದ, 120 ಟನ್ ತೂಕದ ಅಲಂಕಾರ ಮಾಡಿದ್ದ ರಥದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಶ್ರೀಕಂಠೇಶ್ವರಸ್ವಾಮಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಲಾಯಿತು. ಬಳಿಕ ದರ್ಶನ್ ಧ್ರುವನಾರಾಯಣ್ ಈಡುಗಾಯಿ ಒಡೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

ಮುಗಿಲು ಮುಟ್ಟಿದ ಜೈಕಾರ: ರಥೋತ್ಸವಕ್ಕೆ ಚಾಲನೆ ದೊರೆಯುತ್ತಿದ್ದಂತೆ ನಾಡಿನ ವಿವಿಧ ಮೂಲೆಗಳಿಂದ ಆಗಮಿಸಿದ್ದ ಲಕ್ಷಾಂತರ ಭಕ್ತರು ಶ್ರೀಕಂಠೇಶ್ವರನಿಗೆ ಜೈಕಾರ ಮೊಳಗಿಸಿದರು. ಶಿಳ್ಳೆ, ಕೇಕೆ ಹಾಕುತ್ತಾ ತೇರಿನ ಹಗ್ಗ ಹಿಡಿದು ಎಳೆಯುವ ಮೂಲಕ ಭಕ್ತಿಯ ಪರಾಕಾಷ್ಠೆಯನ್ನು ಮೆರೆದರು. ಬೆಳಗ್ಗೆ 8.10ಕ್ಕೆ ಗೌತಮ ರಥವು ಯಾವುದೇ ಅಡ್ಡಿ–ಆತಂಕಗಳಿಲ್ಲದೆ ಸ್ವಸ್ಥಾನವನ್ನು ಸೇರಿತು.

ಮೊದಲು ಗಣಪತಿ ರಥ, ನಂತರ ಶ್ರೀಕಂಠೇಶ್ವರ ಸ್ವಾಮಿಯವರ ದೊಡ್ಡರಥ (ಗೌತಮ ರಥ), ನಂತರ ಸುಬ್ರಮಣ್ಯ, ಚಂಡಿಕೇಶ್ವರಸ್ವಾಮಿ, ಮತ್ತು ಕೊನೆಯಲ್ಲಿ ಶ್ರೀ ಪಾರ್ವತಮ್ಮನವರ ರಥಗಳು 1.5 ಕಿಮೀ ರಥ ಬೀದಿಯಲ್ಲಿ ಸಂಚರಿಸಿ ಯಾವುದೇ ಅಡ್ಡಿ–ಆತಂಕವಿಲ್ಲದೆ ಬೆಳಗ್ಗೆ 9ರ ವೇಳೆಗೆ ಸ್ವಸ್ಥಾನ ತಲುಪಿದವು. ನಂತರ ಹಂಸಾರೋಹಣ ಉತ್ಸವ ಜರುಗಿತು.

ಹಣ್ಣು–ಜವನ ಸಮರ್ಪಣೆ: ಐದು ರಥಗಳು ರಥ ಬೀದಿಗಳಲ್ಲಿ ಸಾಗುವಾಗ ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದ ಲಕ್ಷಾಂತರ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿ, ಹಣ್ಣು–ಜವನ ಸಮರ್ಪಿಸಿದರು. ನವ ವಧು–ವರರು ಇಷ್ಟಾರ್ಥ ನೆರವೇರಿಸುವಂತೆ ಕೋರಿಕೊಂಡರು.

ಭಕ್ತರಿಗೆ ಪ್ರಸಾದ ವಿತರಣೆ: ಜಾತ್ರೆಗೆ ಆಗಮಿಸಿದ್ದ ಭಕ್ತರಿಗೆ ವಿವಿಧ ಸಂಘ ಸಂಸ್ಥೆಗಳು ಹಾಗೂ ಹರಕೆ ಹೊತ್ತವರು ಪಾನಕ, ಮಜ್ಜಿಗೆ, ರೈಸ್‌ಬಾತ್, ಮೊಸರನ್ನ, ಪುಳಿಯೋಗರೆ, ಲಾಡು, ಕುಡಿಯುವ ನೀರಿನ ಬಾಟಲ್‌ಗಳನ್ನು ವಿತರಿಸಿದರು. ಅಲ್ಲದೆ ದೇವಾಲಯದ ದಾಸೋಹ ಭವನದಲ್ಲಿಯೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಕಂಗೊಳಿಸಿದ ದೇಗುಲ: ರಥೋತ್ಸವದ ಅಂಗವಾಗಿ ಶ್ರೀಕಂಠೇಶ್ವರ ದೇವಾಲಯಕ್ಕೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಅಲ್ಲದೇ ಪ್ರಮುಖ ಬೀದಿಗಳು, ವೃತ್ತಗಳು ಮತ್ತು ಸರ್ಕಾರಿ ಕಟ್ಟಡಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಮಹಿಳೆಯರು ತಮ್ಮ ಮನೆ ಎದುರು ರಂಗೋಲಿ ಹಾಕಿ ಜಾತ್ರೆಗೆ ಮೆರಗು ನೀಡಿದರು.

ವಿಶೇಷ ಹೂವಿನ ಅಲಂಕಾರ: ಶ್ರೀಕಂಠೇಶ್ವರಸ್ವಾಮಿಯವರ ಗೌತಮ ಪಂಚ ಮಹಾರಥೋತ್ಸವದ ಪ್ರಯುಕ್ತ ಐದು ರಥಗಳಿಗೂ ವಿಶೇಷವಾಗಿ ಹೂವಿನಿಂದ ಅಲಂಕಾರ ಮಾಡಲಾಗಿತ್ತು.

ಬಿಗಿ ಪೊಲೀಸ್ ಬಂದೋಬಸ್ತ್: ಸುರಕ್ಷತೆ ದೃಷ್ಟಿಯಿಂದ ನಗರದ ವಿವಿಧ ಸ್ಥಳಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಅಲ್ಲದೇ ಯಾವುದೇ ಅಹಿತಕರ ಘಟನೆ ನಡೆಯದಂತೆ 500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜಿಸಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ರಥದ ಸುತ್ತ ಸರ್ಪಗಾವಲು: ರಥೋತ್ಸವ ವೇಳೆ ರಥದ ಚಕ್ರದತ್ತ ಜನರು ಸುಳಿಯದಂತೆ ಸರ್ಪಗಾವಲು ಹಾಕಲಾಗಿತ್ತು. ಐದೂ ರಥ ಚಕ್ರದ ಬಳಿ ಜನರ ಓಡಾಟ ನಿಯಂತ್ರಿಸಲು ಹಗ್ಗ ಹಿಡಿದಿದ್ದ ಪೊಲೀಸರು ಯಾವುದೇ ಅಪಾಯವಾಗದಂತೆ ಎಚ್ಚರ ವಹಿಸಿದ್ದರು.

ಜಾತ್ರಾ ಮಹೋತ್ಸವದ ಅಂಗವಾಗಿ ಕಳೆದ ಸೋಮವಾರದಿಂದಲೇ ದೇವಾಲಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಪ್ರಾರಂಭವಾಗಿ ಇಂದು ಗೌತಮ ಪಂಚ ರಥೋತ್ಸವ ನೆರವೇರಿತು. ಏ.1ರಂದು ಸಂಜೆ 7 ಗಂಟೆಗೆ ಕಪಿಲಾ ನದಿಯಲ್ಲಿ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ಜರುಗಲಿದ್ದು, ಏ.3ರಂದು ಮಹಾ ಸಂಪ್ರೋಕ್ಷಣೆ, ನಂದಿ ವಾಹನೋತ್ಸವ ಮತ್ತು ಶಯನೋತ್ಸವದೊಂದಿಗೆ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ರಥೋತ್ಸವ ಮುಗಿದರೂ ಬರುತ್ತಲೇ ಇದ್ದ ಜನಸಾಗರ: ರಥೋತ್ಸವ ಮುಗಿದರೂ ನಂಜನಗೂಡಿಗೆ ಬರುವ ಭಕ್ತರ ಸಂಖ್ಯೆ ದಿನವಿಡೀ ಹೆಚ್ಚಾಗಿತ್ತು. ರಥೋತ್ಸವ ಕಣ್ತುಂಬಿಕೊಳ್ಳಲು ಸಾಧ್ಯವಾಗದ ಭಕ್ತರು, ದೇವಾಲಯದ ಮುಂದೆ ನಿಂತಿದ್ದ ರಥಕ್ಕೆ ಹಣ್ಣು–ಜವನ ಸಮರ್ಪಿಸಲು ರಾತ್ರಿ ವರೆಗೂ ಸಾಗರೋಪಾದಿಯಲ್ಲಿ ಬರುತ್ತಲೇ ಇದ್ದರು.

ವಾಹನಗಳ ದಂಡು: ರಥೋತ್ಸವಕ್ಕೆ ವಿವಿಧೆಡೆಯಿಂದ ನೂರಾರು ಸಾರಿಗೆ ಬಸ್, ವಿಶೇಷ ರೈಲು ಮಾತ್ರವಲ್ಲದೆ ಸಾವಿರಾರು ಖಾಸಗಿ ಮತ್ತು ಪ್ರವಾಸಿ ವಾಹನಗಳಲ್ಲಿ ಭಕ್ತರು ನಂಜನಗೂಡಿಗೆ ಆಗಮಿಸಿದ್ದರು. ಈ ಹಿನ್ನೆಲೆಯಲ್ಲಿ ವಿವಿಧ ಮಾರ್ಗದಲ್ಲಿ ಬರುವ ಭಕ್ತರು ತಮ್ಮ ವಾಹನವನ್ನು ನಿಲುಗಡೆ ಮಾಡಲು ಪ್ರತ್ಯೇಕ ಸ್ಥಳದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೆ, ಪಾರ್ಕಿಂಗ್ ಸ್ಥಳ ತೋರಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ವ್ಯವಸ್ಥೆ ಮಾಡಲಾಗಿತ್ತು.

ಜಾತ್ರಾ ಮಹೋತ್ಸವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಭಾಗಿಯಾಗಿ ಶ್ರೀಕಂಠೇಶ್ವರನ ದರ್ಶನ ಪಡೆದರು. ಶಾಸಕ ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕರಾದ ಕೇಶವಮೂರ್ತಿ, ಬಿ.ಹರ್ಷವರ್ಧನ್, ಕಾಂಪೋಸ್ಟ್ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ.ಜಿ.ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ದೇವಾಲಯ ಸಮಿತಿ ಸದಸ್ಯರಾದ ಗೋವಿಂದರಾಜು, ಗೋಪಾಲಕೃಷ್ಣ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಅಪರ ಜಿಲ್ಲಾಧಿಕಾರಿ ಶಿವರಾಜು, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ತಹಸೀಲ್ದಾರ್ ಸ್ಮಿತಾರಾಮು, ದೇವಾಲಯ ಕಾರ್ಯ ನಿರ್ವಹಣಾಧಿಕಾರಿ ಕೃಷ್ಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅಡುಗೆ ಅನಿಲ ಸಮಸ್ಯೆ ನಿವಾರಣೆಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಪ್ರಧಾನಿಗೆ ಆಗ್ರಹ

ಬೆಂಗಳೂರು, ಮಾ. 30(ಕೆಎಂಶಿ)– ಅಡುಗೆ ಅನಿಲ (ಎಲ್‌ಪಿಜಿ) ಸಮಸ್ಯೆ ನಿವಾರಿಸಲು ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಇರಾನ್ ಮೇಲೆ ಇಸ್ರೇಲ್–ಅಮೆರಿಕ ನಡೆಸುತ್ತಿರುವ ಯುದ್ಧದ ಪರಿಣಾಮದಿಂದ ಅಡುಗೆ ಅನಿಲ ಪೂರೈಕೆ ಸಮಸ್ಯೆ ಪೂರ್ಣವಾಗಿ ಪರಿಹರಿಸಲು ಸಾಧ್ಯವಾಗುತ್ತಿಲ್ಲ. ಎಲ್‌ಪಿಜಿಗೆ ಪರ್ಯಾಯ ವ್ಯವಸ್ಥೆ ಮಾಡಲು ಪ್ರಧಾನಿ ಮೋದಿ ಹಾಗೂ ಕೇಂದ್ರ ಪೆಟ್ರೋಲಿಯಂ ಸಚಿವರು ಮಾರ್ಗ ಹುಡುಕಬೇಕೆಂದು ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಪ್ರಕಟಿಸಿರುವಂತೆ ಹೋಟೆಲ್ ಉದ್ಯಮಕ್ಕೆ ಮಂಗಳವಾರದಿಂದಲೇ ಪ್ರತಿನಿತ್ಯ 17,500 ಸಿಲಿಂಡರ್‌ಗಳು ಹೆಚ್ಚುವರಿಯಾಗಿ ದೊರೆಯಲಿದೆ.

ಮುಂದಿನ ದಿನಗಳಲ್ಲಿ ಹೋಟೆಲ್ ಉದ್ಯಮಕ್ಕೆ ಹೆಚ್ಚುವರಿ ಸಿಲಿಂಡರ್ ದೊರೆಯಲಿವೆ. ಗೃಹ ಬಳಕೆ ಸಿಲಿಂಡರ್ ನಗರ ಪ್ರದೇಶಗಳಲ್ಲಿ ಒಮ್ಮೆ ಪಡೆದ ನಂತರ 25 ದಿನಗಳ ನಂತರವಷ್ಟೇ ಪಡೆಯಲು ಅವಕಾಶ ಇರುತ್ತದೆ. ಗ್ರಾಮೀಣ ಭಾಗದಲ್ಲಿ ಸದ್ಯಕ್ಕೆ 45 ದಿನಗಳ ಅಂತರ ನಿಗದಿ ಪಡಿಸಲಾಗಿದೆ. ಯುದ್ಧ ನಿಂತ ನಂತರ ಎಂದಿನಂತೆ ಸೌಲಭ್ಯಗಳು ದೊರೆಯಲಿವೆ. ಅಲ್ಲಿಯವರೆಗೂ ಗ್ರಾಹಕರು ವಿದ್ಯುತ್ ಅಥವಾ ಸೌದೆ ಒಲೆ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದಿದ್ದಾರೆ.

ಅಪಾರ್ಟ್‌ಮೆಂಟ್‌ನ 12ನೇ ಮಹಡಿಯಿಂದ ಜಿಗಿದು ಮೆಡಿಕಲ್ ವಿದ್ಯಾರ್ಥಿ ಸಾವು

ಮಂಗಳೂರು: ಮೆಡಿಕಲ್ ವಿದ್ಯಾರ್ಥಿ ಅಪಾರ್ಟ್‌ಮೆಂಟ್‌ನ 12ನೇ ಮಹಡಿಯಿಂದ ಜಿಗಿದು ಸಾವನ್ನಪ್ಪಿರುವ ಘಟನೆ ಮಂಗಳೂರಿನ ಅತ್ತಾವರದಲ್ಲಿ ನಡೆದಿದೆ.

ಮೃತ ವಿದ್ಯಾರ್ಥಿಯನ್ನು ಉತ್ತರ ಭಾರತ ಮೂಲದ ಸಾರ್ಥಕ್ ಮೌರ್ಯ(23) ಎಂದು ಗುರುತಿಸಲಾಗಿದೆ. ಅತ್ತಾವರದ ಪಿಜಿಯೊಂದರಲ್ಲಿ ವಾಸವಾಗಿದ್ದ ಈತ, ಗೆಳತಿಯೊಬ್ಬಳು ವಾಸವಿರುವ ಅಪಾರ್ಟ್‌ಮೆಂಟ್‌ಗೆ ಬಂದಿದ್ದ ವೇಳೆ 12ನೇ ಮಹಡಿಗೆ ತೆರಳಿ ಅಲ್ಲಿಂದ ಜಿಗಿದಿದ್ದಾನೆ.

ನಾಳೆಯಿಂದ(ಮಾ.31) ಮೆಡಿಕಲ್ ಪರೀಕ್ಷೆ ಇತ್ತು. ಪರೀಕ್ಷೆ ಭಯ ಅಥವಾ ಪ್ರೇಮ ವೈಫಲ್ಯದಿಂದ ಈತ ಆತ್ಮಹತ್ಯೆ ಮಾಡಿಕೊಂಡನೋ ಇಲ್ಲವೇ ಬೇರೆ ಏನಾದರೂ ಕಾರಣವಿರಬಹುದೇ ಎಂಬುದು ತನಿಖೆಯಲ್ಲಿ ತಿಳಿಯಬೇಕಿದೆ. ಪಾಂಡೇಶ್ವರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹೈಟೆನ್ಷನ್ ಲೈನ್‌ಗೂ ಡೋಂಟ್ ಕೇರ್

ಮತ್ತೆ ತಲೆ ಎತ್ತಿದ ಫುಡ್ ಸ್ಟಾಲ್‌ಗಳು!

- ಆರಂಭದಲ್ಲಿ ಶೂರತ್ವ-ನಂತರದಲ್ಲಿ ಜಡತ್ವ ಎಂಬಂತೆ ಕಣ್ಮುಚ್ಚಿ ಕುಳಿತ ಪಾಲಿಕೆ
- ವಿಜಯನಗರ 2ನೇ ಹಂತದ ರಿಂಗ್ ರೋಡ್ ಜಂಕ್ಷನ್ ಬಳಿ ಹೈಟೆನ್ಷನ್ ಲೈನ್ ಕೆಳಗೆ ವ್ಯಾಪಾರ-ವಹಿವಾಟು ಆರಂಭ


ಮೈಸೂರಿನ ವಿಜಯನಗರ 2ನೇ ಹಂತದ ರಿಂಗ್ ರಸ್ತೆ ಜಂಕ್ಷನ್ ಸಮೀಪ ಹೈಟೆನ್ಷನ್ ಲೈನ್ ಕೆಳಗೆ ಸ್ಟಾಲ್‌ಗಳನ್ನು ಹಾಕಿಕೊಂಡು ವ್ಯಾಪಾರ ವಹಿವಾಟು ಆರಂಭಿಸಿರುವುದು.

ಮೈಸೂರು,ಮಾ.30(ಪಿಎಂ)– ಯಾವುದಕ್ಕೂ ಡೋಂಟ್ ಕೇರ್ ಎನ್ನುವ ರೀತಿಯಲ್ಲಿ ಮೈಸೂರಿನ ವಿಜಯನಗರ 2ನೇ ಹಂತದ ರಿಂಗ್ ರಸ್ತೆ ಜಂಕ್ಷನ್ ಸಮೀಪ ಹೈಟೆನ್ಷನ್ ಲೈನ್ ಕೆಳಗಿನ ಸ್ಥಳದಲ್ಲಿ ಯಾವ ಸ್ಥಳೀಯ ಆಡಳಿತ ಗೊತ್ತುಪಡಿಸದಿದ್ದರೂ ತಮ್ಮಷ್ಟಕ್ಕೆ ತಾವೇ ಸ್ಟಾಲ್‌ಗಳನ್ನು ತೆರೆದು, ವಹಿವಾಟು ಆರಂಭಿಸಲಾಗಿದೆ. ಅತ್ತ ಮೈಸೂರು ಮಹಾನಗರ ಪಾಲಿಕೆ ಮಾತ್ರ ಇದಕ್ಕೂ ನಮಗೂ ಸಂಬಂಧವೇ ಇಲ್ಲ ಎನ್ನುವಂತೆ ಕ್ರಮ ಜರುಗಿಸದೇ ಕಣ್ಮುಚ್ಚಿ ಕುಳಿತಿದೆ.

ಕೆಲ ದಿನಗಳ ಹಿಂದೆಯಷ್ಟೇ ಸದರಿ ಸ್ಥಳದಲ್ಲಿ ಗಿಡಗಂಟಿ ತೆರವುಗೊಳಿಸಿ ತಮಗೆ ಬೇಕಾದಂತೆ ಕಲ್ಲು ಅಳವಡಿಸಿ ಬೌಂಡರಿ ಫಿಕ್ಸ್ ಮಾಡಿಕೊಂಡಿದ್ದ ವ್ಯಾಪಾರಸ್ಥರು, ಇದೀಗ ವಹಿವಾಟು ಆರಂಭಿಸಿದ್ದು, ಹಲವು ಸ್ಟಾಲ್‌ಗಳು ಕಾರ್ಯಾರಂಭ ಮಾಡಿವೆ. ಹೀಗಿದ್ದರೂ ಪಾಲಿಕೆ ವಲಯ ಕಚೇರಿ 5ರ ಅಧಿಕಾರಿ–ಸಿಬ್ಬಂದಿ, ಆರಂಭ ಶೂರತ್ವ ತೋರಿಸಿ ಈಗ ಮೌನಕ್ಕೆ ಶರಣಾಗಿದ್ದಾರೆ.

ಪಾಲಿಕೆಯ ವಲಯ ಕಚೇರಿ 5ರ ವತಿಯಿಂದ ಮಾ.12ರಂದು ಸದರಿ ವ್ಯಾಪಾರಸ್ಥರನ್ನು ಇದೇ ವಿಜಯನಗರ 2ನೇ ಹಂತದ ಹೈಟೆನ್ಷನ್ ರಸ್ತೆಯಲ್ಲಿ ಎಸ್‌ಬಿಐ ಬ್ಯಾಂಕ್ ವಿಜಯನಗರ ಶಾಖೆ ಎದುರು ಹೈಟೆನ್ಷನ್ ಲೈನ್ ಕೆಳಗಿನಿಂದ ತೆರವುಗೊಳಿಸಲಾಗಿತ್ತು. ಹೈಟೆನ್ಷನ್ ಲೈನ್ ಕೆಳಗೆ ಈ ರೀತಿಯ ವ್ಯಾಪಾರ ವಹಿವಾಟು ನಡೆಯುವುದು ಅಪಾಯಕಾರಿ ಎಂಬ ಪ್ರಮುಖ ಕಾರಣದೊಂದಿಗೆ ಕಾರ್ಯಾಚರಣೆ ನಡೆಸಿ, ಜೆಸಿಬಿಗಳ ಮೂಲಕ ಸ್ಟಾಲ್‌ಗಳನ್ನು ತೆರವುಗೊಳಿಸಲಾಗಿತ್ತು ಆದರೆ, ಅಂದು ಪಾಲಿಕೆ ತೋರಿದ್ದ ಉತ್ಸಾಹ ಅಂದಿಗಷ್ಟೇ ಸೀಮಿತವಾಗಿದ್ದು ಇದು ವಿಪರ್ಯಾಸ ಎನ್ನುವಂತಾಗಿದೆ.

ಈ ವಿಚಾರದಲ್ಲಿ ಪಾಲಿಕೆ ಕಾರ್ಯವೈಖರಿಯು 'ಆರಂಭದಲ್ಲಿ ಶೂರತ್ವ, ನಂತರದಲ್ಲಿ ಜಡತ್ವ' ಎನ್ನುವಂತಾಗಿದೆ. ಮಾ.12ರಂದು ಬೆಳ್ಳಂಬೆಳಗ್ಗೆ ಪೊಲೀಸ್ ಭದ್ರತೆಯೊಂದಿಗೆ ಪಾಲಿಕೆ ವಲಯ ಕಚೇರಿ 5ರ ಅಧಿಕಾರಿ ಸಿಬ್ಬಂದಿ ಸಮರ ಸಾರಿದ ರೀತಿಯಲ್ಲಿ ವಿಜಯನಗರ 2ನೇ ಹಂತದ ಹೈಟೆನ್ಷನ್ ರಸ್ತೆಯಲ್ಲಿ (ವಾಟರ್ ಟ್ಯಾಂಕ್ ಸಮೀಪ–ಎಸ್‌ಬಿಐ ಬ್ಯಾಂಕ್ ವಿಜಯನಗರ ಶಾಖೆ ಎದುರು) ಹೈಟೆನ್ಷನ್ ಲೈನ್ ಕೆಳಗೆ ಹಲವು ವರ್ಷಗಳಿಂದ ನಡೆಯುತ್ತಿದ್ದ ಫುಡ್‌ಸ್ಟಾಲ್‌ಗಳನ್ನು ನೆಲಸಮಗೊಳಿಸಿದ್ದರು.

ಆ ಬಳಿಕ ಅದೇ ರೀತಿಯಲ್ಲಿ ರಿಂಗ್ ರಸ್ತೆ ಜಂಕ್ಷನ್ ಸಮೀಪ ಹೈಟೆನ್ಷನ್ ಲೈನ್ ಕೆಳಗೆಯೇ ಸ್ಟಾಲ್‌ಗಳನ್ನು ಹಾಕಲು ಗಿಡಗಂಟಿ ತೆರವು ಕಾರ್ಯ ನಡೆಸುತ್ತಿದ್ದರೂ ಪಾಲಿಕೆಯವರು ಅತ್ತ ತಿರುಗಿಯೂ ನೋಡಲಿಲ್ಲ. ಈ ಬಗ್ಗೆ ಪತ್ರಿಕೆಯು ಪಾಲಿಕೆ ವಲಯ ಕಚೇರಿಯ ಸಂಪರ್ಕಿಸಿದರೆ ಅವರಿಂದ ಸಿಕ್ಕ ಉತ್ತರ ಆ ಬಗ್ಗೆ ನಮಗೆ ಮಾಹಿತಿಯೇ ಇಲ್ಲ ಎಂಬುದಾಗಿತ್ತು. ಸ್ಟಾಲ್‌ಗಳನ್ನು ಹಾಕಿಕೊಳ್ಳಲು ಸಿದ್ಧತೆ ನಡೆಸುತ್ತಿರುವ ಬಗ್ಗೆ 'ಮಿತ್ರ'ನಲ್ಲಿ ಸಹ ವರದಿ ಪ್ರಕಟಿಸಲಾಗಿತ್ತು. ಅದಾಗ್ಯೂ ಸದರಿ ವಲಯ ಕಚೇರಿಯವರು ಕ್ರಮ ವಹಿಸದ ಹಿನ್ನೆಲೆಯಲ್ಲಿ ಅದೇ ರಸ್ತೆ, ಅದೇ ಹೈಟೆನ್ಷನ್ ಲೈನ್ ಕೆಳಗೆ ರಿಂಗ್ ರಸ್ತೆ ಜಂಕ್ಷನ್ ಸಮೀಪದಲ್ಲಿ ಈಗ ವ್ಯಾಪಾರ ಆರಂಭಿಸಲಾಗಿದೆ.

ಈ ಬಗ್ಗೆ 'ಮೈಸೂರು ಮಿತ್ರ' ವಿಚಾರಿಸಲು ಪಾಲಿಕೆ ವಲಯ ಕಚೇರಿ 5ರ ಅಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಿದರೆ ಅವರು ವಲಯ ಆಯುಕ್ತರ ಬಳಿ ಮಾತನಾಡುವಂತೆ ಹೇಳಿದರು. ಅಂತೆಯೇ ವಲಯ ಆಯುಕ್ತರಿಗೆ ಕರೆ ಮಾಡಿದರೆ ಅವರು ಸ್ವೀಕರಿಸಲಿಲ್ಲ. ಅಧಿಕಾರಿಗಳು ಕರೆ ಸ್ವೀಕರಿಸು ವುದು ಕಡ್ಡಾಯ ಎಂಬ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರ ಆದೇಶ ಬಹುಶಃ ಮೈಸೂರು ನಗರ ಪಾಲಿಕೆ ಅಧಿಕಾರಿಗಳಿಗೆ ಅನ್ವಯಿಸುವುದಿಲ್ಲ ಅನ್ನಿಸುತ್ತದೆ.

ಹೈಟೆನ್ಷನ್ ಲೈನ್ ಕೆಳಗೆಯೇ ಮತ್ತೆ ವ್ಯಾಪಾರ–ವಹಿವಾಟು ಆರಂಭಿಸಲು ಸಜ್ಜುಗೊಳ್ಳುವ ಬಗ್ಗೆ ಪತ್ರಿಕೆ ವರದಿ ಪ್ರಕಟಿಸಿದ ಬಳಿಕವೂ ವಲಯ ಕಚೇರಿ ಅಧಿಕಾರಿ ವರ್ಗ ಕ್ರಮ ವಹಿಸದೇ ಇರುವ ಬಗ್ಗೆ ಪ್ರಜ್ಞಾವಂತ ನಾಗರಿಕರು ಬೇಸರ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ರಸ್ತೆಬದಿ ವ್ಯಾಪಾರಸ್ಥರಿಗೆ ಸೂಕ್ತ ಸ್ಥಳ ಗೊತ್ತುಪಡಿಸುವ, ಅವರನ್ನು ನಿಯಂತ್ರಿಸುವ ಕಾರ್ಯವನ್ನು ಪಾಲಿಕೆ ಮಾಡದೇ ಇರುವುದೇ ಈ ದುಸ್ಥಿತಿಗೆ ಕಾರಣ ಎಂದು ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅದೇ ಹೈಟೆನ್ಷನ್ ಲೈನ್‌ನ ಮತ್ತೊಂದು ಸ್ಥಳದಲ್ಲಿ ವ್ಯಾಪಾರ ಆರಂಭಿಸುತ್ತಿದ್ದರೂ ಪಾಲಿಕೆ ಮೌನಕ್ಕೆ ಶರಣಾಗಿರುವುದು ವಿಪರ್ಯಾಸ. ಯಾವುದೇ ಸಂದರ್ಭದಲ್ಲಿ ಭಾರೀ ಅನಾಹುತ ಸಂಭವಿಸಲೂ ಬಹುದು. ಇಲ್ಲಿಗೆ ಭೇಟಿ ನೀಡುವ ಗ್ರಾಹಕರು, ತಮ್ಮ ವಾಹನಗಳನ್ನು ಪಕ್ಕದಲ್ಲೇ ಹಾದು ಹೋಗಿರುವ ರಿಂಗ್ ರಸ್ತೆಯ ಸರ್ವೀಸ್ ರಸ್ತೆಯ ಎರಡು ಬದಿಯಲ್ಲಿ ಪಾರ್ಕಿಂಗ್ ಮಾಡಿದರೆ ಸಂಚಾರ ದಟ್ಟಣೆ ಉಂಟಾಗಲಿದೆ ಯಾವುದೇ ದೃಷ್ಟಿಯಲ್ಲೂ ವ್ಯಾಪಾರಕ್ಕೆ ಇದು ಸೂಕ್ತ ಸ್ಥಳವಲ್ಲ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದ್ದಾರೆ.


ಹೈಟೆನ್ಷನ್ ಲೈನ್ ಕೆಳಗೆ ಹೀಗೆ ಸ್ಟಾಲ್ ಹಾಕಿಕೊಳ್ಳಲು ಅವಕಾಶ ಇಲ್ಲ. ಅದರಲ್ಲೂ ರಿಂಗ್ ರಸ್ತೆ ಸಮೀಪವಂತೂ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ. ಪಾಲಿಕೆಗೆ ಸೂಚನೆ ನೀಡಿ ತೆರವುಗೊಳಿಸಲು ಕ್ರಮ ವಹಿಸಲಾಗುವುದು. ಫುಟ್‌ಪಾತ್, ಪಾರ್ಕ್‌ನಲ್ಲಿ ಆ ರೀತಿ ಸ್ಟಾಲ್‌ಗಳನ್ನು ಹಾಕಿಕೊಳ್ಳಲು ಕಾನೂನಿನಲ್ಲಿ ಅವಕಾಶವಿಲ್ಲ. ಹಾಗಾಗಿಯೇ ಈ ಹಿಂದಿನ ಸ್ಥಳದಿಂದ ಪಾಲಿಕೆಯು ತೆರವು ಮಾಡಿಸಿತ್ತು. ಈಗ ಬೇರೆ ಕಡೆ ಅಂತಹದ್ದೇ ಸ್ಥಳದಲ್ಲಿ ಸ್ಟಾಲ್‌ಗಳನ್ನು ಹಾಕಿಕೊಂಡಿದ್ದರೆ ಅಲ್ಲಿಯೂ ತೆರವಿಗೆ ಕ್ರಮ ವಹಿಸಲಾಗುವುದು.

-ಜಿ.ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾಧಿಕಾರಿ, ಮೈಸೂರು.


ಹೈಟೆನ್ಷನ್ ಲೈನ್ ಕೆಳಗೆ ಹೆಚ್ಚು ಎತ್ತರಕ್ಕೆ ಬೆಳೆಯದಂತಹ ಗಿಡಗಳನ್ನು ಬಳಸಿ ಗಾರ್ಡನ್ ನಿರ್ಮಿಸಿ ಎಂದು ಸಲಹೆ–ಸೂಚನೆ ನೀಡಿದ್ದೇನೆ. ಇಡೀ ಮೈಸೂರಿನಲ್ಲಿ ಎಲ್ಲೆಲ್ಲಿ ಹೈಟೆನ್ಷನ್ ಲೈನ್ ಇದೆಯೋ ಅಲ್ಲಿ ಈ ರೀತಿಯಲ್ಲಿ ಗಾರ್ಡನ್ ನಿರ್ಮಿಸುವಂತೆ ಪಾಲಿಕೆ ಆಯುಕ್ತರಿಗೆ ಸೂಚನೆ ನೀಡಿದ್ದೇನೆ. ಇದರಿಂದ ನಗರದ ಸೌಂದರೀಕರಣದೊಂದಿಗೆ ಈ ರೀತಿಯ ಒತ್ತುವರಿಯೂ ತಪ್ಪುತ್ತದೆ ಎಂದು ನಿರ್ದೇಶಿಸಿದ್ದೆ. ಹೈಟೆನ್ಷನ್ ಲೈನ್ ಕೆಳಗೆಯೇ ಮತ್ತೆ ಸ್ಟಾಲ್‌ಗಳನ್ನು ಹಾಕಲು ಸಜ್ಜುಗೊಳಿಸುತ್ತಿರುವ ಬಗ್ಗೆ ನಾನು ಅಂದೇ ಪಾಲಿಕೆ ವಲಯ ಕಚೇರಿ 5ರ ಆಯುಕ್ತರಿಗೆ ಪರಿಶೀಲಿಸಿ ಕ್ರಮ ವಹಿಸುವಂತೆ ಸೂಚಿಸಿದ್ದೆ. ಅವರು ಮರುದಿನವೇ ಕ್ರಮ ವಹಿಸುವುದಾಗಿ ತಿಳಿಸಿದ್ದರು. ಈಗ ಮತ್ತೊಮ್ಮೆ ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ವಹಿಸಿರುವ ಕ್ರಮದ ಬಗ್ಗೆ ಪರಿಶೀಲಿಸುತ್ತೇನೆ.

-ನಿತೇಶ್ ಪಾಟೀಲ್, ಆಡಳಿತಾಧಿಕಾರಿಗಳು, ಮೈಸೂರು ಮಹಾನಗರ ಪಾಲಿಕೆ ಹಾಗೂ ಪ್ರಾದೇಶಿಕ ಆಯುಕ್ತರು. ಮೈಸೂರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	3 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಯೂತ್ (ತ) + ಉಸ್ತಾದ್ ಭಗತ್ ಸಿಂಗ್ (ತೆ)	2+2 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಆಯುಧ (ಕ)	4 ಪ್ರದರ್ಶನಗಳು

ಹಣಕ್ಕೆ ಮಂಗಳಮುಖಿಯ ಪೀಡಿಸಿದ ಯುವಕರು; ನಿರಾಕರಿಸಿದ್ದಕ್ಕೆ ಚಾಕುವಿನಿಂದ ಇರಿತ

ಮೈಸೂರು,ಮಾ.30(ಪಿಎಂ)– ಖರ್ಚಿಗೆ ಹಣ ನೀಡಿಲ್ಲವೆಂದು ಇಬ್ಬರು ಮಂಗಳಮುಖಿಯರ ಮೇಲೆ ಯುವಕರು ಹಲ್ಲೆ ನಡೆಸಿದ್ದು, ಈ ಪೈಕಿ ಓರ್ವ ಮಂಗಳಮುಖಿ ಮುಖಕ್ಕೆ ಚಾಕುವಿನಿಂದ ಇರಿದು ಗಾಯಗೊಳಿಸಲಾಗಿದೆ.

ಸಾತಗಳ್ಳಿ ಸಮೀಪದ ಅಮೃತ ಬಡಾವಣೆಯಲ್ಲಿ ಭಾನುವಾರ ರಾತ್ರಿ ಈ ಘಟನೆ ನಡೆದಿದ್ದು, ಪಾರಿ ಮತ್ತು ಅನಮ್ ಎಂಬ ಮಂಗಳಮುಖಿಯರ ಮೇಲೆ ಯುವಕರು ಹಲ್ಲೆ ನಡೆಸಿದ್ದಾರೆ. ಅಮೃತ ಬಡಾವಣೆಯ ನಿವಾಸಿಯಾದ ಅನಮ್ ಬಳಿ ಯುವಕರು ಖರ್ಚಿಗೆ ಹಣ ಕೇಳಿದ್ದಾರೆ. ಇದಕ್ಕೆ ಅನಮ್ ನಿರಾಕರಿಸಿದಾಗ, ಯುವಕರು ಗಲಾಟೆ ತೆಗೆದಿದ್ದಾರೆ. ಆಗ ಸ್ನೇಹಿತೆಯಾದ ಪಾರಿಯನ್ನು ಅನಮ್ ಕರೆ ಮಾಡಿ ಕರೆಸಿಕೊಂಡಿದ್ದು, ಗೌಸಿಯಾನಗರದ ನಿವಾಸಿಯಾದ ಪಾರಿ ಸ್ಥಳಕ್ಕೆ ಬಂದಾಗ ಹಲ್ಲೆ ನಡೆದಿದೆ. ಮುಖಕ್ಕೆ ಗಾಯವಾಗಿರುವ ಪಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಬ್ಬರು ಅಪಾಯದಿಂದ ಪಾರಾಗಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದು, ಹಲ್ಲೆ ನಡೆಸಿದ ಯುವಕರ ಬಂಧನಕ್ಕೆ ಶೋಧ ಕಾರ್ಯ ನಡೆಸುತ್ತಿರುವುದಾಗಿ ದಕ್ಷಿಣ ಠಾಣೆ ಪೊಲೀಸರು ತಿಳಿಸಿದರು.

ಪ್ರತ್ಯೇಕ ಘಟನೆ: ಈಜಲು ತೆರಳಿದ್ದ ಐವರು ಬಾಲಕರು ನೀರುಪಾಲು

ಬೆಳಗಾವಿ, ಮಾ. 30: ಈಜಲು ತೆರಳಿದ್ದ ಇಬ್ಬರು ಬಾಲಕರು ನೀರುಪಾಲಾದ ಘಟನೆ ಜಿಲ್ಲೆಯ ಹುಕ್ಕೇರಿ ತಾಲೂಕಿನ ಹಳೆಗುಡಗನಟ್ಟಿ ಗ್ರಾಮದ ಬಳಿಯ ಹಿಡಕಲ್ ಡ್ಯಾಮ್‌ನ ಹಿನ್ನೀರಲ್ಲಿ ನಡೆದಿದೆ. ಕೃಷ್ಣಾ ಖಾನಾಪುರಿ (14) ಮತ್ತು ಪ್ರಜ್ವಲ್ ಗೋಕಾರ್(13) ಮೃತ ಬಾಲಕರು. ಯಮಕನಮರಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕೇಸ್ ದಾಖಲಾಗಿದೆ.

ಹಿಡಕಲ್ ಜಲಾಶಯ ಹಿನ್ನೀರಿನಲ್ಲಿ ಬಾಲಕರು ಈಜಲು ತೆರಳಿದ್ದರು. ಈ ವೇಳೆ ಈಜಲು ಬಾರದೇ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಇಬ್ಬರ ಶವಗಳನ್ನ ಸ್ಥಳೀಯರು ಮತ್ತು ಪೊಲೀಸರು ಹೊರ ತೆಗೆದಿದ್ದಾರೆ. ಸ್ಥಳದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು.

ಮತ್ತೊಂದು ದುರಂತ: ಎತ್ತಿನ ಮೈತೊಳೆಯಲು ಹೋಗಿದ್ದ ಯುವಕ ಕೆರೆಯಲ್ಲಿ ಮುಳುಗಿ ದುರ್ಮರಣ ಹೊಂದಿರುವಂತಹ ಘಟನೆ ಗದಗ ತಾಲೂಕಿನ ಹಾತಲಗೇರಿ ಗ್ರಾಮದಲ್ಲಿ ನಡೆದಿದೆ. ಮುತ್ತಪ್ಪ ಮುರ್ಲಾಪುರ(20) ಮೃತ ಯುವಕ. ಗದಗ ಗ್ರಾಮೀಣ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ.

ಕೃಷಿ ಹೊಂಡಕ್ಕೆ ಬಿದ್ದು ಬಾಲಕಿ ಸಾವು: ಆಟವಾಡುವ ವೇಳೆ ಆಯತಪ್ಪಿ ಕೃಷಿ ಹೊಂಡಕ್ಕೆ ಬಿದ್ದು ಬಾಲಕಿ ಸಾವನ್ನಪ್ಪಿರುವಂತಹ ಘಟನೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಚನ್ನಗಾನಹಳ್ಳಿಯಲ್ಲಿ ನಡೆದಿದೆ. ಕೀರ್ತನಾ(10) ಮೃತ ಬಾಲಕಿ. ನಾಯಕನಹಟ್ಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈಜಲು ಹೋಗಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಾವು: ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಯಲಿಯೂರು ಗ್ರಾಮದಲ್ಲಿ ಸ್ನೇಹಿತರ ಜತೆ ಈಜಲು ಹೋಗಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿರುವಂತಹ ಘಟನೆ ನಡೆದಿದೆ. ಕುಶಾಲ್(16) ಮೃತ ವಿದ್ಯಾರ್ಥಿ. ಸದ್ಯ ಅಗ್ನಿಶಾಮಕದಳ ಸಿಬ್ಬಂದಿಯಿಂದ ಮೃತ ದೇಹಕ್ಕೆ ಶೋಧ ಕಾರ್ಯ ನಡೆದಿದೆ.

ಎಂಎಲ್‌ಸಿ ಸ್ಥಾನಕ್ಕೆ ನಿತೀಶ್‌ಕುಮಾರ್ ರಾಜೀನಾಮೆ!



ಪಾಟ್ನಾ: ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಇಂದು ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಆದರೆ, ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಬಿಹಾರದ ಸುದೀರ್ಘ ಅವಧಿಯ ಸಿಎಂ ಆಗಿರುವ ನಿತೀಶ್ ಕುಮಾರ್ ಕಳೆದ ತಿಂಗಳು ರಾಜ್ಯಸಭೆಗೆ ಆಯ್ಕೆಯಾಗುವ ಮೂಲಕ ಸಿಎಂ ಸ್ಥಾನವನ್ನು ತ್ಯಜಿಸುವ ಸುಳಿವು ನೀಡಿದ್ದರು.

ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ರಾಷ್ಟ್ರ ರಾಜಕಾರಣಕ್ಕೆ ಮರಳಲು ಸಜ್ಜಾಗಿರುವ ನಿತೀಶ್ ಕುಮಾರ್ ಅವರು ಎಷ್ಟು ದಿನಗಳವರೆಗೆ ಮುಂದುವರೆಯಲಿದ್ದಾರೆ ಎಂಬ ಬಗ್ಗೆ ಅನುಮಾನಗಳು ಮುಂದುವರೆದಿತ್ತು.

ಚುನಾಯಿತ ಸದಸ್ಯರು ರಾಜ್ಯಸಭೆಗೆ ಆಯ್ಕೆಯಾದ 14 ದಿನಗಳೊಳಗೆ ರಾಜ್ಯ ವಿಧಾನಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಬೇಕು ಎಂದು ನಿಯಮವಿದೆ. ಇದರ ಪ್ರಕಾರ ನಿತೀಶ್ ಕುಮಾರ್ ಇಂದು ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಈ ಮಧ್ಯೆ ಜನತಾದಳ (ಯುನೈಟೆಡ್) ಅಧ್ಯಕ್ಷ ಸ್ಥಾನಕ್ಕೆ ಬೇರೆ ಯಾವುದೇ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ನಿತೀಶ್ ಕುಮಾರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಾಮಪತ್ರ ಸಲ್ಲಿಸಲು ಮಾರ್ಚ್ 22 ಕೊನೆಯ ದಿನವಾಗಿತ್ತು. ಮಾರ್ಚ್ 23 ರಂದು ಪರಿಶೀಲನೆ ನಡೆಸಲಾಗಿದ್ದು, ನಾಮಪತ್ರ ಹಿಂಪಡೆಯಲು ಇಂದು ಬೆಳಗ್ಗೆ 11 ಗಂಟೆಗೆ ಗಡುವು ನೀಡಲಾಗಿತ್ತು. ಅಂತಿಮವಾಗಿ ನಿತೀಶ್ ಕುಮಾರ್ ಅವರೇ ಸ್ಪರ್ಧೆಯಲ್ಲಿ ಇರುವುದರಿಂದ ಅವಿರೋಧವಾಗಿ ಆಯ್ಕೆಯಾದರು ಎಂದು ಅವರು ಪ್ರಕಟಿಸಿದರು.

ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯ ಉತ್ತಮವಾಗಿದೆ



ನವದೆಹಲಿ: ದೇಶದ ಆರ್ಥಿಕತೆಯ ಮೂಲಭೂತ ಅಂಶಗಳು ಬಲಿಷ್ಠವಾಗಿವೆ ಮತ್ತು ಇತರ ಉದಯೋನ್ಮುಖ ಮಾರುಕಟ್ಟೆ ಆರ್ಥಿಕತೆಗಳಿಗೆ ಹೋಲಿಸಿದರೆ, ಅಮೆರಿಕದ ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯ ಸಂಪೂರ್ಣವಾಗಿ ಉತ್ತಮ ವಾಗಿ ಸಾಗುತ್ತಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಹೇಳಿದ್ದಾರೆ.

ಫೆಬ್ರವರಿ 28, 2026 ರಂದು ಪಶ್ಚಿಮ ಏಷ್ಯಾ ಸಂಘರ್ಷ ಪ್ರಾರಂಭವಾದಾಗಿನಿಂದ, ರೂಪಾಯಿ ಮೌಲ್ಯವು ಶೇಕಡಾ 4.1 ರಷ್ಟು ಕುಸಿದಿದ್ದು, ಇಂದು ಇತಿಹಾಸದಲ್ಲೇ ಮೊದಲ ಬಾರಿಗೆ ಪ್ರತಿ ಡಾಲರ್ ಗೆ 95 ರೂಪಾಯಿಗೆ ತಲುಪಿದೆ.

ರೂಪಾಯಿ ಅಪಮೌಲ್ಯೀಕರಣದ ಕುರಿತು ಇಂದು ಲೋಕಸಭೆಯಲ್ಲಿ ಪೂರಕ ಪ್ರಶ್ನೆಗೆ ಉತ್ತರಿಸಿದ ಸೀತಾರಾಮನ್ ಅವರು, ಭಾರತದ ಆರ್ಥಿಕತೆ ಬಲಿಷ್ಠವಾಗಿದೆ, ನಮ್ಮ ಆರ್ಥಿಕ ಪರಿಸ್ಥಿತಿ ಬಲಿಷ್ಠವಾಗಿದೆ ಮತ್ತು ಇಡೀ ಜಗತ್ತು ನಮ್ಮ ಹಣಕಾಸಿನ ಕೊರತೆ ನಿರ್ವಹಣೆಯನ್ನು ಹೊಗಳುತ್ತಿದೆ. ನಮ್ಮ ವಿದೇಶೀ ವಿನಿಮಯ ಮೀಸಲು ಸಹ ಬಲಿಷ್ಠವಾಗಿದೆ ಎಂದರು.

ಇತರ ಉದಯೋನ್ಮುಖ ಆರ್ಥಿಕತೆಗಳೊಂದಿಗೆ ಹೋಲಿಸಿದರೆ, ರೂಪಾಯಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಮತ್ತು ಅದರ ಮೌಲ್ಯ ಸಂಪೂರ್ಣವಾಗಿ ಉತ್ತಮವಾಗಿದೆ" ಎಂದರು.

ಸೀತಾರಾಮನ್ ನೀಡಿದ ಲಿಖಿತ ಉತ್ತರದಲ್ಲಿ, ರೂಪಾಯಿ ಅಪಮೌಲ್ಯೀಕರಣವು ಕೇವಲ ಐಎನ್‌ಆರ್ ಗೆ ಸೀಮಿತವಾಗಿಲ್ಲ. ಏಕೆಂದರೆ ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಆರಂಭವಾದ ನಂತರ, ಏಷ್ಯಾದ ಪ್ರಮುಖ ಕರೆನ್ಸಿಗಳು ಸಹ ಅಪಮೌಲ್ಯಗೊಂಡಿವೆ ಎಂದರು.

ದಕ್ಷಿಣ ಕೊರಿಯಾದ ವೊನ್, ಥಾಯ್ ಬಹ್ತ್ ಮತ್ತು ಫಿಲಿಪೈನ್ ಪೆಸೊ ಮುಂತಾದ ಕೆಲವು ಕರೆನ್ಸಿಗಳು ರೂಪಾಯಿಗಿಂತ ಡಾಲರ್ ಎದುರು ಕ್ರಮವಾಗಿ ಶೇ 4.6, ಶೇ 5.5 ಮತ್ತು ಶೇ 4.8 ರಷ್ಟು ಕುಸಿದಿವೆ ಎಂದು ಅವರು ಹೇಳಿದರು.

ಸರ್ಕಾರ ಮತ್ತು ಆರ್‌ಬಿಐ ರೂಪಾಯಿ ಮೌಲ್ಯವನ್ನು ಸೂಕ್ಷ್ಮವಾಗಿ ಗಮನಿಸುತ್ತಿವೆ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಹೇಳಿದರು.

ಸೇತುವೆಯಿಂದ ಹಳ್ಳಕ್ಕೆ ಬಿದ್ದ ಖಾಸಗಿ ಬಸ್; 36 ಜನರಿಗೆ ಗಾಯ

ಶಿವಮೊಗ್ಗ: ಶಿವಮೊಗ್ಗ ಜಿಲ್ಲೆಯಲ್ಲಿ ಸೋಮವಾರ ಖಾಸಗಿ ಬಸ್ಸೊಂದು ಚಾಲಕನ ನಿಯಂತ್ರಣ ತಪ್ಪಿ ಸೇತುವೆಯಿಂದ ಉರುಳಿ ಬಿದ್ದಿದ್ದು, ಅಪಘಾತದಲ್ಲಿ ಮೂವತ್ತಾರು ಜನ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಇಂದು ಮಧ್ಯಾಹ್ನ 1.30 ರ ಸುಮಾರಿಗೆ ಭದ್ರಾವತಿ ತಾಲ್ಲೂಕಿನ ವೀರಾಪುರ ಗ್ರಾಮದ ಕಾಗೆಹಳ್ಳ ಬಳಿ ಈ ಅಪಘಾತ ಸಂಭವಿಸಿದೆ ಎಂದು ಪೊಲೀಸರು ಹೇಳಿದ್ದಾರೆ.

ಪೊಲೀಸರ ಪ್ರಕಾರ, ದಾವಣಗೆರೆ ಜಿಲ್ಲೆಯ ಚನ್ನಗಿರಿಯಿಂದ ಭದ್ರಾವತಿಗೆ ತೆರಳುತ್ತಿದ್ದ ಖಾಸಗಿ ಬಸ್, ಕಾಗೇಹಳ್ಳದ ಬಳಿ ಬಸ್ ಚಾಲಕನ ನಿಯಂತ್ರಣ ತಪ್ಪಿ ತಡೆಗೋಡೆಗೆ ಡಿಕ್ಕಿ ಹೊಡೆದು, ಸೇತುವೆಯಿಂದ ಹಳ್ಳಕ್ಕೆ ಬಿದ್ದಿದೆ.

ಈ ಸಂಬಂಧ ಭದ್ರಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಿಕ್ಷಣದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಂಡು ನಾಯಕತ್ವದ ಗುಣ ಬೆಳೆಸಿಕೊಳ್ಳಿ

ಗುರುವಂದನಾ ಕಾರ್ಯಕ್ರಮದಲ್ಲಿ ಮಧುರ ವೀಣಾಪುರೆ


ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಕಾಲೇಜಿನ ಹಿರಿಯ ವಿದ್ಯಾರ್ಥಿನಿಯರ ಸಂಘದ ವತಿಯಿಂದ ಗುರುವಂದನಾ ಮತ್ತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು,ಮಾ.30(ಎಂಟಿವೈ)– ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ನಾಯಕತ್ವ ಗುಣ ಬೆಳೆಸಿಕೊಳ್ಳಬೇಕು ಎಂದು ಬೆಂಗಳೂರಿನ ಅಪರಾಧ ತನಿಖಾ ವಿಭಾಗದ ಅಧೀಕ್ಷಕರಾದ ಎಂ.ಎಲ್. ಮಧುರ ವೀಣಾ ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಕಾಲೇಜಿನ ಹಿರಿಯ ವಿದ್ಯಾರ್ಥಿನಿಯರ ಸಂಘ ಆಯೋಜಿಸಿದ್ದ ಗುರುವಂದನಾ ಮತ್ತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದರೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಕೇವಲ ಶಿಕ್ಷಣಕ್ಕೆ ಮಾತ್ರ ಸೀಮಿತಗೊಂಡರೆ ವಿಕಾಸ ಹೊಂದಲು ಸಾಧ್ಯವಿಲ್ಲ. ಈ ಹಿನ್ನೆಲೆ ಯಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅನಿವಾರ್ಯ. ಅದರಲ್ಲೂ ವಿದ್ಯಾರ್ಥಿನಿಯರು ಆತ್ಮ ರಕ್ಷಣಾ ಕಲೆಯಾದ ಕರಾಟೆ ಸೇರಿದಂತೆ ರಕ್ಷಣಾ ಕಲೆಯನ್ನು ಕಲಿತುಕೊಳ್ಳಬೇಕು. ಪಠ್ಯೇತರ ಚಟುವಟಿಕೆಯಿಂದಾಗಿ ನಾಯಕತ್ವ ಗುಣ ಮೈಗೂಡಿಸಿಕೊಳ್ಳಬಹುದು ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿರುವುದು ಒಳ್ಳೆ ಬೆಳವಣಿಗೆಯಾಗಿದೆ. ವಿದ್ಯಾರ್ಥಿನಿಯರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರನ್ನು ಪ್ರೇರಣೆಯಾಗಿ ಸ್ವೀಕರಿಸಿ, ತಾವು ಸಾಧನೆ ಮಾಡುವತ್ತ ಗಮನ ಕೇಂದ್ರೀಕರಿಸಬೇಕು. ಅಲ್ಲದೆ, ಯಾವುದೇ ಕ್ಷೇತ್ರದಲ್ಲಾದರೂ ಮಹಿಳೆಯರ ಮೇಲೆ ದೌರ್ಜನ್ಯ ಪ್ರಕರಣ ಕಂಡು ಬಂದರೆ, ಅದನ್ನು ಒಕ್ಕೊರಲಿನಿಂದ ಖಂಡಿಸಬೇಕು. ದೌರ್ಜನ್ಯ ನಡೆಯುತ್ತಿದ್ದರೂ ಧ್ವನಿ ಎತ್ತದೆ ಇದ್ದರೆ ಮುಂದಿನ ದಿನಗಳಲ್ಲಿ ಮಹಿಳೆಯರು ಮತ್ತಷ್ಟು ಸಂಕಷ್ಟ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಉದ್ಯಮಿ ಅನಿತಾ ಪ್ರಸಾದ್ ಮಾತನಾಡಿ, ವೇಗವಾಗಿ ಚಲಿಸುತ್ತಿರುವ ಸಮಾಜದಲ್ಲಿ ನಾವು ಹೇಗೆ ತಮ್ಮ ಕೆಲಸಗಳನ್ನು ಪಡೆದುಕೊಳ್ಳಬೇಕು ಎಂದು ಆಲೋಚಿಸಬೇಕು. ಇಂದು ಸಾಧನೆ ಮಾಡಲು ಸಾಕಷ್ಟು ಅವಕಾಶಗಳಿವೆ. ಅದನ್ನು ಹುಡುಕಿಕೊಂಡು ಕಠಿಣ ಶ್ರಮವಹಿಸಿ ಸಾಧನೆ ಮಾಡುವತ್ತ ಮುನ್ನುಗ್ಗಬೇಕು ಎಂದರು.

ಬೆಂಗಳೂರಿನ ವಾಣಿಜ್ಯ ತೆರಿಗೆ ಇಲಾಖೆ ಪರಿವೀಕ್ಷಕರಾದ ಬಿ.ವನಿತಾ ಬಾಯಿ ಮಾತನಾಡಿ, ತನ್ನ ಸಾಧನೆಗಳಿಗೆ ಶಿಕ್ಷಕರ ಮಾರ್ಗದರ್ಶನವೇ ಬುನಾದಿಯಾಗಿದೆ. ಜೀವನವನ್ನು ಇಚ್ಛೆಗೆ ತಕ್ಕಂತೆ ರೂಡಿಸಿಕೊಳ್ಳಲು ಪೂರ್ವ ತಯಾರಿಗಳನ್ನು ನಡೆಸುವುದು ಮುಖ್ಯ ಎಂದು ತಿಳಿಸಿದರು.

ಮೈಸೂರು ಮೆಡಿಕಲ್ ಕಾಲೇಜಿನ ಸಹಾಯಕ ಆಡಳಿತ ಅಧಿಕಾರಿ ಟಿ.ಎನ್. ಶಶಿಕಲಾ ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳಿಗೆ ದಾಸರಾಗದೇ ಪುಸ್ತಕ ಓದುವ ಹವ್ಯಾಸ ರೂಡಿಸಿಕೊಳ್ಳಬೇಕು. ಓದಿನಿಂದ ಜ್ಞಾನ ವೃದ್ಧಿಯಾಗಲಿದ್ದು, ಇದು ಶೈಕ್ಷಣಿಕ ಪ್ರಗತಿಯೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಸಹಾಯವಾಗುತ್ತದೆ. ಮೊಬೈಲ್ ಬಳಕೆ ಅಗತ್ಯಕ್ಕೆ ಮಾತ್ರ ಸೀಮಿತವಾಗಿರಬೇಕು. ಅದೇ ಜೀವನವಾಗಬಾರದು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಂ ಎಸ್ ಅನಿತಾ ವಹಿಸಿದ್ದರು. ಇದೇ ಸಂದರ್ಭದಲ್ಲಿ ಹಿರಿಯ ವಿದ್ಯಾರ್ಥಿನಿಯರ ಸಂಘದ ಅಧ್ಯಕ್ಷರಾದ ಎನ್. ಅನಸೂಯ, ನಿರ್ದೇಶಕರಾದ ಡಾ.ವಿ. ಸೌಭಾಗ್ಯ ಲಕ್ಷ್ಮಿ, ಡಾ.ವಿಜಯಲಕ್ಷ್ಮಿ, ಕಾರ್ಯದರ್ಶಿ ಡಾ.ಬಿ.ಪಿ.ಅಶ್ವಿನಿ, ಸಹ ಕಾರ್ಯದರ್ಶಿ ಡಾ.ಕೆ.ಎ.ಲತಾ, ಖಜಾಂಚಿ ಬಿ.ಎಸ್.ರತ್ನ ಉಪಸ್ಥಿತರಿದ್ದರು.

ಶ್ರೀ ಮಹಾವೀರ ತೀರ್ಥಂಕರರ 2625ನೇ ಜಯಂತಿ; ಶಿಕ್ಷಕಿ ಸುಜಾತ ಆರ್.ಶೆಟ್ಟಿಯವರಿಗೆ ಶ್ರೀ ಮಹಾವೀರ ಅಹಿಂಸಾ ಪ್ರಶಸ್ತಿ


ಶ್ರೀ ಮಹಾವೀರ ತೀರ್ಥಂಕರರ 2625ನೇ ಜಯಂತಿ ಅಂಗವಾಗಿ ಸಮಾಜ ಸೇವಕಿ, ಶಿಕ್ಷಕಿ ಸುಜಾತ ಆರ್.ಶೆಟ್ಟಿ ಅವರಿಗೆ ಈ ಸಾಲಿನ 'ಶ್ರೀ ಮಹಾವೀರ ಅಹಿಂಸಾ ಪ್ರಶಸ್ತಿ'ಯನ್ನು ಸೋಮವಾರ ಪ್ರದಾನ ಮಾಡಲಾಯಿತು.

ಮೈಸೂರು, ಮಾ.30(ಎಸ್‌ಪಿಎನ್)– ಮೈಸೂರಿನ ಚಂದ್ರಗುಪ್ತ ರಸ್ತೆಯಲ್ಲಿನ ಎಂ.ಎಲ್.ವರ್ಧಮಾನಯ್ಯ ಸ್ಮಾರಕ ಭವನದಲ್ಲಿ ಶ್ರೀ ಮಹಾವೀರ ಸೇವಾ ಸಂಸ್ಥಾನ್ ವತಿಯಿಂದ ಶ್ರೀ ಮಹಾವೀರ ತೀರ್ಥಂಕರರ 2625ನೇ ಜಯಂತಿ ಹಾಗೂ ಸಮಾಜ ಸೇವಕಿ, ಶಿಕ್ಷಕಿ ಸುಜಾತ ಆರ್.ಶೆಟ್ಟಿ ಅವರಿಗೆ ಈ ಸಾಲಿನ 'ಶ್ರೀ ಮಹಾವೀರ ಅಹಿಂಸಾ ಪ್ರಶಸ್ತಿ'ಯನ್ನು ಸೋಮವಾರ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶಿಕ್ಷಕಿ ಸುಜಾತ ಆರ್.ಶೆಟ್ಟಿ, ವರ್ಧಮಾನ್ ಮಹಾವೀರರು ಬೋಧಿಸಿದ ತತ್ವ ಸಿದ್ಧಾಂತಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬಂದಿದ್ದೇನೆ. ಸಮುದಾಯದಲ್ಲಿ ಕೆಲಸ ಮಾಡುವಾಗ ಆ ಕೆಲಸ ನಾಲ್ಕು ಜನಕ್ಕೆ ಅನುಕೂಲವಾಗುತ್ತದೆ ಎಂಬುದನ್ನು ಅರಿತು, ಗುರುತಿಸಿ ಸನ್ಮಾನಿಸಿರುವುದಕ್ಕೆ ಇಂದು ಈ ವೇದಿಕೆಯಲ್ಲಿ ಪ್ರಶಸ್ತಿ ನೀಡಿರುವುದೇ ಸಾಕ್ಷಿ ಎಂದರು.

ಈ ಬಾರಿಯ ಶ್ರೀ ಮಹಾವೀರ ಅಹಿಂಸಾ ಪ್ರಶಸ್ತಿಗೆ ನನ್ನ ಸೇವೆಯನ್ನು ಗುರುತಿಸಿರುವುದಕ್ಕೆ ಅತೀವ ಸಂತೋಷವಾಗುತ್ತಿದೆ. ಬೆಳ್ತಂಗಡಿ ತಾಲೂಕಿನವಳಾದ ನಾನು, ಧರ್ಮಸ್ಥಳದೊಂದಿಗೆ ನಿಕಟ ಸಂಪರ್ಕ ಹೊಂದಿದ್ದೇನೆ. ಮೊದಮೊದಲು ದೇವರಿಗೆ ದೂರದಿಂದಲೇ ಕೈಮುಗಿಯುತ್ತಿದ್ದೆ. ಸಮಾಜ ನನ್ನ ಸೇವೆಯನ್ನು ಗುರುತಿಸಲು ಶುರು ಮಾಡಿದಾಗ ನಾವು ಸಮುದಾಯಕ್ಕಾಗಿ ಮತ್ತಷ್ಟು ಕೆಲಸ ಮಾಡಲು ಪ್ರೇರಣೆ ನೀಡುತ್ತಿದೆ ಎಂದರು.

ಮೈಸೂರು ತಾಲೂಕಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿ ವ್ಯಾಸಂಗ ಮಾಡಿ ಅತೀ ಹೆಚ್ಚು ಅಂಕಗಳಿಸಿದ 300ಕ್ಕೂ ವಿದ್ಯಾಥಿಗಳನ್ನು ಗುರುತಿಸಲಾಗುತ್ತಿದೆ. ಅಲ್ಲದೆ, ಶಿಕ್ಷಣ, ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಸಮುದಾಯಕ್ಕಾಗಿ ಕೆಲಸ ಮಾಡುವುದೆಂದರೆ ನನಗೆ ತೃಪ್ತಿ ನೀಡುತ್ತದೆ. ಹಾಗಾಗಿ ನಾವು ಸಂಪಾದಿಸಿದ ಸ್ವಲ್ಪ ಹಣವನ್ನು ಸಮಾಜಕ್ಕೆ ನೀಡಿದರೆ ಅದು ತಪ್ಪಲ್ಲ. ಧರ್ಮಸ್ಥಳದಲ್ಲಿ ಗೊಮ್ಮಟ ಮೂರ್ತಿ ಉದ್ಘಾಟನೆ ಸಂದರ್ಭದಲ್ಲಿ ಹದಿನೈದು ದಿನ ಸ್ವಯಂ ಸೇವಕಿಯಾಗಿ ಕೆಲಸ ಮಾಡಿದ್ದೇನೆ. ಆ ವೇಳೆ ಡಾ. ವಿರೇಂದ್ರ ಹೆಗಡೆ ಅವರ ಕುಟುಂಬವನ್ನು ಹತ್ತಿರದಿಂದ ಬಲ್ಲವಳಾಗಿದ್ದೇನೆ ಎಂದರು.

ಮಕ್ಕಳಿಲ್ಲದ ನಾನು, ಬಡ ಮಕ್ಕಳಿಗೆ ಟ್ಯೂಷನ್ ಆರಂಭಿಸಿದಾಗ ನನ್ನೊಂದಿಗೆ ನಿಂತ ಹಳೆ ವಿದ್ಯಾರ್ಥಿಗಳಿಗೆ ಈ ಪ್ರಶಸ್ತಿಯನ್ನು ಸಮರ್ಪಿಸುತ್ತೇನೆ. ಸೇವೆಗೆ ಇಳಿದ ಬಳಿಕ ಯಾವುದೇ ಅಡೆ ತಡೆಗಳೂ ದೊಡ್ಡದಾಗುವುದಿಲ್ಲ. ನಮ್ಮ ಆತ್ಮಕ್ಕೆ ಅಂತಹ ಮಹಾನ್ ಶಕ್ತಿಯಿದೆ. ಈಗಾಗಲೇ 19 ಮಂದಿ ಬಡ ವಿದ್ಯಾರ್ಥಿಗಳನ್ನು ಓದಿಸುತ್ತಿದ್ದೇವೆ. ಇದಲ್ಲದೇ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಪಡೆದವರಿಗೆ ಬೆಂಬಲವಾಗಿಯೂ ನಿಲ್ಲುತ್ತೇವೆ ಎಂದು ತಿಳಿಸಿದರು.

ಈ ವೇಳೆ ಶ್ರೀ ದಿಗಂಬರ ಜೈನ ಸಮಾಜದ ಅಧ್ಯಕ್ಷ ಎಂ.ಆರ್.ಸುನೀಲ್ ಕುಮಾರ್, ಪದ್ಮಶ್ರೀ ಜೈನ ಮಹಿಳಾ ಸಮಾಜದ ಅಧ್ಯಕ್ಷೆ ಜೆ.ಎನ್.ನಂದಿನಿ ಸಂಜಯ್, ಎಂ.ಎಲ್. ಜೈನ್ ಬೋರ್ಡಿಂಗ್ ಹೋಂ ಸಹ ಕಾರ್ಯದರ್ಶಿ ಜಯರತ್ನ, ಮುಖಂಡರಾದ ಅನಂತ ಪ್ರಸಾದ್ ಸೇರಿದಂತೆ ಇತರರಿದ್ದರು.


ಉದ್ಯಮಿಗಳು ಹಾಗೂ ಯುವಮುಖಂಡರಾದ
ಶ್ರೀ ವಿನೋದ್ ಕುಮಾರ್ ವಿ ರವರಿಗೆ
ಹುಟ್ಟುಹಬ್ಬದ ಶುಭಾಷಯಗಳು
ಶುಭಕೋರುವವರು:–
ಶ್ರೀ ವಿನಯ್ ನಾರಾಯಣಸ್ವಾಮಿ
ಮಾಲೀಕರು :– ಎಸ್, ಎಂ, ಪ್ರಾಪರ್ಟೀಸ್ & ಕನ್ಸ್ಟ್ರಕ್ಷನ್